ಜನಾರೋಗ್ಯ ಆಂದೋಲನ - ಕರ್ನಾಟಕ

ಆರೋಗ್ಯದ ಹಕ್ಕು! ಮಾನವ ಹಕ್ಕು!

ಆರೋಗ್ಯ ಸುದ್ದಿ ಪತ್ರ ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಸಂಚಿಕೆ : 8 **ಮಾರ್ಚ್2011**

ಸಂಪಾದಕೀಯ

ಸೀರೆ ಹಂಚಿದರೆ ಸಮಗ್ರ ಪ್ರಾಥಮಿಕ ಆರೋಗ್ಯ ಸಿಗುವುದೆ?

ನಮ್ಮ ದೇಶ ಪ್ರಜಾಪ್ರಭುತ್ವದ ದೇಶ ಇಲ್ಲಿ ಪ್ರಜೆಗಳೇ ಪ್ರಭುಗಳು ಎಂದು ಸಾರಿ ಸಾರಿ ನಮ್ಮ ಸಂವಿಧಾನ ಹೇಳುತ್ತಿದೆ. ಆದರೆ ಈ ದೇಶದ ವ್ಯವಸ್ಥೆಗೆ ಇದು ಕೇಳಿಸುತ್ತಿಲ್ಲ. ಪ್ರಜೆಗಳು ಪ್ರಭುಗಳಾಗಿ ಇರಬೇಕಾದ ದೇಶದಲ್ಲಿ ಶೇ 80 ರಷ್ಟು ಪ್ರಜೆಗಳು ಇಂದು ಕನಿಷ್ಠ ಸೌಕರ್ಯಗಳಾದ ಆರೋಗ್ಯ ಆಹಾರ, ನೀರು, ನೈರ್ಮಲ್ಯ, ವಸತಿ, ಉದ್ಯೋಗ ದೊರೆಯದೆ ಅಸಹಾಯಕರಾಗಿ ಉಳಿದಿದ್ದಾರೆ. ಇಂದು ದೇಶದ ಬಹುತೇಕ ಬಹುಜನರು ಸಮಗ್ರ ಪ್ರಾಥಮಿಕ ಆರೋಗ್ಯ ಪಾಲನೆ ಆರೈಕೆ ಸಿಗದೆ ಸಾಂಕ್ರಾಮಿಕ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಇದಕ್ಕೆ ಜೀವಂತ ಸಾಕ್ಷಿ 2010ರ ಅಕ್ಟೋಬರ್ ತಿಂಗಳಲ್ಲಿ ಆರೋಗ್ಯ ಸಚಿವರ ತವರು ಜಿಲ್ಲೆ ಬಳ್ಳಾರಿಯ ಹೊಸಪೇಟೆ ತಾಲ್ಲೂಕಿನ ಗಾದಿಗನೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಡೆಂಗ್ಯೂ, ಇಲಿಮೂತ್ರ ಜ್ವರಗಳು ಹರಡಿ ಸುಮಾರು 31 ಜನರು ಸಾವಿಗೀಡಾಗಿದ್ದಾರೆ! ಪ್ರಜೆಗಳೇ ಪ್ರಭುಗಳಾಗಿರಬೇಕಾದ ಈ ದೇಶದಲ್ಲಿ ಪ್ರಜೆಗಳ ಜೀವಕ್ಕೆ ಬೆಲೆ ಇಲ್ಲದಂತಾಗಿದೆ. ಈ ಸಾವುಗಳು ಕೇವಲ ಆಕಸ್ಮಿಕವಲ್ಲ ಇಡೀ ಬಳ್ಳಾರಿ ಜಿಲ್ಲೆಯಲ್ಲಿ ಸಾರ್ವಜನಿಕ ಆರೋಗ್ಯ ಸೇವೆ ಹೇಳತೀರದಷ್ಟು ಹದಗೆಟ್ಟಿದೆ. ಈಗಾಗಲೇ ಜನಾರೋಗ್ಯ ಆಂದೋಲನ ಕರ್ನಾಟಕವು ಬಳ್ಳಾರಿ ಜಿಲ್ಲೆಯಲ್ಲಿ ಅಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಿತಿಗತಿಯ ಬಗ್ಗೆ ಸಮರ್ಪಕವಾದ ಅಧ್ಯಯನ ನಡೆಸಿ, ಸಾರ್ವಜನಿಕ ಜನಸಂವಾದದಲ್ಲಿ ಈ ವಿಷಯವನ್ನು ಸಾರ್ವಜನಿಕವಾಗಿ ಚರ್ಚಿಸಿದೆ. ಅದಲ್ಲದೆ ಅದೇ ಜಿಲ್ಲೆಯವರಾದ ಆರೋಗ್ಯ ಸಚಿವರಿಗೂ ಮತ್ತು ಸಂಬಂಧಪಟ್ಟ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ದೂರು ಮತ್ತು ಬೇಡಿಕೆಗಳನ್ನು ಸಲ್ಲಿಸಲಾಗಿದೆ. ಆದರೆ ಇಲಾಖೆಯ ಅಧಿಕಾರಿಗಳು ಮತ್ತು ಆರೋಗ್ಯ ಸಚಿವರು ಕಂಡು ಕಾಣದ ಕುರುಡರಂತೆ ವರ್ತಿಸುತ್ತಿದ್ದಾರೆ!.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ತನ್ನ ಆದ್ಯ ಕರ್ತವ್ಯಗಳಾದ ಪ್ರಾಥಮಿಕ ಆರೋಗ್ಯ ಪಾಲನಾ ಕಾರ್ಯ ನಿರ್ವಹಿಸುತ್ತಿಲ್ಲ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಮೂಲಕ(**NRHM**) ನೂರಾರು ಕೋಟಿ ಹಣ ಹರಿದು ಬರುತ್ತಿದ್ದರೂ ಸಹ ಬಳ್ಳಾರಿ ಸೇರಿದಂತೆ ಬಹುತೇಕ ರಾಜ್ಯದ ಎಲ್ಲಾ ಕಡೆ ಅನುಷ್ಠಾನದಲ್ಲಾದ ಪ್ರಗತಿ ಬಹಳ ಕಡಿಮೆ. ಇದಕ್ಕೆಲ್ಲ ಪ್ರತಿಫಲ ಭುವನಹಳ್ಳಿ, ಗಾದಿಗನೂರು ಸುತ್ತಮುತ್ತ 31 ಬಡ ಜನರ ಸಾವು! ಇದು ಪ್ರಜಾಪ್ರಭುತ್ವದ ಕಗ್ಗೊಲೆಯಲ್ಲವೇ?

ಇತ್ತೀಚೆಗಿನ ರಾಷ್ಟ್ರೀಯ ಆರೋಗ್ಯ ಕುಟುಂಬ ಅಧ್ಯಯನ ಸಂಸ್ಥೆ **(ಮೂಲ:NHFS-3 ವರದಿ)** ತನ್ನ ಅಧ್ಯಯನದ ವರದಿಯನ್ನು ಬಹಿರಂಗ ಪಡಿಸಿದೆ. ಕರ್ನಾಟಕದಲ್ಲಿ 40 ಸಾವಿರ ಅಂಗನವಾಡಿಗಳಿವೆ. ಸಾವಿರಾರು ಬಡ ದಲಿತ, ಅಲ್ಪ ಸಂಖ್ಯಾತ ಕಂದಮ್ಮಗಳು ಈ ಕೇಂದ್ರಗಳಲ್ಲಿ ಇದ್ದಾರೆ. ಆದರೆ ಇಲ್ಲಿ ಸಿಗುತ್ತಿರುವ ಪಾಕೆಟ್ ಆಹಾರ ಮಕ್ಕಳು ಮುಟ್ಟುತ್ತಿಲ್ಲ. ಏಕೆಂದರೆ ನಮ್ಮ ಮಕ್ಕಳಿಗೆ ತಾಯಿ ಬಡಿಸುವ ಮನೆ ಊಟ ತಿಂದು ರೂಢಿ. ಎಲ್ಲೋ ಯಾರೋ ತಯಾರಿಸಿದ ನುಸಿಪುಡಿ ತಿನ್ನುವ ಅಭ್ಯಾಸ ಇಲ್ಲ. ಸಾವಿರಾರೂ ಪೋಷಕರು, ಸಂಘ/ಸಂಸ್ಥೆ/ಚಳುವಳಿಗಳ ಕಾರ್ಯಕರ್ತರು ಖುದ್ದು ಅಂಗನವಾಡಿ ಕಾರ್ಯಕರ್ತರೇ ಈ ಆಹಾರ ಪದ್ದತಿ ಸರಿ ಇಲ್ಲ ಎಂದು ಸಾರಿ ಹೇಳುತ್ತಿದ್ದಾರೆ. ನಮ್ಮ ರಾಜ್ಯದ ಸರ್ಕಾರ ಯಾವುದೋ ಒಂದು ಖಾಸಗಿ ಕಂಪನಿಯನ್ನು ಉದ್ದಾರ ಮಾಡುವುದಕ್ಕೋಸ್ಕರ ಗುತ್ತಿಗೆ ನೀಡಿದೆ. 6 ಕೋಟಿ ಜನ ಕನ್ನಡಿಗರ ಹಿತ ಕಾಯುವುದಕ್ಕಿಂತ ಒಂದು ಖಾಸಗಿ ಲಾಭಕೋರ ಕಂಪನಿಯೇ ಮುಖ್ಯವಾಗಿದೆ.

ಆದಗೆ, ಇದರಿಂದ ಆಗಿರುವ ಹಾನಿ ಏನು ಗೊತ್ತೆ? ಕರ್ನಾಟಕದಲ್ಲಿ ಮಕ್ಕಳ ಅಪೌಷ್ಠಿಕತೆಗೆ ದೇಶದಲ್ಲಿ ಮೂರನೇ ಸ್ಥಾನ! (ಬಿಹಾರ ಮತ್ತು ಮಧ್ಯಪ್ರದೇಶದ ನಂತರದ ಸ್ಥಾನ) ದಕ್ಷಿಣ ಭಾರತದಲ್ಲಿ ಕರ್ನಾಟಕದಲ್ಲಿ ಮಾತ್ರ ಈ ಕಂಪನಿ ತಯಾರಿಸಿ ಪ್ಯಾಕೆಟ್ ಆಹಾರ ಕೊಡುವ ಕೆಟ್ಟ ಆಹಾರ ಪದ್ಧತಿ ಜಾರಿಯಲ್ಲಿದೆ. ಇದನ್ನು ನಿಲ್ಲಿಸಿ. ಸ್ವಾಭಾವಿಕವಾದ ಆಹಾರ ನಮ್ಮ ಮಕ್ಕಳಿಗೆ ದೊರೆಯಬೇಕು ಎಂದು ಆಗ್ರಹಿಸುತ್ತಿವೆ

ಅಪೌಷ್ಠಿಕತೆ ಇರುವ ಮಕ್ಕಳಲ್ಲಿ ಶೇ.38 ರಷ್ಟು ಮಕ್ಕಳು 3 ವರ್ಷದ ಕೆಳಗಿನವರು, ಶೇ.88 ರಷ್ಟು ಮಕ್ಕಳು ದುರ್ಬಲರಾಗಿದ್ದರೆ, ಶೇ.38 ರಷ್ಟು ಮಕ್ಕಳಲ್ಲಿ ಬೆಳವಣಿಗೆ ಕುಂಠಿತವಾಗಿದೆ. ಶೇ.41 ರಷ್ಟು ಮಕ್ಕಳು ವಯಸ್ಸಿಗೆ ತಕ್ಕಂತೆ ತೂಕ ಹೊಂದಿಲ್ಲ. ಇದರಿಂದ ಸಮಗ್ರ ಶಿಶು ಕಲ್ಯಾಣ ಕಾರ್ಯಕ್ರಮ **(ICDS)** ನ ಪ್ರಮುಖ ಉದ್ದೇಶವನ್ನು ರಾಜ್ಯ ಸರ್ಕಾರ ಉಲ್ಲಂಘಿಸುವುದರ ಮೂಲಕ ಸಾವಿರಾರು ಕಂದಮ್ಮಗಳ ಅನಾರೋಗ್ಯಕ್ಕೆ /ಅಪೌಷ್ಟಿಕತೆಗೆ ಕಾರಣವಾಗಿದೆ.

ಮತ್ತೊಂದು ಅಪೌಷ್ಠಿಕತೆ ನಿವಾರಣೆ ಮಾಡುವ ದೊಡ್ಡ ಕಾರ್ಯಕ್ರಮವಾದ ಶಾಲೆಯಲ್ಲಿ ನಡೆಯುತ್ತಿರುವ ಮಧ್ಯಾಹ್ನ ಬಿಸಿಯೂಟ ಕಾರ್ಯಕ್ರಮದ ಬಗ್ಗೆ ಇತ್ತೀಚೆಗೆ ಯೋಜನಾ ಆಯೋಗವು ತನ್ನ ಮೌಲ್ಯಮಾಪನದ ವರದಿಯನ್ನು ಬಿಡುಗಡೆ ಮಾಡಿದೆ. ವರದಿ ಅಂಕಿ ಅಂಶಗಳ ಪ್ರಕಾರ ಕೇವಲ 4.6% ವಿದ್ಯಾರ್ಥಿಗಳು ಮತ್ತು ಪೋಷಕರು ಬಿಸಿಯೂಟ ಕಾರ್ಯಕ್ರಮ ನಡೆಯುತ್ತಿರುವ ರೀತಿ ಬಗ್ಗೆ ತೃಪ್ತಿ ವ್ಯಕ್ತ ಪಡಿಸಿದ್ದಾರೆ. ಉಳಿದಂತೆ 87.72% ವಿದ್ಯಾರ್ಥಿಗಳಲ್ಲಿ 90.36% ವಿದ್ಯಾರ್ಥಿಗಳು ಗುಣಮಟ್ಟ ಸುಧಾರಿಸಿಲ್ಲ ಅಂದರೆ, 23.76% ವಿದ್ಯಾರ್ಥಿಗಳು ಇದು ಕಳಪೆ ಆಹಾರ ಎಂದು ಹೇಳುತ್ತಾರೆ.
ಅದಲ್ಲದೆ ವಿದ್ಯಾರ್ಥಿಗಳ ಶಾಲಾ ನೋಂದಾವಣೆ 32.14% ಹೆಚ್ಚಾಗಿದೆ. ಆದರೆ ಇದು ಬಿಸಿ ಊಟಕ್ಕಾಗಿ ಅಲ್ಲ, 90% ಜನರು ನಮ್ಮ ಮಕ್ಕಳ ಉತ್ತಮ ಶೈಕ್ಷಣಿಕ ಭವಿಷ್ಯಕ್ಕಾಗಿ ಅಂತ ಹೇಳುತ್ತಾರೆ. ಕೇವಲ 10% ಜನರು ಬಿಸಿ ಊಟ ಹೆಚ್ಚಿದ ನೋಂದಾವಣೆಗೆ ಕಾರಣ ಎಂದು ಹೇಳಿದ್ದಾರೆ. ಮಕ್ಕಳು ಶಾಲೆ ಬಿಟ್ಟು ಬಿಡುವ ಪ್ರಮಾಣ 55.56% ಕಡಿಮೆ ಆಗಿದೆ ಈ ಪರಿಣಾಮಕ್ಕೆ 66.67% ರಷ್ಟು ಪೋಷಕರಲ್ಲಿ ಶಿಕ್ಷಣದ ಜಾಗೃತಿ ಮೂಡಿರುವುದು ಕಾರಣ ಎಂದು ವರದಿ ಹೇಳುತ್ತಿದೆ. ಅಂದರೆ ಬಿಸಿ ಊಟ ಕಾರ್ಯಕ್ರಮವನ್ನು ಇನ್ನಷ್ಟು ಪ್ರಾಮಾಣಿಕವಾಗಿ ಸಮಗ್ರವಾಗಿ ಜಾರಿಗೊಳಿಸುವ ಅನಿವಾರ್ಯತೆ ಇದೆ.

ಈ ಯಾವುದೇ ಅಂಕಿ ಅಂಶಗಳು ನಮ್ಮ ಸರ್ಕಾರಕ್ಕೆ ತಿಳಿಯುತ್ತಿಲ್ಲ. ಸರ್ಕಾರವು ಮೈಯೆಲ್ಲಾ ಭ್ರಷ್ಟಾಚಾರದ ಹಗರಣಗಳನ್ನು ತುಂಬಿಸಿಕೊಂಡು ರಾಜ್ಯದ ಜನರ ಕಿವಿ ಮೇಲೆ ಹೂವು ಇಡುವುದಕ್ಕೋಸ್ಕರ ಭಾಗ್ಯಲಕ್ಷ್ಮಿ ತಾಯಂದಿರಿಗೆ ಕೇವಲ 100–150 ರೂ. ಸೀರೆ ಹಂಚಲು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಡೋಂಗಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಿಜವಾಗಿಯೂ ಈ ತಾಯಂದಿರ ಮೇಲೆ ಕಾಳಜಿ ಇದ್ದರೆ ಭಾಗ್ಯಲಕ್ಷ್ಮಿ ತಾಯಂದಿರಿಗೆ ತಲಾ 2 ಎಕರೆ ಭೂಮಿ ನೀಡಲಿ, ಅಂಗನವಾಡಿಗಳಲ್ಲಿ ಸ್ವಾಭಾವಿಕವಾದ ಆಹಾರ ವಿತರಿಸಲಿ, ಅಪೌಷ್ಠಿಕತೆ ಹೋಗಲಾಡಿಸಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ **(NRHM)** ದ ಮೂಲ ಆಶಯಗಳನ್ನು ಸಮಗ್ರವಾಗಿ ಜಾರಿಗೆ ತರಲಿ ಮತ್ತು ರಾಜ್ಯದಲ್ಲಿ ದಲಿತರ ಮೇಲೆ ನಡೆಯುತ್ತಿರುವ ಜಾತಿ ದೌರ್ಜನ್ಯ, ತಾರತಮ್ಯ, ಹಾಸ್ಟೆಲ್ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೌಲಭ್ಯಗಳ ವಂಚನೆ ಈ ಎಲ್ಲವುಗಳ ಬಗ್ಗೆ ಮುಕ್ತವಾಗಿ ಮಾತನಾಡಲಿ.

ಜನಾರೋಗ್ಯ ಆಂದೋಲನ–ಕರ್ನಾಟಕ ಪತ್ರಿಕೆಯ ಈ ಸಂಚಿಕೆಯಲ್ಲಿ ಸವಣೂರಿನ ಭಂಗಿ ಸಮುದಾಯಗಳ ಪ್ರತಿಭಟನೆ, ದಲಿತ ಮಹಿಳೆ ಹೊನ್ನಮ್ಮ ಕೊಲೆಯ ಸತ್ಯಶೋಧನ ವರದಿ, ಹಾವೇರಿಯಲ್ಲಿ ಬಡವರಿಗೆ ವಿತರಿಸಬೇಕಿದ್ದ ಔಷಧಿಗಳು ಚರಂಡಿ ಪಾಲಾದದ್ದು, ಬಳ್ಳಾರಿಯ ಸಾಂಕ್ರಮಿಕ ರೋಗಗಳ ಸುತ್ತ ಮುತ್ತ ಸುದ್ದಿಗಳು, **JAAK** ಲೋಕಾಯುಕ್ತರೊಂದಿಗಿನ ಚಟುವಟಿಕೆಗಳು, ಜಿಲ್ಲಾ, ರಾಜ್ಯ ಮಟ್ಟದ ತರಬೇತಿಗಳು, ಆರೋಗ್ಯ ಸೌಲಭ್ಯಗಳ ನಿರಾಕರಣೆಗಳ ಬಗ್ಗೆ ಮತ್ತು ಸಾರ್ವತ್ರಿಕ ಆರೋಗ್ಯ ಹಾಗೂ ಸಾರ್ವಜನಿಕ ಆರೋಗ್ಯ ಕಾಯಿದೆಗಳ ಬಗ್ಗೆ ಜನಾರೋಗ್ಯ ಆಂದೋಲನ ಕರ್ನಾಟಕ ಕಾರ್ಯಕರ್ತರ ಸ್ಪಂದನೆ ಮತ್ತು ಕಾರ್ಯಾಚರಣೆಗಳ ಬಗ್ಗೆ ಪ್ರಕಟಿಸಲಾಗಿದೆ. ಸಕ್ರಿಯ ಕಾರ್ಯಕರ್ತರು ಹಿತೈಷಿಗಳು ನಮ್ಮ ಈ ಪ್ರಕ್ರಿಯೆಗಳಲ್ಲಿ ಜೊತೆಗೂಡುವುದರ ಮೂಲಕ ನಾಡಿನ ಎಲ್ಲರಿಗೂ ಸಮಗ್ರ ಪ್ರಾಥಮಿಕ ಆರೋಗ್ಯ ಪಾಲನೆ, ಆರೈಕೆ ದೊರೆಯುವುದರ ಮೂಲಕ ಆರೋಗ್ಯ ಮೂಲಭೂತ ಹಕ್ಕಾಗಲಿ ಎಂಬ ಮೂಲ ಆಶಯಗಳಿಗೆ ಬದ್ಧರಾಗಿರೋಣ ಎಂದು ಆಶಿಸುತ್ತೇವೆ.

ಕೆ.ಬಿ.ಓಬಳೇಶ್
ಜನಾರೋಗ್ಯ ಆಂದೋಲನ–ಕರ್ನಾಟಕ
ರಾಜ್ಯ ಸಹ–ಸಂಚಾಲಕರು

ಈ ಸಂಚಿಕೆಯಲ್ಲಿ...

ಸತ್ಯಶೋಧನಾ ವರದಿಗಳು :
1932ರಲ್ಲಿ ಮಹಾತ್ಮಗಾಂಧಿ, 2010 ರಲ್ಲಿ ಡಾ:ಬಿನಾಯಕ್ ಸೇನ್
ಸಾರ್ವತ್ರಿಕ ಆರೋಗ್ಯ ಪಾಲನೆ
ಲೋಕಾಯುಕ್ತರೊಂದಿಗೆ ಜನಾರೋಗ್ಯ ಆಂದೋಲನ ಕಾರ್ಯಾಚರಣೆ
ಜಿಲ್ಲಾ ಮಟ್ಟದ ಆರೋಗ್ಯ ಮತ್ತು ಮಾನವ ಹಕ್ಕು ಕುರಿತ ತರಬೇತಿ ಕಾರ್ಯಾಗಾರ
ಜಿಲ್ಲೆಗಳಲ್ಲಿ ಜನಾರೋಗ್ಯ ಆಂದೋಲನ– ಕರ್ನಾಟಕ
ರಾಜ್ಯ ಮಟ್ಟದ ಆರೋಗ್ಯ ಮತ್ತು ಮಾನವ ಹಕ್ಕು ಕುರಿತ ತರಬೇತಿ ಕಾರ್ಯಾಗಾರ
ಜನಾರೋಗ್ಯ ಆಂದೋಲನ– ಕರ್ನಾಟಕ ಉತ್ತರ ಕರ್ನಾಟಕ ವೇದಿಕೆ
ಜನಾರೋಗ್ಯ ಆಂದೋಲನ–ಕರ್ನಾಟಕ ರಾಜ್ಯ ಮಟ್ಟದ ತಿರುಳು ಗುಂಪು ಸಭೆ
ಕರ್ನಾಟಕ ಸಾರ್ವಜನಿಕ ಆರೋಗ್ಯ ಮಸೂದೆ
ಜನಾರೋಗ್ಯ ಆಂದೋಲನ– ಕರ್ನಾಟಕಕ್ಕೆ ರಾಜ್ಯ ಮಾನವ ಹಕ್ಕುಗಳ ಆಯೋಗದ ಸ್ಪಂದನೆ
ಅತಿಥಿ ಅಂಕಣ –ನಿಮ್ಮ ಆರೋಗ್ಯದ ರಕ್ಷಣೆಯನ್ನು ಯಾರು ಮಾಡಬೇಕು?
ಪುಸ್ತಕ ಪರಿಚಯ –ಜನಾರೋಗ್ಯದ ವಿಷಯದಲ್ಲಿ ಹೊಸ ಪುಸ್ತಕಗಳು

ಸಂಪಾದಕೀಯ ಮಂಡಲಿ
ಡಾ. ಪ್ರಕಾಶ್‌ರಾವ್
ಡಾ.ಗೋಪಾಲ ದಾಬಡೆ
ಕೆ.ಬಿ.ಓಬಳೇಶ್
ಇ.ಪ್ರೇಮ್‌ದಾಸ್
ಪ್ರಭಾ ನಾರಾಯಣಪ್ಪ
ಡಾ.ಅಖಿಲಾವಾಸನ್
ಸ್ವರ್ಣಭಟ್
ಎಂ.ಕರಿಬಸಪ್ಪ
ಐ.ಎಂ.ಪ್ರಹ್ಲಾದ್

ಸತ್ಯಶೋಧನಾ ವರದಿಗಳು :

ಜನಾರೋಗ್ಯ ಕರ್ನಾಟಕದ ಕಾರ್ಯಕರ್ತರು ಸವಣೂರಿನಲ್ಲಿ ಭಂಗಿ ಸಮುದಾಯಗಳಿಗೆ ಆಗಿರುವ ಅನ್ಯಾಯ ಮತ್ತು ತುಮಕೂರು ಜಿಲ್ಲೆಯಲ್ಲಿ ದಲಿತ ಮಹಿಳೆಯ ಕೊಲೆಯ ಬಗ್ಗೆ ಸತ್ಯಶೋಧನಾ ವರದಿ

1. ಡೋಂಗಿ ಸರ್ಕಾರಗಳ ಬಣ್ಣ ಬಯಲು ಮಾಡಿದ ಭಂಗಿ ಸಮುದಾಯ. ಭಂಗಿ ಸಮುದಾಯಕ್ಕೆ ನ್ಯಾಯ ಯಾವಾಗ?

ದಿನಾಂಕ 21 ಜುಲೈ 2010 ರಂದು ಹಾವೇರಿ ಜಿಲ್ಲೆಯ ಸವಣೂರು ಪಟ್ಟಣದಲ್ಲಿ 14 ಭಂಗಿ ಸಮುದಾಯಗಳು ತಮ್ಮ 30–40 ವರ್ಷಗಳ ಸರ್ಕಾರದ ಮೇಲಿನ ರೋಷ, ಸಿಟ್ಟು, ಅಸಹಾಯಕತೆಯನ್ನು ತಮ್ಮ ತಲೆ ಮೇಲೆ ಮಲ ಸುರಿದುಕೊಂಡು ಪ್ರತಿಭಟಿಸುವುದರ ಮೂಲಕ ಪ್ರತಿಭಟಿಸಿದರು. ಇದರಿಂದ ಕರ್ನಾಟಕ ರಾಜ್ಯದಲ್ಲಿ 34 ವರ್ಷಗಳ ಹಿಂದೆ ಮಲ ಹೊರುವ ಪದ್ಧತಿಯನ್ನು ಕಾನೂನಿನ ಪ್ರಕಾರ ನಿಷಿದ್ಧ ಮಾಡಿದ್ದರೂ ಸಹ ಇಂತಹ ಅನಿಷ್ಠ ಪದ್ಧತಿಯು ಇನ್ನೂ ಜೀವಂತವಾಗಿದೆ ಎಂಬುವುದು ಮತ್ತೊಮ್ಮೆ ಜಗತ್ತಿಗೆ ತಿಳಿದಂತಾಗಿದೆ. ಈ ಘಟನೆಯಿಂದ ಸರ್ಕಾರಕ್ಕೂ ಮತ್ತು ಈ ನಾಡಿನ ಪ್ರಜ್ಞಾವಂತ ಜನರಿಗೆ ಮುಖ ಸಣ್ಣದಾಗಿದೆ. ಈ ಘಟನೆ ನಡೆದ 24 ಘಂಟೆಗಳಲ್ಲಿ ರಾಜ್ಯಾದಾದ್ಯಂತ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಯಿತು. ಈ ಘಟನೆಯನ್ನು ಖುದ್ದು ಪರಿಶೀಲಿಸಲು ಜನಾರೋಗ್ಯ ಆಂದೋಲನ ಕರ್ನಾಟಕದ ಸತ್ಯಶೋಧನ ತಂಡ ಸವಣೂರಿಗೆ ದಿನಾಂಕ 29/09/2010ರಂದು ಭೇಟಿ ನೀಡಿತ್ತು.

ಈ ತಂಡದಲ್ಲಿ JAAK ಮುಖಂಡರಾದ ಕೆ. ಬಿ. ಓಬಳೇಶ, ಎಂ.ಕರಿಬಸಪ್ಪ, ಎಸ್.ಡಿ. ಬಳಿಗಾರ, ದಲಿತ್ ಫೌಂಡೇಷನ್‌ನ

ಹೆಚ್.ಆರ್. ಚಂದ್ರಶೇಖರ್, ಜಾತಿವಿನಾಶ ವೇದಿಕೆಯ ಶ್ರೀ ಲಕ್ಷ್ಮಣ್ ಸಂಬೊಳಿ, ಎಲ್. ಮಂಜುನಾಥ್ (ದಾವಣಗೆರೆ) ತಂಡ ಸತ್ಯಶೋಧನೆ ನಡೆಸಿತು. ಸಮಿತಿ ಹೊರ ತಂದಿರುವ ಕೆಲ ಗಂಭೀರ ವಿಷಯಗಳನ್ನು ಇಲ್ಲಿ ಪ್ರಸ್ತುತ ಪಡಿಸುತ್ತಿದೆ.

ವಸ್ತು ಸ್ಥಿತಿ

ಸವಣೂರು ತಾಲ್ಲೂಕು, ಕೇಂದ್ರ ಹಾವೇರಿ ಜಿಲ್ಲೆ, ಸವಣೂರು ಮತ್ತು ಸುತ್ತ ಮುತ್ತಲಿನ ಪ್ರದೇಶಗಳು ಭಾರತಕ್ಕೆ ಸ್ವತಂತ್ರ ಬಂದ ನಂತರವೂ ಅನೇಕ ವರ್ಷಗಳು ನಿಜಾಮರ ಆಡಳಿತಕ್ಕೆ ಒಳಪಟ್ಟಿದ್ದವು. ಈ ಪ್ರದೇಶದ ವಿವಿಧ ಅಭಿವೃದ್ಧಿ ಕಾರ್ಯಗಳು ಅಸಮತೋಲನದಿಂದ ಕೂಡಿದೆ. ಭೂಮಾಲೀಕರು, ಹಿಂದೂ ಮೇಲ್ಜಾತಿಯವರದ್ದೆ ಕಾರುಬಾರು.

ಸುಮಾರು 70 ರ ದಶಕಗಳಿಂದ ಇಲ್ಲಿಯೇ ವಾಸ ಮಾಡುತ್ತಿರುವ ಆಂಧ್ರ ಪ್ರಧೇಶದ ವಲಸಿಗರಾದ ಭಂಗಿ ಸಮುದಾಯ (ಪರಿಶಿಷ್ಟ ಜಾತಿ ಮಾದಿಗ) 14 ಕುಟುಂಬಗಳು ಅನಾದಿ ಕಾಲದಿಂದ ಮೇಲ್ಜಾತಿಯವರ ಮತ್ತು ಸರ್ಕಾರಿ ಕಛೇರಿ, ಅಧಿಕಾರಿಗಳ ಮನೆಗಳ ಶೌಚಾಲಯ ತೊಳೆಯುವುದು, ಮಲಮೂತ್ರವನ್ನು ಅವರ ಮನೆಗಳಿಂದ ಹೊರಗಡೆ ಒಯ್ಯುವುದು. ಬೀದಿ ಚರಂಡಿಗಳನ್ನು ಸ್ವಚ್ಛ ಮಾಡುವುದು. ಇವರ ಬಹುಮುಖ್ಯ ಕಸುಬು. ಈ ಅನೈರ್ಮಲ್ಯ ಕೆಲಸಗಳಿಂದಲೇ ಇವರ ಜೀವನ ನಡೆಯುತ್ತಿದೆ. ಅನೇಕ ವರ್ಷಗಳಿಂದ ಸಂವಿದಾನ ಬದ್ದವಾಗಿ ದೊರೆಯಬೇಕಿದ್ದ ಮೂಲಭೂತ ಹಕ್ಕುಗಳಾದ ಆರೋಗ್ಯ, ಆಹಾರ, ಶಿಕ್ಷಣ ವಸತಿ, ಉದ್ಯೋಗ ದೊರೆಯದೆ ಸಮಾಜದ ಮುಖ್ಯವಾಹಿನಿಯಿಂದ ಹೊರಗೆ ಉಳಿದಿದ್ದಾರೆ.

ಘಟನೆ ವಿವರ

ಸವಣೂರಿನ ಪುರಸಭೆ ವ್ಯಾಪ್ತಿಯಲ್ಲಿ ಭಂಗಿ ಸಮುದಾಯದ 14 ಕುಟುಂಬಗಳು ವಾಸ ಮಾಡುತ್ತಿವೆ. ಈ ಕುಟುಂಬಗಳು ಕಳೆದ 30 ವರ್ಷಗಳಿಂದ ನಿಜಾಮರು ದಾನವಾಗಿ ನೀಡಿರುವ ಪ್ರದೇಶದಲ್ಲಿ ವಾಸ ಮಾಡುತ್ತಿವೆ. ದುರಾದೃಷ್ಟ ಈ ನಿವೇಶನಗಳಿಗೆ ಅಂದಿನಿಂದಲೂ ಹಕ್ಕು ಪತ್ರಗಳಿಲ್ಲ. ಹಕ್ಕು ಪತ್ರಗಳಿಗಾಗಿ ಸುಮಾರು ವರ್ಷಗಳಿಂದ ಪುರಸಭೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಆದರೆ ಇಲಾಖೆಯ ಅಧಿಕಾರಿಗಳು ಪ್ರಮಾಣಿಕವಾಗಿ ಪ್ರಯತ್ನಿಸಿಲ್ಲ. ಉದಾಸೀನದಿಂದ ವರ್ತಿಸಿದ್ದಾರೆ.

ಆದರೆ ಏಕಾಏಕಿ ಇತ್ತೀಚೆಗೆ ಸವಣೂರಿನ ಪುರಸಭೆ ಈ ನಿವೇಶನಗಳನ್ನು ತೆರವುಗೊಳಿಸಿ ವಾಣಿಜ್ಯ ಮಳಿಗೆ ಕಟ್ಟಡ ನಿರ್ಮಿಸಲು ಯೋಜನೆ ರೂಪಿಸಿ ಮಂಜೂರು ಮಾಡಿತು. ಕಟ್ಟಡ ನಿರ್ಮಾಣದ ಜವಾಬ್ದಾರಿಯನ್ನು ಸ್ಥಳೀಯ ಪುರಸಭೆ ಅಧ್ಯಕ್ಷರಿಗೆ ವಹಿಸಿದೆ. ಅಂದಿನಿಂದ ಈ ಅಧ್ಯಕ್ಷ ಮತ್ತು ಪುರಸಭೆ 14 ಭಂಗಿ ಕುಟುಂಬಗಳಿಗೆ ಇನ್ನಿಲ್ಲದ ತೊಂದರೆ ಕಿರುಕುಳ ಕೊಡಲು ಪ್ರಾರಂಭಿಸಿದೆ. ಭಂಗಿ ಸಮುದಾಯದ ಮನೆಗಳ ಮುಂದೆ ಕೋಳಿ ಮಾಂಸದ ಅಂಗಡಿಗಳನ್ನು ತೆರೆದು ಅಲ್ಲಿ ಉತ್ಪತ್ತಿಯಾಗುವ ಎಲ್ಲಾ ಮಾಲಿನ್ಯವನ್ನು ಅವರ ಮನೆಗಳ ಮುಂದೆ ಎಸೆದು ಮಾಲಿನ್ಯಗಳಿಸಿದ್ದಾರೆ, ಅವರಿಗಾಗಿ ಇದ್ದ ಒಂದೇ ಒಂದು ನೀರಿನ ಕೊಳಾಯಿಯನ್ನು ಕಿತ್ತೆಸೆದು ಕುಡಿಯಲು ನೀರು ಸಿಗದಂತೆ ಮಾಡಲಾಗಿದೆ. ಇಂತಹ ಅನೇಕ ಕಿರುಕುಳಗಳನ್ನು ನೀಡಲು ಪ್ರಾರಂಭಿಸಿದ್ದು, ಸ್ಥಳೀಯ ಪುರಸಭೆ ಅಧ್ಯಕ್ಷ ಹಾಗೂ ಗುತ್ತಿಗೆದಾರ, ಇಲ್ಲಿ ಗಂಭೀರವಾಗಿ ಗಮನಿಸಬೇಕಾದ ಅಂಶ ಅಂದರೆ ಸವಣೂರು ಪ್ರಸ್ತುತ ತಾಲ್ಲೂಕು ಕೇಂದ್ರ ಸ್ಥಾನ, ಭಂಗಿ ಸಮುದಾಯಗಳು ವಾಸ ಮಾಡುತ್ತಿರುವ ಪ್ರದೇಶ ಸವಣೂರಿನ ಪ್ರತಿಷ್ಠಿತ ಭಾಗವಾಗಿದೆ.ಸುತ್ತಲ ಹಿಂದೂ ಮೇಲ್ಜಾತಿಯವರ ಮನೆಗಳಿವೆ. ಮೇಲ್ಜಾತಿಯವರೊಂದಿಗೆ ಮಲಹೊರುವ ಭಂಗಿಗಳು ವಾಸಮಾಡುವುದು ಇವರಿಗೆ ಜೀರ್ಣಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇನ್ನೊಂದು ವಿಷಯ ಪ್ರಸ್ತುತ ಭಂಗಿಗಳು ವಾಸವಾಡುವ ಜಾಗವು ಬೆಲೆಬಾಳುವ ಪ್ರದೇಶವಾಗಿದೆ.ಅಲ್ಲಿಂದ ಇವರನ್ನು ಎತ್ತಂಗಡಿ ಮಾಡಿ ಈ ಜಾಗವನ್ನು ಆಕ್ರಮಿಸಿಕೊಳ್ಳಲು ನಡೆದಿರುವ ಸ್ಥಳೀಯರ ಕುತಂತ್ರ ಇಂತಹ

ಪುರಸಭೆ ಅಧಿಕಾರಿಗಳು, ಪುರಸಭೆಯ ಸದಸ್ಯರು, ಅಧ್ಯಕ್ಷರು ಇದರ ವಿರುದ್ಧ ಅನೇಕ ಬಾರಿ ಮನವಿ ದೂರುಗಳನ್ನು ನೀಡಿದ್ದ ಭಂಗಿಗಳಿಗೆ ಯಾವುದೇ ರೀತಿಯ ನ್ಯಾಯ ದೊರೆಯುತ್ತದೆ ಎಂಬ ಭರವಸೆ ಸಿಗಲಿಲ್ಲ. ಬೇರೆ ದಾರಿ ತೋಚದೆ ತಾವು ಬೆಳಿಗ್ಗೆ ಶೌಚಾಲಯ ಕೆಲಸ ಮಾಡಿ ಹೊರಗೊಯ್ಯಲು ಸಂಗ್ರಹಿಸಿಟ್ಟಿದ್ದ ಮಲವನ್ನು ಪುರಸಭೆ ಮುಂದೆ ತಮ್ಮಗಳ ತಲೆ ಮೇಲೆ ಸುರಿದುಕೊಂಡು ಈ ವ್ಯವಸ್ಥೆಗೆ ಧಿಕ್ಕಾರ ಹೇಳಿ ಪ್ರತಿಭಟಿಸಿದ್ದಾರೆ.

ಸತ್ಯ ಶೋಧನಾ ಸಮಿತಿ ಸ್ಥಳೀಯ ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರಕ್ಕೆ ನೀಡಿರುವ ಶಿಫಾರಸ್ಸುಗಳು:

- ಕರ್ನಾಟಕದಾದ್ಯಂತ ಜಾರಿಯಲ್ಲಿರುವ ಮಲ ಹೊರುವ ಪದ್ಧತಿಯನ್ನು ಕೂಡಲೇ ರದ್ದುಪಡಿಸಬೇಕು ಹಾಗೂ ಈ ಪದ್ಧತಿಯಲ್ಲಿ ತೊಡಗಿರುವ ಎಲ್ಲಾ ಕುಟುಂಬಗಳಿಗೆ ಸಮಗ್ರವಾದ ಪುನರ್‌ವಸತಿ ಒದಗಿಸಬೇಕು.
- ಸವಣೂರು ಪಟ್ಟಣದ ಪುರಸಭೆ, ಸಮಾಜ ಕಲ್ಯಾಣ ಇಲಾಖೆ, ಪೋಲೀಸ್ ಹಾಗೂ ಇತರೆ ಸರ್ಕಾರಿ ಇಲಾಖೆಗಳ ಅಧಿಕಾರಿಗಳ ಮೇಲೆ ಹಾಗೂ ಚುನಾಯಿತ ಪ್ರತಿನಿಧಿಗಳ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯಿದೆ ಅಡಿಯಲ್ಲಿ ದೂರು ದಾಖಲಿಸಿ ಶಿಕ್ಷಿಸಬೇಕು.
- ಈ ಕೂಡಲೇ 14 ಭಂಗಿ ಕುಟುಂಬಗಳಿಗೆ ಈಗಿರುವ ಸ್ಥಳದಲ್ಲಿಯೇ ಸೂಕ್ತವಾದ ಮನೆಗಳನ್ನು ನಿರ್ಮಾಣ ಮಾಡಿ ಒದಗಿಸುವುದು.
- 14 ಭಂಗಿ ಸಮುದಾಯದ ಪುರುಷ ಮತ್ತು ಮಹಿಳೆಯರಿಗೆ ಆದಾಯೋತ್ಪನ್ನ ಚಟುವಟಿಕೆಗಳನ್ನು ನಡೆಸಲು ತರಬೇತಿ ಹಾಗೂ ಆರ್ಥಿಕ ವ್ಯವಸ್ಥೆ ಮಾಡುವುದು.
- ಈಗಾಗಲೇ ಸಮಾಜ ಕಲ್ಯಾಣ ಇಲಾಖೆ ಆಶ್ವಾಸನೆ ನೀಡಿ ರೂಪಿಸುತ್ತಿರುವ ಎಲ್ಲಾ ಪುನರ್‌ವಸತಿ ಕಾರ್ಯಕ್ರಮಗಳನ್ನು ಸಮಯಕ್ಕೆ ಸರಿಯಾಗಿ ಕಾರ್ಯರೂಪಕ್ಕೆ ತರುವುದು ಹಾಗೂ ಇಲಾಖೆಯೇ ಮೌಲ್ಯಮಾಪನ ಮಾಡಬೇಕು.
- ಭಂಗಿ ಸಮುದಾಯದ ಎಲ್ಲಾ ಮಕ್ಕಳನ್ನು ಸನಿವಾಸ ಶಾಲೆಗಳಿಗೆ ಸೇರಿಸಿ ಉನ್ನತ ವ್ಯಾಸಂಗಕ್ಕೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಬೇಕು.
- 14 ಭಂಗಿ ಸಮುದಾಯದ ಕುಟುಂಬಗಳಿಗೆ ಮೂಲಭೂತ ಸೌಕರ್ಯಗಳಾದ ಆರೋಗ್ಯ, ಆಹಾರ, ನೀರು, ವಸತಿ, ನೈರ್ಮಲ್ಯದಂತಹ ಸೌಕರ್ಯಗಳನ್ನು ಈ ಕೂಡಲೇ ಒದಗಿಸಬೇಕು.
- ಎಲ್ಲಾ ಭಂಗಿ ಸಮುದಾಯಗಳಿಗೆ ಅವರ ಸುಸ್ಥಿರ ಅಭಿವೃದ್ಧಿಗಾಗಿ ತಲಾ 5 ಎಕರೆ ಭೂಮಿಯನ್ನು ನೀಡಬೇಕು.

2. ದಲಿತ ಮಹಿಳೆ ಹೊನ್ನಮ್ಮ ಹತ್ಯೆ ಕುರಿತು ನಡೆಸಿದ ಸತ್ಯ ಶೋಧನಾ ಸಮಿತಿ ವರದಿ

ದಿನಾಂಕ 30 ಜೂನ್ 2010 ರಂದು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಗೋಪಾಲ ಗ್ರಾಮದಲ್ಲಿ ದಲಿತ ಮಹಿಳೆ ಹೊನ್ನಮ್ಮಳ ಬರ್ಬರ ಹತ್ಯೆಯಾಯಿತು. ಜನಾರೋಗ್ಯ ಆಂದೋಲನ–ಕರ್ನಾಟಕ ಸತ್ಯಶೋಧನೆ ಸಮಿತಿಯು ದಿನಾಂಕ 03/07/2010 ರಂದು ಶ್ರೀಮತಿ ಹೊನ್ನಮ್ಮನವರ ಬರ್ಬರ ಹತ್ಯೆ ಬಗ್ಗೆ ಮಾಹಿತಿ ಸಂಗ್ರಹಿಸಲು ಹಾಗೂ ಈ ಕೊಲೆಯ ಹಿಂದಿನ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಭೇಟಿ ನೀಡಿತ್ತು.

ತುಮಕೂರು ಜಿಲ್ಲೆಯ ಶ್ರೀ. ಕುಂದೂರು ತಿಮ್ಮಯ್ಯ ಜಿಲ್ಲಾ ಸಂಚಾಲಕರು ದ.ಸಂ.ಸ, ಶ್ರೀ.ಸಿ.ಎಸ್. ಪಾರ್ಥಸಾರಥಿ, ರಾಜ್ಯ ಸಂಚಾಲಕರು, ಕರ್ನಾಟಕ ರಾಜ್ಯ ಮಾದಿಗ ಮಾನವ ಹಕ್ಕುಗಳ ವೇದಿಕೆ, ಕೆ.ಬಿ. ಓಬಳೇಶ, ರಾಜ್ಯ ಸಂಚಾಲಕರು ಜನಾರೋಗ್ಯ ಅಂದೋಲನ ಕರ್ನಾಟಕ, ಶ್ರೀ. ಭರತ್ ಕುಮಾರ್, ಸಂಚಾಲಕರು ದ.ಸಂ.ಸ, ಮಧುಗಿರಿ– ಸತ್ಯಶೋಧನ ಸಮಿತಿಯ ಸದಸ್ಯರಾಗಿದ್ದರು.

ಹೊನ್ನಮ್ಮನ ಕೊಲೆಗೆ ಹಿನ್ನೆಲೆ

ಹೊನ್ನಮ್ಮ ಸುಮಾರು 40 ವರ್ಷದ ಮಾದಿಗ ಸಮುದಾಯದ ಮಹಿಳೆ ವಿವಾಹವಾಗಿದ್ದು ಗಂಡನಿಂದ ಬೇರೆಯಾಗಿದ್ದರು. ಇದೇ ಗ್ರಾಮದ

ಹೊನ್ನಮ್ಮ ಹತ್ಯೆ ಖಂಡಿಸಿ ಮೌನ ಪ್ರತಿಭಟನೆ

ಚಿಕ್ಕನಾಯಕನಹಳ್ಳಿ: ದಲಿತ ಮಹಿಳೆ ಹೊನ್ನಮ್ಮ ಹತ್ಯೆ ಖಂಡಿಸಿ ಇಂದು ಪಟ್ಟಣದಲ್ಲಿ ಮೌನ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಡಿಎಸ್‌ಎಸ್ ತಾಲೂಕು ಸಂಚಾಲಕ ನಾರಾಯಣ್ ತಿಳಿಸಿದ್ದಾರೆ. ಅವರು ಇಂದು ನೀಡಿರುವ ಪತ್ರಿಕಾಹೇಳಿಕೆಯಲ್ಲಿ ಮಾತನಾಡಿ, ಬಿಜೆಪಿಯಲ್ಲಿ ಪ್ರಮುಖ ಕಾರ್ಯಕರ್ತೆಯಾಗಿದ್ದ ಆಕೆ ಅಧಿಕಾರಕ್ಕಾಗಿ ಎಂದೂ ಹಾತೊರೆಯಲಿಲ್ಲ. ಆದರೂ ಆಕೆಯ ಏಳಿಗೆ ಸಹಿಸದ ಕ್ಷುಲ್ಲಕ ಮನಸ್ಸಿನ ಸಮಾಜ ಘಾತುಕ ವ್ಯಕ್ತಿಗಳು ಆಕೆಯನ್ನು ಕಲ್ಲಿನಿಂದ ಜಜ್ಜಿ ಬರ್ಬರವಾಗಿ ಹತ್ಯೆ ಮಾಡಿರುವುದನ್ನು ಖಂಡಿಸಿ ಇಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾ 3 ಗಂಟೆವರೆಗೆ ಚಿ.ನಾ.ಹಳ್ಳಿ ತಾಲೂಕು ಕಚೇರಿ ಮುಂಭಾ ಮೌನ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ದಲಿತ ಬಂಧುಗಳು, ಪ್ರಗತಿಪರರು ಹಾಗೂ ಮಾನವೀಯ ಗುಣವುಳ್ಳವರು ಹೆಚ್ಚಿನ ಸಂಖೆಯಲ್ಲಿ ಬಂದು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕೋರಿದ್ದಾರೆ.

ನಾಗರಾಜ (ಡಾಬ ನಾಗರಾಜ) ಎಂಬ ಈಡಿಗ ಸಮುದಾಯದ ವ್ಯಕ್ತಿಯೊಂದಿಗೆ ಜೀವನ ನಡೆಸುತ್ತಿದ್ದರು. ಇವರಿಗೆ ಮಂಜುನಾಥ ಎಂಬ ಸುಮಾರು 24 ವರ್ಷದ ಮಗನಿದ್ದಾನೆ. ಪ್ರಸ್ತುತ ಬಿ. ಬಿ. ಎಂ. ವ್ಯಾಸಂಗ ಮಾಡುತ್ತಿದ್ದಾನೆ.

ಕೆಲ ವರ್ಷಗಳ ನಂತರ ಹೊನ್ನಮ್ಮ ಬಿ.ಜೆ.ಪಿ. ಪಕ್ಷದ ಸ್ಥಳೀಯ ಘಟಕದಲ್ಲಿ ಸಕ್ರಿಯ ಕಾರ್ಯಕರ್ತೆಯಾಗಿ ಗುರುತಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದರು. ಕೆಲ ದಿನಗಳ ನಂತರ ತಾಲ್ಲೂಕಿನ ಬಿ.ಜೆ.ಪಿ. ಉಪಾಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ. ಹೊನ್ನಮ್ಮನ ಬೆಳವಣಿಗೆಯನ್ನು ಸಹಿಸಲಾರದೇ ಇತರೇ ಜಾತಿಯವರು ಕಳೆದ 15 ವರ್ಷಗಳಿಂದ ಕಿರುಕುಳ ಕೊಡುವುದು ನಡೆಯುತ್ತಿತ್ತು. ಈ ಎಲ್ಲಾ ಘಟನೆಗಳು ಸ್ಥಳೀಯ ಪೋಲಿಸರಿಗೂ ಚನ್ನಾಗಿ ತಿಳಿದಿತ್ತು. ಕೆಲವು ಬಾರಿ ಹೊನ್ನಮ್ಮ ರಕ್ಷಣೆ ಕೊಡಿ ಎಂದು ಪೋಲಿಸರಿಗೂ ಮನವಿ ಮಾಡಿಕೊಂಡಿದ್ದಾರೆ. ಅದರೆ ಸ್ಥಳೀಯ ಪೋಲಿಸರು ಇದರ ಬಗ್ಗೆ ಗಮನ ನೀಡಲಿಲ್ಲ.

ಜೂನ್ 30, 2010 ರಂದು ಸಂಜೆ ಚಿಕ್ಕನಾಯಕನಹಳ್ಳಿ ಪೋಲೀಸ್ ಠಾಣೆಯಿಂದ ಗ್ರಾಮಕ್ಕೆ ಮರಳಿದ ಹೊನ್ನಮ್ಮ ನೇರವಾಗಿ ತನ್ನ ಸ್ನೇಹಿತೆ ಈಡಿಗ ಸಮುದಾಯದ ಮೀನಾಕ್ಷಮ್ಮನ ಮನೆಯ ಜಗುಲಿ ಮೇಲೆ ಬಂದು ಕುಳಿತುಕೊಳ್ಳುತ್ತಾರೆ. ಅದೇ ಸಮಯಕ್ಕೆ 20–30 ಜನರಿದ್ದ ಗಂಡಸರ ಗುಂಪು ಏಕಾಏಕಿ ಹೊನ್ನಮ್ಮನ ಮೇಲೆ ದಾಳಿ ಮಾಡಿ ಸಾರ್ವಜನಿಕವಾಗಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಮನ ಬಂದಂತೆ ಥಳಿಸುತ್ತಾರೆ. ಹೊನ್ನಮ್ಮನ ಮೈ ಮೇಲಿನ ಬಟ್ಟೆಗಳನ್ನು ಕಳಚುತ್ತಾರೆ. ಕೆಟ್ಟ ಶಬ್ದಗಳಿಂದ ಬೈಯುತ್ತ, ಒಂದೇ ಸಮನೆ ಎಲ್ಲರೂ ಕೈಗಳಿಂದ, ಕಲ್ಲುಗಳಿಂದ, ಪಕ್ಕದಲ್ಲೆ ಇದ್ದ ಚರಂಡಿಗೆ ಹಾಕಿ ಹೊಡೆಯುತ್ತಾರೆ. ಹೊನ್ನಮ್ಮ ಮೂರ್ಛೆ ಬೀಳುತ್ತಾರೆ. ನಂತರ ಕುಡಿಯಲು ನೀರು ಬೇಕೆಂದು ಕೇಳಲು ಸನ್ನೆ ಮಾಡಿದಾಗ ಇನ್ನೂ ಬದುಕಿದ್ದಾಳೆ ಎಂದು ತಿಳಿದು ಚರಂಡಿಯಿಂದ ಪಕ್ಕದ ಫುಟ್‌ಪಾತ್‌ಗೆ ಎಳೆದು ತಂದು ತಿಪ್ಪೆಯಲ್ಲಿ ಹಾಕಿ ಸೈಜು ಕಲ್ಲುಗಳಿಂದ ಹೊಡೆದು ಸಾಯಿಸುತ್ತಾರೆ. ಹೊನ್ನಮ್ಮನ ಸ್ನೇಹಿತರು ಬಿಡಿಸಲು ಬಂದಾಗ ಅವರಿಗೆ ಪ್ರಾಣ ಬೆದರಿಕೆ ಹಾಕಿ ಅವರನ್ನು ದೂರ ಕಳಿಸಿದ್ದಾರೆ. ಈ ಗುಂಪಿನಲ್ಲಿ ಮುಖ್ಯವಾಗಿ ರಂಗಸ್ವಾಮಿ, ಗ್ರಾ.ಪಂ. ಅಧ್ಯಕ್ಷ ರಾಜ, ಅಪ್ಪಣ್ಣ, ವೆಂಕಟೇಶ, ಮುತ್ಯಾಲಪ್ಪ, ಉಮೇಶ, ಮೀಸೆ ವೆಂಕಟಸ್ವಾಮಿ, ಈಡಿಗರ ನಂಜುಂಡ, ಸತ್ಯ – ಹೊನ್ನಮ್ಮ ಸಂಬಂಧಿಕರಾದ ಗಂಗ–ಸುಬ್ಬಣ್ಣ ಸೇರಿ ಸುಮಾರು 30 ಜನ ಪುರುಷರು ಸೇರಿ ಈ ಹತ್ಯೆ ಮಾಡಿದ್ದಾರೆ.

ಸತ್ಯಶೋದನ ಸಮಿತಿ ಗಮನಿಸಿದ್ದು

- ಹೊನ್ನಮ್ಮ ದಿಟ್ಟ ದಲಿತ ರಾಜಕೀಯ ಮಹಿಳೆ ಓದು ಬರಹ ಗೊತ್ತಿಲ್ಲದಿದ್ದರು, ಯಾವ ರೀತಿಯ ಬೆಂಬಲವು ಇಲ್ಲದೆ ಸ್ವಂತ ಶ್ರಮದಿಂದ ಬೆಳೆದಿರುವ ಮಹಿಳೆ.
- ಗ್ರಾಮದಲ್ಲಿರುವ ಈಡಿಗರು, ಕುರುಬರು, ಮಡಿವಾಳರು, ವಡ್ಡರು, ಸೇರಿದಂತೆ ಇತರರಿಗೆ ಹೊನ್ನಮ್ಮನ ಮೇಲೆ ಅಸೂಯೆ ಬಂದಿದೆ. ಏಕೆಂದರೆ ಕೇವಲ ಮಾದಿಗ ಹೆಂಗಸು, ಈ ರೀತಿ ಬೆಳೆಯುತ್ತಿರುವುದು ಅವರ್‍ಯಾರಿಗೂ ಇಷ್ಟವಿಲ್ಲದೆ ಇರುವುದು.
- ಡಾಬ ನಾಗರಾಜ (ಹೊನ್ನಮ್ಮಳ ಎರಡನೆ ಗಂಡ) ಈಡಿಗರಾಗಿದ್ದು ಇವರಿಬ್ಬರ ಸಂಬಂಧಕ್ಕೆ ಇವರ ಸಂಬಂಧಿಕರಿಗೆ ಹೊನ್ನಮ್ಮಳ ಮೇಲೆ ವಿಪರೀತವಾದ ಸೇಡು ಬೆಳದಿದೆ.
- ಗ್ರಾಮದಲ್ಲಿನ ಜಾತಿ ಪದ್ಧತಿ, ಗ್ರಾಮಪಂಚಾಯ್ತಿಯಲ್ಲಿನ ವಿವಿಧ ಭ್ರಷ್ಟಾಚಾರಗಳನ್ನು ಪ್ರಶ್ನೆ ಮಾಡಿದ್ದು, ಗ್ರಾಮದ ಅನೇಕರಿಗೆ ಕಿರಿಕಿರಿ ಅಗಿ, ಹೊನ್ನಮ್ಮಳನ್ನು ವೇಶ್ಯೆ ಅಗಿ ಕಾಣುತ್ತಾರೆ ಜೊತೆಗೆ ಅನೇಕ ಗಂಡಸರು ಹೊನ್ನಮ್ಮಳೊಂದಿಗೆ ಲೈಂಗಿಕ ಸಂಬಂಧಕ್ಕೆ ಬಯಸುತ್ತಾರೆ. ಇದಕ್ಕೆ ಹೊನ್ನಮ್ಮ ಸಹಕರಿಸುವುದಿಲ್ಲ.
- 5–6 ವರ್ಷ ಹಿಂದೆ ಹೊನ್ನಮ್ಮಳ ಮೇಲೆ ಇದೇ ಗುಂಪು ಪ್ರಾಣಾಂತಿಕ ಹಲ್ಲೆ ನಡೆಸಿದೆ ಅಲ್ಲದೇ ಹೊನ್ನಮ್ಮಳ ಗುಡಿಸಲು ಸುಟ್ಟು ಹಾಕಿದ್ದರು.
- 2009 ರಲ್ಲಿ ಮಳೆ ಪ್ರವಾಹ ಉಂಟಾಗಿದ್ದ ಸಂದರ್ಭದಲ್ಲಿ ಗೋಪಾಲಪುರದಲ್ಲಿ ಉಂಟಾಗಿದ್ದ ಮಳೆ ಹಾನಿ ಬಗ್ಗೆ ಪ್ರತಿಭಟಿಸಿದ್ದು ಸ್ಥಳೀಯ ಶಾಸಕರು ಸ್ಥಳಕ್ಕೆ ಬಂದು ಮಳೆಹಾನಿಗೆ ಸಂಬಂಧಿಸಿದ ಪರಿಹಾರಗಳ ಬಗ್ಗೆ ಹೊನ್ನಮ್ಮರೊಂದಿಗೆ ಚರ್ಚಿಸಿದ್ದರು ಈ ಸಂದರ್ಭದಲ್ಲಿ ರಾಜಕೀಯ ಪಕ್ಷ ಮತ್ತು ಜಾತಿ ಸಂಬಂದ ವಾಗ್ವಾದ ನಡೆದಿದೆ (ಒಬ್ಬ ಎಸ್. ಸಿ. ಮಹಿಳೆ ಶಾಸಕರ ಬಗ್ಗೆ ಗೌರವ ನೀಡುತ್ತಿಲ್ಲ).
- ಸ್ಥಳೀಯ ಹಂದಿಕೇರೆ ಪೋಲಿಸರು ಮತ್ತು ಡಿ.ವೈ.ಎಸ್.ಪಿ. ಹೊನ್ನಮ್ಮಳ ಕೊಲೆ ಕೇಸಿನಲ್ಲಿ ಭಾಗಿಯಾಗಿದ್ದಾರೆ. ಹೇಗೆಂದರೆ ಹೊನ್ನಮ್ಮ ಅನೇಕ ಬಾರಿ ಆಕೆಗೆ ಇರುವ ಬೆದರಿಕೆ ಅವಮಾನ, ಲೈಂಗಿಕ ಶೋಷಣೆಗಳ ಬಗ್ಗೆ ದೂರು ನೀಡಿದ್ದರೂ ಸಹ ಯಾವುದೇ ಕ್ರಮಬದ್ಧವಾದ ಕಾನೂನು ಕ್ರಮ ತೆಗೆದುಕೊಂಡಿಲ್ಲ ಅದು ಅಲ್ಲದೇ ಕೊಲೆ ಮಾಡುವ 2 ಗಂಟೆಗಳ ಹಿಂದೆ ಕೊಲೆಗಡುಕರು ಹಂದಿಕೇರೆ ಪೋಲಿಸ್ ಠಾಣೆ ಪೋಲಿಸರೊಂದಿಗೆ ಕಾಫಿ, ಸಿಗರೇಟ್ ಕುಡಿದು ಕೊಲೆಯ ಯೋಜನೆ ನಡೆಸಿದ್ದಾರೆ.
- ಹೊನ್ನಮ್ಮ ಕೊಲೆ ಆಗುತ್ತೆ ಎಂಬ ಸ್ಪಷ್ಟ ಮಾಹಿತಿ ಸುಳಿಯು ಪೋಲಿಸರಿಗೆ ಗೊತ್ತಿತ್ತು ಮತ್ತು ಈ ಕೃತ್ಯವನ್ನು ತಪ್ಪಿಸಬಹುದಿತ್ತು / ತಡೆಯಬಹುದಾಗಿತ್ತು.

<u>ಸತ್ಯಶೋದನ ಸಮಿತಿಯ ಶಿಪಾರಸ್ಸುಗಳು</u>

- ಹೊನ್ನಮ್ಮನನ್ನು ಕೊಲೆ ಮಾಡಿರುವ ಎಲ್ಲಾ ಅರೋಪಿಗಳಿಗೆ Prevention of Atrocity Act 1989 (POA) ರ ಪ್ರಕಾರ ಕೊಲೆ, ಮಹಿಳೆಯ ಮಾನಭಂಗ, ಲೈಂಗಿಕ ಶೋಷಣೆ, ಸಾರ್ವಜನಿಕ ಸ್ಥಳದಲ್ಲಿ ಅವಾಚ್ಯ ಶಬ್ದಗಳಿಂದ ಬೈದಿರುವುದು ದೈಹಿಕ ಹಿಂಸೆ, ಮನೆ ಮತ್ತು ಅಕೆಗೆ ಸಂಬಂಧಿಸಿದ ವಸ್ತುಗಳನ್ನು ನಾಶಮಾಡಿರುವ ಸೇರಿದಂತೆ ಸಂಬಂಧಪಟ್ಟ ಎಲ್ಲಾ ಸೆಕ್ಷನ್‌ಗಳನ್ನು ಹಾಕಿ ಕಾನೂನು ಬದ್ಧ ಶಿಕ್ಷೆಗೆ ಗುರಿ ಪಡಿಸುವುದು.
- ಹೊನ್ನಮ್ಮ ಕೊಲೆಗೆ ಪ್ರತ್ಯಕ್ಷ ಸಾಕ್ಷಿಯಾಗಿರುವ ಅವರ ಸ್ನೇಹಿತೆ ಮೀನಾಕ್ಷಮ್ಮ ಮತ್ತು ಅವರ ಮಕ್ಕಳಿಗೆ ಸೂಕ್ತವಾದ ಭದ್ರತೆ ನೀಡುವುದು.
- DYSP ಸೇರಿದಂತೆ ಸ್ಥಳೀಯ ಪೋಲಿಸ್ ಠಾಣೆಯ ಎಲ್ಲಾ ಪೋಲಿಸ್ ಅಧಿಕಾರಿಗಳನ್ನು ಕೂಡಲೇ ಅಮಾನತ್ತು ಮಾಡಬೇಕು.
- ಹೊನ್ನಮ್ಮನ ಮಗ ಮಂಜುನಾಥ ಮತ್ತು ಅವರ ಕುಟುಂಬಕ್ಕೆ ಪೋಲಿಸ್ ಭದ್ರತೆ ಒದಗಿಸಬೇಕು ಮತ್ತು ಅವರ ರಕ್ಷಣೆಗಾಗಿ ಆಯುಧಗಳನ್ನು ನೀಡಬೇಕು (ಪೋಲಿಸರ ತರಬೇತಿ, ಆಯುಧ ನೀಡಬೇಕು).
- ಹೊನ್ನಮ್ಮನ ಮಗ ಮಂಜುನಾಥನಿಗೆ 10 ಲಕ್ಷ ಪರಿಹಾರ ಮತ್ತು ಸರ್ಕಾರಿ ಹುದ್ದೆ ನೀಡಬೇಕು.
- ಗೋಪಾಲಪುರದಲ್ಲಿ ಇರುವ ಮಾದಿಗ ಕುಟುಂಬಗಳಿಗೆ ತಲಾ 5 ಎಕರೆ ಭೂಮಿ ಮತ್ತು ಕೃಷಿ ಪರಿಹಾರಗಳು ಸೇರಿದಂತೆ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸಬೇಕು.
- ಹೊನ್ನಮ್ಮನನ್ನು ಹತ್ಯೆ ಮಾಡಿದ ಆಪಾದಿತರಿಗೆ ಯಾವುದೇ ಕಾರಣಕ್ಕೂ ಜಾಮೀನು ನೀಡಬಾರದು.

1932ರಲ್ಲಿ ಮಹಾತ್ಮಗಾಂಧಿ, 2010 ರಲ್ಲಿ ಡಾ:ಬಿನಾಯಕ್ ಸೇನ್!
ಡಾ.ಬಿನಾಯಕ್‌ಸೇನ್–ಮಾನವ ಹಕ್ಕುಗಳ ರಕ್ಷಣೆಯ ಹೋರಾಟಗಾರರಿಗೆ ಸರ್ಕಾರದ ಬಹುಮಾನ!

ಪ್ರಜಾ ತಂತ್ರವನ್ನು ಕಾಪಾಡಿದರೆ ಜೀವಾವಧಿ ಶಿಕ್ಷೆಯೇ?

ಡಾ:ಬಿನಾಯಕ್‌ಸೇನ್‌ರವರು ಮಕ್ಕಳ ಹಾಗೂ ಸಾಮಾಜಿಕ ಆರೋಗ್ಯ ತಜ್ಞರು ಮತ್ತು ಮಾನವ ಹಕ್ಕುಗಳ ಹೋರಾಟಗಾರರು. ಅತ್ಯಂತ ಹಿಂದುಳಿದ ಪ್ರದೇಶವಾದ ಛತ್ತೀಸ್‌ಗಡದ ಕಡುಬಡವರ ಆರೋಗ್ಯ ಮತ್ತು ಮಾನವ ಹಕ್ಕುಗಳನ್ನು ಕಾಪಾಡಲು ತಮ್ಮ ಜೀವನವನ್ನು ಮುಡಿಪಾಗಿ ಇಡುವ ಮೂಲಕ ದಾರಿದ್ರ್ಯದ ಕತ್ತಲಿಗೆ ಬೆಳಕಾಗಿದ್ದಾರೆ. ಜನ ವಿರೋಧಿ ಸರ್ಕಾರಿ ನೀತಿಗಳೇ ಆದಿವಾಸಿಗಳ ಅನಾರೋಗ್ಯ ಹಾಗೂ ಹಸಿವಿನಿಂದಾಗುವ ಸಾವಿಗೆ ಕಾರಣವಾಗಿವೆ ಎಂದು ಸಾಬೀತಾದಾಗ ಅದನ್ನು ಬಹಿರಂಗವಾಗಿ ಖಂಡಿಸಿದ್ದಷ್ಟೆ ಅಲ್ಲ ಆರೋಗ್ಯ ಸೇವೆ ಸುಧಾರಣೆ ಕುರಿತ ಸಲಹಾಮಂಡಳಿಯ ಸದಸ್ಯರಾಗಿ ನೀಡಿದ ಸಲಹೆಗಳು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಪ್ರಚಾರಕ್ಕೆ ಮಾದರಿಯಾದವು. ಸರ್ಕಾರವೇ ಪ್ರಾಯೋಜಿಸಿದ 'ಸಾಲ್ವಾಜುಡುಂ' ಎಂಬ ಅಸಂವಿಧಾನಾತ್ಮಕ ಸ್ಥಳೀಯ ಸೇನೆಯು ಆದಿವಾಸಿಗಳ ಮಾರಣ ಹೋಮ ನಡೆಸಿದಾಗ ಅದನ್ನು ಆಧಾರ ಸಹಿತ ಬೆಳಕಿಗೆ ತಂದು ಖಂಡಿಸಿದವರು.

ಕಳೆದ 30 ವರ್ಷಗಳಿಂದ ಛತ್ತೀಸ್‌ಗಢದ ಗಣಿಕಾರ್ಮಿಕರ ಹಕ್ಕುಗಳಿಗಾಗಿ ನಡೆದ ಚಳುವಳಿಯಲ್ಲಿ ನಿರಂತರವಾಗಿ ಪಾಲ್ಗೊಂಡಿದ್ದಾರೆ. ಪಿಯುಸಿಎಲ್‌ನ ರಾಷ್ಟ್ರೀಯ ಉಪಾಧ್ಯಕ್ಷರು ಹಾಗೂ ಛತ್ತೀಸ್‌ಗಡದ ಪ್ರಧಾನ ಕಾರ್ಯದರ್ಶಿಗಳು ಆಗಿರುವ ಡಾ.ಸೆನ್‌ರವರು ಸುಸ್ಥಿರ ಅಭಿವೃದ್ಧಿಗಾಗಿ ಮತ್ತು ಮಾನವ ಹಕ್ಕುಗಳಿಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಮಾವೋವಾದಿಗಳನ್ನು ಬೆಂಬಲಿಸುತ್ತಾರೆಂಬ ಸುಳ್ಳು ಆರೋಪ ಹೊರಿಸಿ 2007 ರಲ್ಲಿ ಡಾ.ಸೆನ್‌ರವರನ್ನು ಬಂಧಿಸಿ 2 ವರ್ಷಗಳ ಕಾಲ ಜೈಲಿನಲ್ಲಿರಿಸಿದಾಗ ಜಗತ್ತಿನಾದ್ಯಂತ ಮಾನವ ಹಕ್ಕುಗಳ ಕಾರ್ಯಕರ್ತರು ತೀವ್ರವಾಗಿ ಖಂಡಿಸಿದರು. 20 ಮಂದಿ ನೊಬೆಲ್ ಪ್ರಶಸ್ತಿ ಪುರಸ್ಕೃತರು ಸಹ ತಮ್ಮ ಪ್ರತಿಭಟನೆಯನ್ನು ದಾಖಲಿಸಿದ್ದರು. ಈ ಕಾಯ್ದೆಯಲ್ಲಿ ಶ್ರೀ.ಸೆನ್ ಅವರನ್ನು 2007 ರಲ್ಲಿ ಬಂಧಿಸಿ 2 ವರ್ಷಗಳ ಕಾಲ ಜೈಲಿನಲ್ಲಿಡಲಾಗಿತ್ತು. 2009 ರ ಮೇ ತಿಂಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಸೆನ್ ಅವರಿಗೆ ಜಾಮೀನು ನೀಡಿತ್ತು.

ಡಾ.ಸೆನ್‌ರವರ ಸೇವೆಗೆ ಹಲವಾರು ಪ್ರಶಸ್ತಿಗಳು ಸಂದಿವೆ. ಗ್ರಾಮೀಣ ಬಡವರಿಗಾಗಿ ಮಾಡಿದ ಸೇವೆಗೆಂದು 2004ರಲ್ಲಿ ಇವರಿಗೆ 'ಪಾಲ್ ಹ್ಯಾರಿಸನ್' ಪ್ರಶಸ್ತಿ ಹಾಗೂ ಜಾಗತಿಕ ಆರೋಗ್ಯ ಮತ್ತು ಮಾನವ ಹಕ್ಕುಗಳಿಗಾಗಿ ನೀಡುವ 'ಜೋನಾಥನ್ ಮಾನ್' ಪ್ರಶಸ್ತಿಯು ಇವರಿಗೆ ದೊರೆತಿವೆ. ಜಗತ್ತಿನಾದ್ಯಂತ ದಮನಿತರ ಮಾನವ ಹಕ್ಕುಗಳಿಗಾಗಿ ದುಡಿಯುತ್ತಿರುವ ಎಲ್ಲರಿಗೂ ಡಾ.ಸೆನ್‌ರವರು ಸ್ಫೂರ್ತಿಯ ಸೆಲೆಯಾಗಿದ್ದಾರೆ.

ಜನಪರ ವೈದ್ಯ ಹಾಗೂ ಮಾನವ ಹಕ್ಕುಗಳ ಹೋರಾಟಗಾರರಾದ ಡಾ.ಬಿನಾಯಕ್‌ಸೆನ್ ಅವರಿಗೆ ಛತ್ತೀಸ್‌ಗಡದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಡಿಸೆಂಬರ್ 24, 2010 ರಂದು ರಾಷ್ಟ್ರ ದ್ರೋಹ ಹಾಗೂ ಒಳಸಂಚಿನ ಆರೋಪಗಳನ್ನು ಹೊರಿಸಿ ಜೀವಾವಧಿ ಶಿಕ್ಷೆ ನೀಡಿದೆ. **'ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ'** ಹಾಗೂ **'ಛತ್ತೀಸ್‌ಗಢ ವಿಶೇಷ ಸಾರ್ವಜನಿಕ ಕಾಯ್ದೆ'** ಎಂಬ ಭಯಾನಕ ಕಾಯ್ದೆಯಡಿ ಜೀವಾವಧಿ ಶಿಕ್ಷೆಯ ತೀರ್ಪನ್ನು ನೀಡಲಾಗಿದೆ.

ಸಾರ್ವಭೌಮ, ಪ್ರಜಾಸತ್ತಾತ್ಮಕ, ಸಮಾಜವಾದಿ ಗಣರಾಜ್ಯದಲ್ಲಿ ಡಾ.ಬಿನಾಯಕ್ ಸೆನ್ ಅವರು ಮಾಡಿರುವ ದೇಶದ್ರೋಹವಾದರೂ ಏನು? ಬಡವರ, ದಲಿತರ, ಮಹಿಳೆಯರ, ಆದಿವಾಸಿಗಳ ಉಣ್ಣುವ, ಉಡುವ, ದುಡಿವ, ವಸತಿ ಹಾಗೂ ಆತ್ಮಗೌರವದ ಹಕ್ಕನ್ನು ಕಾಪಾಡುವುದು ನಮ್ಮ ನಾಡಿನ ಸಂವಿಧಾನದ ಆಶಯ ಹಾಗೂ

ಆದ್ಯತೆಗಳಾಗಿವೆ.

ಸಂವಿಧಾನದ ಆಶಯಗಳು ಹಾಗೂ ಪ್ರಜಾಸತಾತ್ಮಕ ಮೌಲ್ಯಗಳಿಗಾಗಿ ಕಳೆದ 30 ವರ್ಷಗಳಿಂದ ದುಡಿಯುತ್ತಿರುವ ಶ್ರೀ. ಬಿನಾಯಕ್‌ಸೇನ್ ಅವರಿಗೆ ವಿಧಿಸಿರುವ ಜೀವಾವಧಿ ಶಿಕ್ಷೆಯು ಪ್ರಜಾಪ್ರಭುತ್ವದ ಅಡಿಪಾಯವಾದ ಭಿನ್ನಾಭಿಪ್ರಾಯದ ದನಿಯನ್ನೇ ಉಡುಗಿಸುವ ತಂತ್ರವಾಗಿದೆ. ಮಾನವ ಹಕ್ಕುಗಳು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಂಬುವ, ಪ್ರತಿಪಾದಿಸುವವರೆಲ್ಲರೂ ದೇಶದ್ರೋಹಿಗಳಾದರೆ ದೇಶದ ಜೈಲುಗಳು ತುಂಬಿ ಹೋಗಬೇಕಾಗುತ್ತದೆ. ಮಾನವ ಹಕ್ಕುಗಳು ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳು, ಸರಳು, ಸರಪಳಿಗಳ ಬಂಧಿಯಾಗುವುದನ್ನು ತಡೆಯೋಣ. ಶ್ರೀ. ಬಿನಾಯಕ್‌ಸೇನ್ ಅವರ ಬಿಡುಗಡೆಗೆ ಒತ್ತಾಯಿಸೋಣ.

ಕರ್ನಾಟಕದಲ್ಲಿ ಡಾ:ಬಿನಾಯಕ್ ಸೇನ್‌ರ ವಿರುದ್ಧ ಬಂದ ತೀರ್ಪನ್ನು ಖಂಡಿಸಿ ಬೃಹತ್ ಪ್ರತಿಭಟನ ಕಾರ್ಯಕ್ರಮ ಆಯೋಜಿಸಲು ವಿವಿಧ ಮಾನವಹಕ್ಕು ಚಳುವಳಿಗಳೊಂದಿಗೆ ಜನಾರೋಗ್ಯ ಆಂದೋಲನ ಕೈಜೋಡಿಸಿದೆ. ಡಿಸೆಂಬರ್ 29, 2010 ಮತ್ತು ಜನವರಿ 30, 2011 ರಂದು ಬೆಂಗಳೂರಿನ ಪುರಭವನದ ಮುಂದೆ ಬೃಹತ್ ಪ್ರತಿಭಟನೆಯನ್ನು ಆಯೋಜಿಸಲಾಗಿತ್ತು.

ಪ್ರಸ್ತುತ:

21 ನೇ ಶತಕದಲ್ಲಿ ಆರೋಗ್ಯ ಪಾಲನೆಯು ಪ್ರತಿಯೊಬ್ಬರ ಮೂಲಭೂತ ಮಾನವ ಹಕ್ಕಾಗಬೇಕು ಎಂಬ ವಿಷಯದ ಬಗ್ಗೆ ಪ್ರಪಂಚದಾದ್ಯಂತ ಹಲವಾರು ಚಳುವಳಿಗಳು ವಿವಿಧ ಸ್ವರೂಪಗಳಲ್ಲಿ ನಡೆಯುತ್ತಿವೆ. ಅಮೆರಿಕಾ (USA) ದೇಶವೊಂದನ್ನು ಹೊರತುಪಡಿಸಿ ಉಳಿದೆಲ್ಲಾ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಎಲ್ಲಾ ನಾಗರಿಕರು ಆರೋಗ್ಯ ಸೇವೆಯನ್ನು ಕೊಡುವ ಜಾಗದಲ್ಲಿ ಸಾಂಕೇತಿಕವಾಗಿ ಸ್ವಲ್ಪ ಹಣ ಪಾವತಿಸುವ ಮೂಲಕವೋ ಅಥವಾ ಸಂಪೂರ್ಣ ಉಚಿತವಾಗಿಯೋ ಆರೋಗ್ಯ ಪಾಲನೆಯನ್ನು ಪಡೆಯುವಂತಹ ವ್ಯವಸ್ಥೆಯನ್ನು ಹೊಂದಿವೆ.

ಇತ್ತೀಚಿನ ದಿನಗಳಲ್ಲಿ ದಕ್ಷಿಣ ಆಫ್ರಿಕಾ, ಕ್ಯೂಬಾ, ವೆನೆಜುವೆಲ್ಲಾ ಮುಂತಾದ ದೇಶಗಳು ಆರೋಗ್ಯ ಪಾಲನೆಯು ಮೂಲಭೂತ ಹಕ್ಕೆಂದು ಘೋಷಿಸಿ ತಮ್ಮ ಸಂವಿಧಾನದಲ್ಲಿ ತಿದ್ದುಪಡಿ ಮಾಡಿದ್ದಾರೆ. ಥಾಯ್ಲೆಂಡ್ ಮತ್ತು ಬ್ರೆಜಿಲ್ ದೇಶಗಳು 'ಸಾರ್ವತ್ರಿಕ ಆರೋಗ್ಯ ಪಾಲನೆ'ಯನ್ನು ಅನುಷ್ಠಾನಗೊಳಿಸಿದ್ದಾರೆ.

ಭಾರತ ಸರ್ಕಾರವು ಸಾರ್ವತ್ರಿಕ ಆರೋಗ್ಯ ಪಾಲನೆಯ ಬಗ್ಗೆ ಅಧ್ಯಯನ ನಡೆಸಿ ವರದಿ ಒಪ್ಪಿಸುವ ವರಿಷ್ಟ ಮಟ್ಟದ ತಜ್ಞರ ತಂಡ (High Level Expert Group)ನ್ನು ನೇಮಿಸಿದೆ. ಹೀಗಿರುವಾಗ ವೈದ್ಯಕೀಯ ಸ್ನೇಹಿತರ ಬಳಗ (Medico Friend circle), ಜನಾರೋಗ್ಯ ಆಂದೋಲನ ಮುಂತಾದ ಸಂಘಟನೆಗಳು ಭಾರತದಲ್ಲಿ ಸಾರ್ವತ್ರಿಕ ಆರೋಗ್ಯ ಪಾಲನೆಯ ಬಗ್ಗೆ ಆಳವಾದ ಚರ್ಚೆಯನ್ನು ಪ್ರಾರಂಭಿಸಿದ್ದಾರೆ.

ಸಾರ್ವತ್ರಿಕ ಆರೋಗ್ಯ ಪಾಲನೆ ಎಂದರೇನು?

ಸಾರ್ವತ್ರಿಕ ವ್ಯಾಪ್ತಿ: ಒಂದು ದೇಶದಲ್ಲಿ ವ್ಯಕ್ತಿಯೊಬ್ಬನ ಆದಾಯ ಶ್ರೇಣಿ ಯಾವುದೇ ಆಗಿದ್ದರೂ, ಸಾಮಾಜಿಕ ಸ್ಥಾಯಿ ಏನೇ ಆಗಿದ್ದರೂ ಅಥವ ವಾಸಸ್ಥಾನ ಎಲ್ಲೇ ಇದ್ದರೂ ಅದ್ಯಾವುದನ್ನೂ ಪರಿಗಣಿಸದೇ ದೇಶದ ಎಲ್ಲಾ ಜನರಿಗೆ ತಮ್ಮ ಅಗತ್ಯ ಮತ್ತು ಆದ್ಯತೆಗಳಿಗನುಗುಣವಾಗಿ ಅತ್ಯುತ್ತಮ ಗುಣಮಟ್ಟದ ಸೇವೆಗಳು ಕೈಗೆಟುಕುವಂತಹ ವ್ಯವಸ್ಥೆಯನ್ನು ರಚಿಸುವುದು.

ಮುಖ್ಯ ಅಂಶಗಳು:

ಸುಲಭವಾಗಿ, ಸರ್ವರಿಗೂ, ಗುಣಮಟ್ಟದ ಆರೋಗ್ಯ ಸೇವೆಗಳು ಉಚಿತವಾಗಿ ಲಭ್ಯವಿರಬೇಕು. ಇದನ್ನು ಸಾಧಿಸಬೇಕಾದರೆ ಕೆಲವೊಂದು ಮುಖ್ಯ ಬದಲಾವಣೆಗಳು ಸರ್ಕಾರದ ನೀತಿ ಮತ್ತು ಕಾರ್ಯಕ್ರಮಗಳಲ್ಲಿ ಜಾರಿ ಆಗಬೇಕು.

1. ಆರೋಗ್ಯ ಪಾಲನೆಗೆ ದೇಶದಲ್ಲಿ ಒಟ್ಟು ಆಗುವ ಖರ್ಚಿನಲ್ಲಿ (ಸರ್ಕಾರಿ–ಖಾಸಗಿ ಸೇರಿಸಿ) ಸರ್ಕಾರದ ಪಾಲು 20% ಮಾತ್ರ. 80% ಖರ್ಚು ಖಾಸಗಿಯಲ್ಲಿ ಆಗುತ್ತದೆ. ಸಾರ್ವತ್ರಿಕ ಆರೋಗ್ಯ ಪಾಲನೆಯು ನನಸಾಗಬೇಕಾದರೆ ಸರ್ಕಾರದ ಖರ್ಚಿನ ಭಾಗ 80% ಆಗಿ, ಖಾಸಗಿಯಲ್ಲಿ ಆಗುವ ಖರ್ಚು 20% ಕ್ಕೆ ಇಳಿಯಬೇಕು.
2. ಖಾಸಗಿ ಮತ್ತು ಸರ್ಕಾರಿ ಆರೋಗ್ಯ ಸೇವೆಗಳ ಮರು–ಮಾರ್ಪಾಡಾಗಬೇಕು. ಜನರು ಒಂದೇ ಕಡೆ (ಸರ್ಕಾರಕ್ಕೆ ತೆರಿಗೆ ಮೂಲಕ) ದುಡ್ಡು ಕೊಟ್ಟು, ಖಾಸಗಿಯಲ್ಲಿ ಸರ್ಕಾರ ಒದಗಿಸುವ ಸೇವೆಗಳಿಗೆ ನಿಗದಿತ ಮತ್ತು ನಿಯಂತ್ರಿತ ರೂಪದಲ್ಲಿ ಸರ್ಕಾರವೇ ಹಣ ಪಾವತಿ ಮಾಡುವ ವ್ಯವಸ್ಥೆ (ಅಂದರೆ, ಯಾವ ನಾಗರಿಕ/ಳೂ ಸರ್ಕಾರದಲ್ಲಿ ಅಥವಾ ಖಾಸಗಿಯಲ್ಲಿ ದುಡ್ಡು ಕೊಡುವಂತಿಲ್ಲ). ಇದಕ್ಕಾಗಿ ಸರ್ಕಾರ ತನ್ನ ಆಯವ್ಯಯದ ಆರೋಗ್ಯದ ಖರ್ಚನ್ನು 1.2% ದಿಂದ ಕನಿಷ್ಠ 5% ಕ್ಕೆ ಹೆಚ್ಚಿಸಬೇಕು.
3. ಯಾವುದೇ ಸಂದರ್ಭದಲ್ಲಿ ಜನರ/ನಾಗರೀಕರ ಮೇಲೆ ಆರೋಗ್ಯಕ್ಕಾಗಿ ಶುಲ್ಕವನ್ನು ವಿಧಿಸಬಾರದು.
4. ಯಾವುದೇ ರೀತಿಯ ಗುರಿ (Trarget group) ಗುಂಪುಗಳಲ್ಲದೆ, ಎಲ್ಲರಿಗೂ ಅನ್ವಯವಾಗುವಂತಹ 'ಸಮಗ್ರ ಆರೋಗ್ಯ ಸೇವೆಗಳು' ನಾಗರೀಕರಿಗೆ ಸರ್ಕಾರದ ಮೂಲಕ ಖಾಸಗಿ ಅಥವಾ ಸರ್ಕಾರಿ ಕೇಂದ್ರಗಳಲ್ಲಿ ಸಿಗುವಂತಾಗಬೇಕು.

ಸರ್ಕಾರ ಗಮನಕೊಡಬೇಕಾದ ಮೂರು ಪ್ರಮುಖ ವಿಷಯಗಳು:

1. ಆರೋಗ್ಯಕ್ಕಾಗಿ ಸೂಕ್ತ ಹಣಕಾಸಿನ ವ್ಯವಸ್ಥೆ
2. ಸೇವೆಗಳನ್ನು ಖಾತ್ರಿಗೊಳಿಸುವುದು: ಆರೋಗ್ಯ ಕೇಂದ್ರಗಳಲ್ಲಿ ಮತ್ತು ಖಾಸಗಿಯಲ್ಲಿ ಲಭ್ಯವಿರುವ ಆರೋಗ್ಯ ಸೇವೆಗಳು ಹೇಗಿರಬೇಕು, ಯಾವುದು ಇರಬೇಕು ಮುಂತಾದವುಗಳ ಬಗ್ಗೆ ಹರಿತವಾದ ವ್ಯಾಖ್ಯಾನ.
3. ಆಡಳಿತ, ಮೇಲ್ವಿಚಾರಣೆ ಮತ್ತು ನಿಯಂತ್ರಣ: ಸರ್ಕಾರವು ಆರೋಗ್ಯ ಸೇವೆಗಳ ಗುಣಮಟ್ಟ, ಖಾಸಗಿಯವರು ವಿಧಿಸುವ ಶುಲ್ಕ ಮತ್ತು ಜನರ ಕುಂದುಕೊರತೆಗಳನ್ನು ನಿವಾರಿಸುವುದರ ಬಗ್ಗೆ ನಿಯಮಾವಳಿಗಳನ್ನು ಮಾಡಿ ಖಾಸಗಿಯನ್ನು ನಿಯಂತ್ರಿಸುವ ಕಾರ್ಯನಿರ್ವಹಿಸುವುದು.

ಆರೋಗ್ಯವು ಮೂಲಭೂತ ಹಕ್ಕಾಗುವತ್ತ ಸಾರ್ವತ್ರಿಕ ಆರೋಗ್ಯ ಪಾಲನೆಯು ಅತ್ಯಂತ ಪ್ರಮುಖ ಹೆಜ್ಜೆಯಾಗಿದೆ.

(ಇ.ಪ್ರೇಮ್‌ದಾಸ್
ಮೆಡಿಕೊ ಫ್ರೆಂಡ್ ಸರ್ಕಲ್ ಪತ್ರಿಕೆಯ ವಿವಿಧ ಲೇಖನಗಳ ಸಾರಾಂಶ)

1.ಅತ್ಯಗತ್ಯ ಔಷಧಿಗಳು– ಕಾರ್ಯಾಚರಣೆ

**ಹಾವೇರಿ ಜಿಲ್ಲಾ ಆರೋಗ್ಯ ಇಲಾಖೆಯ ದಿವ್ಯ ನಿರ್ಲಕ್ಷ್ಯ
ಬಡವರಿಗೆ ಹಂಚಬೇಕಿದ್ದ ಔಷಧಿಗಳು ಬೀದಿ ಪಾಲಾದವು!**

ಸರಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಹೊರಗಡೆ ಔಷಧಿ ಮಾತ್ರೆಗೆ ಚೀಟಿ ಬರೆದುಕೊಟ್ಟರೆ ಅಂತಹವರ ವಿರುದ್ಧ ನಾನು ಕ್ರಮಕೈಗೊಳ್ಳುತ್ತೇನೆ ಎಂದು ಆರೋಗ್ಯ ಮಂತ್ರಿಗಳು ಆಗಾಗ್ಗೆ ಪತ್ರಿಕೆಗಳಲ್ಲಿ ಹೇಳಿಕೆ ನೀಡಿದ್ದನ್ನು ನೀವು ನೋಡಿರಬಹುದು.

ಆದರೆ ಹಾವೇರಿ ಜಿಲ್ಲೆಯ ಜಿಲ್ಲಾ ಆರೋಗ್ಯ ಇಲಾಖೆಯ ದಿವ್ಯ ನಿರ್ಲಕ್ಷ್ಯ ಬೇಜವಾಬ್ದಾರಿತನದಿಂದ ಹಾವೇರಿ ಶಿವಬಸವನಗರದ ಮಾನ್ವಿ ಕಾಂಪೌಂಡಿನ ಜಾಲಿ ಗಿಡ ಚರಂಡಿಯಲ್ಲಿ ಸುಮಾರು 2 ಚೀಲದಷ್ಟು ಮಾತ್ರೆ, ಔಷಧಿಗಳನ್ನು ಬಿಸಾಕಿದ್ದನ್ನು ಹಾವೇರಿ ಸ್ಥಳೀಯ ಪತ್ರಿಕೆ ಕೌರವದಲ್ಲಿ ಸೆಪ್ಟೆಂಬರ್ 10.2010 ರಂದು ಔಷಧಿಗಳ ಚಿತ್ರ ಸಮೇತ ಪ್ರಕಟಣೆಗೊಂಡಿತ್ತು.

ಪತ್ರಿಕೆಯನ್ನು ನೋಡಿದ ಹಾವೇರಿ ಜಿಲ್ಲೆ, ಜನಾರೋಗ್ಯ ಆಂದೋಲನ ಕರ್ನಾಟಕ ಸಂಘಟನೆಯ ಕಾರ್ಯಕರ್ತರು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ವರದಿ ಮಾಡಿಕೊಂಡು ಎಲ್ಲಾ ದಾಖಲಾತಿ ಸಮೇತ ದಿನಾಂಕ 15.09.2010 ರಂದು (JAA-K) ಕಾರ್ಯಕರ್ತರು ಖುದ್ದಾಗಿ ಕರ್ನಾಟಕ ಲೋಕಾಯುಕ್ತ ಕಛೇರಿಗೆ ತೆರಳಿ ಹಾವೇರಿ ಜಿಲ್ಲಾ ಆರೋಗ್ಯಾಧಿಕಾರಿ ಡಾ॥ ಈಶ್ವರ ಮಾಳೋದೆ ಅವರ ವಿರುದ್ಧ ಔಷಧಿ ಮಾತ್ರೆಗಳ ಕುರಿತು ತನಿಖೆಗಾಗಿ ದೂರು ಸಲ್ಲಿಸಿದೆ.

ಈ ಕುರಿತು ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು ಬಿಸಾಕಿದ ಔಷಧಿಗಳ ತನಿಖೆಗಾಗಿ 3 ಜನರ ತನಿಖಾ ತಂಡವನ್ನು ನೇಮಿಸಿದ್ದಾರೆ. ಈ ತನಿಖಾ ತಂಡ ದಿನಾಂಕ 20.10.2010 ರಂದು ಹಾವೇರಿ ಶಿವಬಸವನಗರಕ್ಕೆ ಭೇಟಿ ನೀಡಿ ಔಷಧಿ ಮಾತ್ರೆಗಳು ಬಿಸಾಕಿದ ಸ್ಥಳ ಪರಿಶೀಲಿಸಿ ಇನ್ನು ಅಳಿದುಳಿದ ಔಷಧಿಗಳನ್ನು ತೆಗೆದುಕೊಂಡು ಅಲ್ಲಿನ ಸಾರ್ವಜನಿಕರೊಂದಿಗೆ ಚರ್ಚಿಸಿದರು. ಅಲ್ಲಿಂದ ಬೆಳಿಗ್ಗೆ 9–15 ಕ್ಕೆ ಹಾವೇರಿಯ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದರು. ಆದರೆ ಆಸ್ಪತ್ರೆಯಲ್ಲಿ 2–3 ಸಿಬ್ಬಂದಿಗಳನ್ನು ಬಿಟ್ಟರೆ ಇನ್ನು ಅನೇಕ ಸಿಬ್ಬಂದಿಗಳು ಆಶ್ಚರ್ಯವೆಂದರೆ ಜಿಲ್ಲಾ ಸರ್ಜನ್ ಅವರೇ ಬಂದಿರಲಿಲ್ಲ. ಕೊನೆಗೆ ಲೋಕಾಯುಕ್ತ ತಂಡ ಬಂದ ಸುದ್ದಿ ತಿಳಿದ ಮೇಲೆ ಸರ್ಜನ್ ಬಂದರು. ಆಗ ಸಮಯ 9–45 ಗಂಟೆ ಆಗುತ್ತಾ ಬಂತು. ಎಲ್ಲಾ ಸಿಬ್ಬಂದಿಗಳಿಗೂ ಎಚ್ಚರಿಕೆ ನೀಡಿ ಹಾಜರಾತಿ ಹಾಕಲು ಸೂಚಿಸುತ್ತಾ ಕೆಲವರಿಗೆ ಲೇಟಾಗಿ ಬಂದ ಕಾರಣ ಕೇಳಿ ನೋಟೀಸು ಜಾರಿ ಮಾಡಿದರು.

ಅಲ್ಲಿಂದ ಜಿಲ್ಲಾ ಆಸ್ಪತ್ರೆಯನ್ನು ವೀಕ್ಷಿಸಿದ ನಂತರ ಬಿಸಾಕಿದ ಔಷಧಿಗಳನ್ನು ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಚೀಲದಲ್ಲಿ ತುಂಬಿಕೊಂಡು ಬಂದು ಜಿಲ್ಲಾ ಆಸ್ಪತ್ರೆಯ ಕಟ್ಟಡದ ಮೂಲೆಯಲ್ಲಿ ಬಿಸಾಕಿದ್ದರು. ಅದನ್ನು ಗಮನಿಸಿದ ಲೋಕಾಯುಕ್ತರ ತಂಡ 'ಕಾನೂನು ರೀತಿಯಲ್ಲಿ ಔಷಧಿಗಳನ್ನು ಇಡದೆ ಕಂಡ ಕಂಡಲ್ಲಿ ಬಿಸಾಕಿದ್ದಿರಲ್ಲ' ಎಂದು ಪ್ರಶ್ನಿಸಿದಾಗ ಅಧಿಕಾರಿಗಳು ತಡಬಡಿಸಿ ಉತ್ತರ ನೀಡಿದರು ಅಷ್ಟೊತ್ತಿಗೆ ಹಾವೇರಿ ತಾಲ್ಲೂಕು ಟಿ.ಹೆಚ್.ಓ ಬಂದರು. ಅವರಿಗೂ ಈ ಬಗ್ಗೆ ಪ್ರಶ್ನಿಸಿದರೆ ಸರಿಯಾಗಿ ಉತ್ತರಿಸಲಿಲ್ಲ. ಕೊನೆಗೆ ಬಿಸಾಕಿದ ಔಷಧಿ ಮಾತ್ರೆಗಳ ಪಟ್ಟಿ ಮತ್ತು ವಿವರ ಕೇಳಿದರು ಟಿಹೆಚ್ಓ ಹತ್ತಿರ ಇರಲಿಲ್ಲ. ಮತ್ತು ಪಟ್ಟಿ ಮಾಡಿರಲಿಲ್ಲ.

ಕೊನೆಗೆ ತನಿಖಾ ತಂಡ ಹಾವೇರಿ ಜಿಲ್ಲಾ ಆರೋಗ್ಯಾಧಿಕಾರಿ ಡಾ॥ ಈಶ್ವರ ಮಾಳೋದೆ ಅವರ ಕಛೇರಿಗೆ ತೆರಳಿದಾಗ ಡಿ.ಹೆಚ್.ಓ ಇರಲಿಲ್ಲ. ಆದರೆ ಸುದ್ದಿ ಕೇಳಿದ ತಕ್ಷಣ ಬಂದರು ಅಲ್ಲಿಗೆ 11–30

ಗಂಟೆ ಆಗಿತ್ತು ಹಾಜರಾತಿ ಪುಸ್ತಕ ನೋಡಿದರೆ ಡಿ.ಹೆಚ್.ಓ ಅವರು ಸಹಿ ಮಾಡಿರಲಿಲ್ಲ. ಕೆಲವು ಸಿಬ್ಬಂದಿಗಳು ಸಮಯ ಮೀರಿ ಬಂದಿದ್ದರು ಅವರಿಗೆ ಕಾರಣ ಕೇಳಿದರೆ ಅನಾರೋಗ್ಯ ಬಸ್ಸು ಸಿಗಲಿಲ್ಲವೆಂಬ ನೆಪ ಹೇಳಿದರು.

ತನಿಖಾ ತಂಡ ಬಿಸಾಕಿದ ಔಷಧಿ ಮಾತ್ರೆಗಳ ಬಗ್ಗೆ ಡಿ.ಹೆಚ್.ಓ ಅವರನ್ನು ವಿಚಾರಿಸಿದಾಗ "ಆರೋಗ್ಯ ಇಲಾಖೆಯ ಅಧಿಕಾರಿಗಳ ನೇತೃತ್ವದಲ್ಲಿ ತನಿಖೆಯನ್ನು ಮಾಡಲಿಕ್ಕೆ ಹೇಳಿದ್ದೇನೆ. ಇನ್ನೂ ವರದಿ ನೀಡಿಲ್ಲ" ಎಂದರು. ಯಾರು ಯಾವ ಆಸ್ಪತ್ರೆಯಿಂದ ಬಿಸಾಕಿದ್ದು ಎಂಬುದರ ಬಗ್ಗೆ ವಿಚಾರ ಮಾಡಿದಾಗ "ಯಾವುದೋ ಒಂದು ಉಪಕೇಂದ್ರದ ಕಿರಿಯ ಆರೋಗ್ಯ ಸಹಾಯಕಿ ಬಿಸಾಕಿದ್ದು ಗೊತ್ತಾಗಿದೆ, ಆದರೆ ಆ ಸಿಬ್ಬಂದಿ ಒಪ್ಪಿಕೊಳ್ಳುತ್ತಿಲ್ಲ ಎಂದರು. ತನಿಖಾ ತಂಡ ಜಿಲ್ಲಾ ಆರೋಗ್ಯ ಇಲಾಖೆಯ ಫಾರ್ಮಾಸಿಸ್ಟ್ ಅವರನ್ನು ಕರೆದು ಕೇಳಿದಾಗ ಮೊದ ಮೊದಲು ಈ ಘಟನೆಗೂ ತನಗೂ ಸಂಬಂಧವಿಲ್ಲದ ರೀತಿಯಲ್ಲಿ ಮಾತನಾಡಿದರು. ತನಿಖಾ ತಂಡ ಎಚ್ಚರಿಕೆ ನೀಡಿದ ಮೇಲೆ ತಮ್ಮ ಔಷಧಿ ಉಗ್ರಾಣದಿಂದ ಉಪಕೇಂದ್ರಕ್ಕೆ ಹೋದ ಔಷಧಿಗಳು ಎಂದು ಒಪ್ಪಿಕೊಂಡರು. ಈ ಘಟನೆ ಕುರಿತು ಡಿ.ಎಚ್.ಓ ಅವರನ್ನು ವರದಿ ಕೇಳಿದಾಗ 8 ದಿನ ಸಮಯ ಕೇಳಿದರು. ಅಷ್ಟರಲ್ಲಿ ವರದಿ ಕೊಡದಿದ್ದರೆ ನೋಟೀಸು ಜಾರಿ ಮಾಡುವುದಾಗಿ ತನಿಖಾ ತಂಡದವರು ಎಚ್ಚರಿಕೆ ನೀಡಿದರು.

ಕೊನೆಯಲ್ಲಿ ಹಾವೇರಿ ಜಿಲ್ಲಾ ಜನಾರೋಗ್ಯ ಆಂದೋಲನ ಕರ್ನಾಟಕ ಕಾರ್ಯಕರ್ತರು ಜಿಲ್ಲೆಯಲ್ಲಿ ನಡೆದ ಶಿಶುಮರಣ ಹಾವುಕಡಿತ ಸಾವು ನಾಯಿ ಕಡಿತಕ್ಕೆ ಔಷಧಿ ನಿರಾಕರಣೆ, ಡೆಂಗೆ ಜ್ವರ ಸಾವು ಆದ ಪ್ರಕರಣಗಳ ದಾಖಲಾತಿಗಳನ್ನು ತೋರಿಸಿ ಪ್ರಶ್ನಿಸಿದರೆ ಡಿ.ಹೆಚ್.ಓ ಅವರಿಂದ ನೀರಸ ಪ್ರತಿಕ್ರಿಯೆ ಮತ್ತು ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಮನೋಭಾವನೆ ಎದ್ದು ಕಾಣುತ್ತಿತ್ತು.

ಲೋಕಾಯುಕ್ತರ ಕಛೇರಿಯಿಂದ ಹಾವೇರಿಗೆ ಔಷಧಿಗಳ ತನಿಖೆಗಾಗಿ ನೇಮಿಸಿದ ತನಿಖಾ ತಂಡವು ಈ ಕುರಿತು ವರದಿಯನ್ನು ತಯಾರಿಸಿದೆ. ಈ ಪ್ರಕ್ರಿಯೆ ಕುರಿತು ಲೋಕಾಯುಕ್ತ ತನಿಖಾ ತಂಡದ ಡಾ:ಹನುಮಂತಪ್ಪ ಅವರನ್ನು ಕೇಳಿದಾಗ, ಫೆಬ್ರವರಿ, 2011 ರ ಕೊನೆವಾರದಲ್ಲಿ ಲೋಕಾಯುಕ್ತರಿಗೆ ಸಲ್ಲಿಸುತ್ತೇವೆಂದು ಹೇಳಿದರು.

ಈಗ ಲೋಕಾಯುಕ್ತರ ಮುಂದಿನ ಕ್ರಮಕ್ಕಾಗಿ ಆಂದೋಲನ ಅನುಸರಣೆ ಮಾಡುತ್ತಿದೆ.

ಈಗ ಹೇಳಿ ಆರೋಗ್ಯ ಮಂತ್ರಿಗಳೇ:– ಹಾವೇರಿ ಡಿ.ಹೆಚ್.ಓ ಮತ್ತು ಸಿಬ್ಬಂದಿಗಳ ಮೇಲೆ ಸರಿಯಾದ ಮೇಲ್ವಿಚಾರಣೆ ಹಾಗೂ ನಿರ್ದೇಶನಗಳು ಇಲ್ಲದ್ದರಿಂದ ಬಡವರಿಗೆ ವಿತರಿಸುವ ಔಷಧಿಗಳು ಚರಂಡಿ ಪಾಲಾಗಿವೆ. ಯಾವಾಗ ಕ್ರಿಮಿನಲ್ ಕೇಸ್ ಹಾಕ್ತೀರಾ?

ವರದಿ : ಎಂ ಕರಿಬಸಪ್ಪ, ಹಾವೇರಿ

ಔಷಧಿ, ಮಾತ್ರೆಗಳು ಬೀಸಾಡಿದ ಸ್ಥಳಕ್ಕೆ ಆರೋಗ್ಯಾಧಿಕಾರಿಗಳ ಭೇಟಿ

ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ

ಕೌರವ ಎಫೆಕ್ಟ್

ಹಾವೇರಿಯ ಮಾಸ್ತಿ ಕಂಪೌಂಡಿನಲ್ಲಿ ಬೀಸಾಡಲಾಗಿರುವ ಔಷಧಿ ಮಾತ್ರೆಗಳನ್ನು ಪರಿಶೀಲಿಸುತ್ತಿರುವ ಆರೋಗ್ಯ ಇಲಾಖೆಯ ಅಧಿಕಾರಿಗಳು.

2. ಬಳ್ಳಾರಿ ಜಿಲ್ಲೆಯಲ್ಲಿ 31 ಜನರ ಸಾವಿನ ಬಗ್ಗೆ ಜನಾರೋಗ್ಯ ಆಂದೋಲನ – ಕರ್ನಾಟಕದಿಂದ ಲೋಕಾಯುಕ್ತರಿಗೆ ದೂರು

ಬಳ್ಳಾರಿ ಜಿಲ್ಲೆ ಮಾನ್ಯ ಆರೋಗ್ಯ ಸಚಿವರ ತವರು ಜಿಲ್ಲೆ ಸಾರ್ವಜನಿಕ ಆರೋಗ್ಯ ಕ್ಷೇತ್ರ ರಾಜ್ಯಾದಾದ್ಯಂತ ಹದಗೆಟ್ಟಿದ್ದರೂ ಕನಿಷ್ಠ ಆರೋಗ್ಯ ಸಚಿವರ ತವರು ಜಿಲ್ಲೆಯಲ್ಲಿ ತಕ್ಕ ಮಟ್ಟಿಗಾದರೂ ಸುಧಾರಿಸಬಹುದಾಗಿತ್ತು. ಆದರೆ ಬಳ್ಳಾರಿ ಈಗಾಗಲೇ ಮೇಲ್ನೋಟಕ್ಕೆ ಕಂಡು ಬಂದಿರುವಂತೆ ಇಲ್ಲಿನ ಒಟ್ಟಾರೆ ಆಡಳಿತ ದಿಕ್ಕು ದೆಶೆ ಇಲ್ಲದೆ ಹಾಳಾಗಿದೆ. ಅದಕ್ಕೆ ಸ್ಪಷ್ಟ ಉದಾಹರಣೆ ಅಕ್ಟೋಬರ್ ತಿಂಗಳಲ್ಲಿ ಹೊಸಪೇಟೆ ತಾಲ್ಲೂಕಿನ ಗಾದಿಗನೂರು PHC ವ್ಯಾಪ್ತಿಯ ಹಳ್ಳಿಗಳಲ್ಲಿ ಕಾಣಿಸಿಕೊಂಡ ವ್ಯಾಪಕ ಸಾಂಕ್ರಮಿಕ ರೋಗಗಳೇ ಸಾಕ್ಷಿ. ಪ್ರತಿ ದಿನ ಮಾಧ್ಯಮಗಳಲ್ಲಿ ಅಲ್ಲಿನ ಜನರ ಸಂಕಟಗಳನ್ನು ಬಿತ್ತರಿಸಲಾಗುತ್ತಿದೆ. ಆದರೆ ಬೆಂಗಳೂರಿಗಿಂತ ಬಳ್ಳಾರಿಯಲ್ಲಿಯೇ ಹೆಚ್ಚಾಗಿ ವಾಸ ಮಾಡುವ ಆರೋಗ್ಯ ಸಚಿವರಾದ ಬಿ. ರಾಮುಲು ಕನಿಷ್ಠ ಸೌಜನ್ಯಕ್ಕಾದರೂ ಆ ಹಳ್ಳಿಗಳಿಗೆ ಬಂದು ನೋಡಲಿಲ್ಲ. ಸುಮಾರು 31 ಮಂದಿ ಬಡವರು ಸತ್ತಿದ್ದಾರೆ ಇದಕ್ಕೆ ಕೇವಲ ಅಂದಿನ ಸಾಂಕ್ರಮಿಕ ರೋಗಗಳೇ ಕಾರಣ ಅಲ್ಲ. ಅನೇಕ ವರ್ಷಗಳಿಂದ ಪ್ರಾಥಮಿಕ ಆರೋಗ್ಯ ಪಾಲನೆ ಮಾಡದೆ ಅರೋಗ್ಯ ಇಲಾಖೆಯ ಕರ್ತವ್ಯ ಲೋಪ ಎಸಗಿದ್ದಾರೆ. ಈ ಘಟನೆಯಲ್ಲಿ ಬಹುತೇಕ ಬಡ ಜನರು, ಕೃಷಿ ಕೂಲಿ ಕಾರ್ಮಿಕರು ಪ್ರಾಣ ಕಳೆದುಕೊಂಡಿರುತ್ತಾರೆ. ಇವರ ಜೀವಗಳಿಗೆ ರಾಜ್ಯ ಸರ್ಕಾರದಿಂದ ಬೆಲೆ ಸಿಗಲಿಲ್ಲ ಏಕೆಂದರೆ ಮುಖ್ಯಮಂತ್ರಿಗಳು ಸೀರೆ ಹಂಚುವ ಕೆಲಸದಲ್ಲಿ ನಾಡಿನ ಜನರ ಕಿವಿ ಮೇಲೆ ಹೂವಿಡುವುದರ ಜೊತೆಯಲ್ಲಿ ಹಾಗೂ ಮಾನ್ಯ ಆರೋಗ್ಯ ಸಚಿವರು ಮತ್ತು ತಮ್ಮ ಆದ್ಯ ಕರ್ತವ್ಯವಾದ ಆರೋಗ್ಯವೊಂದನ್ನು ಬಿಟ್ಟು ಬಾಕಿ ಎಲ್ಲಾ ಕ್ರಿಯೆಗಳಲ್ಲಿ ಸಕ್ರಿಯರಾಗಿರುವುದು ಬಹಳ ವಿಷಾದಕರ ವಿಷಯವಾಗಿದೆ.

ಈ ಘಟನೆಯನ್ನು ತಾ॥21.10.2010ರಂದು ಜನಾರೋಗ್ಯ ಆಂದೋಲನ ಬಳ್ಳಾರಿ ಜಿಲ್ಲಾ ಸಮಿತಿ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿಗಳನ್ನು ಪರಿಶೀಲಿಸಿ, ದೂರು ದಾಖಲಿಸಿಕೊಂಡು ಮಾನ್ಯ ಲೋಕಾಯುಕ್ತರಿಗೆ ಅಧಿಕೃತವಾದ ದೂರನ್ನು ಪ್ರಪತ್ರ 1 ಮತ್ತು 2 ರಲ್ಲಿ ಅಫಿಡವಿಟ್ ಮಾಡಿ ದಾಖಲಿಸಲಾಗಿದೆ.

ದಿನಾಂಕ : 2/11/2010 ರಂದು ಅಂದರೆ 18 ಮಂದಿ ಸತ್ತ ಜನರ ಕುಟುಂಬಗಳಿಗೆ 1 ಲಕ್ಷ ಪರಿಹಾರ ನೀಡಿ ಕೈ ತೊಳೆದುಕೊಂಡಿದ್ದಾರೆ. ಆದರೆ 23 ಜನರನ್ನು ಕೊಂದ ಸರ್ಕಾರಿ ಇಲಾಖೆಯನ್ನು, ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಲಿಲ್ಲ, ಯಾರ ಮೇಲೂ ಕ್ರಿಮಿನಲ್ ಕೇಸ್ ದಾಖಲಿಸಲಿಲ್ಲ.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ಮೂಲಭೂತ ಸೌಕರ್ಯಗಳಾದ ನೀರು, ಸ್ವಚ್ಛತೆ, ಸಿಬ್ಬಂದಿ, ಔಷಧಿಗಳ ಪೂರೈಕೆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲ.

ಇದರಿಂದ ಈ ಸರ್ಕಾರಕ್ಕೂ ಮತ್ತು ಸ್ಥಳೀಯ ಜನ ಪ್ರತಿನಿಧಿಗಳಿಗೆ ಇಲ್ಲಿನ ಸಾರ್ವಜನಿಕರ ಮೇಲಿನ ಗೌರವ ಎಷ್ಟೆಂಬುವುದು ಅರ್ಥವಾಗುತ್ತೆ.

ವರದಿ:ಕೆ. ಬಿ. ಓಬಳೇಶ ಮತ್ತು ಮಂಜುನಾಥ.ಹೆಚ್

3. ದಾವಣಗೆರೆ ಜಿಲ್ಲೆಯಲ್ಲಿ ಜನಾರೋಗ್ಯ ಆಂದೋಲನ – ಕರ್ನಾಟಕದಿಂದ ಲೋಕಾಯುಕ್ತರಿಗೆ ದೂರು

ಆರೋಗ್ಯ ನಿರಾಕರಣೆ ಶಿಶು ಮರಣ ಲೋಕಾಯುಕ್ತಕ್ಕೆ ತನಿಖೆಗಾಗಿ ದೂರು.

ದಾವಣಗೆರೆ ತಾಲ್ಲೂಕಿನಲ್ಲಿ ಐಗೂರುಗೊಲ್ಲರಹಟ್ಟಿ ಗ್ರಾಮದಲ್ಲಿ 3– ಶಿಶುಮರಣ, ಪ್ರಕರಣಗಳು ದಾಖಲಾಗಿವೆ. ವೈದ್ಯರ ನಿರ್ಲಕ್ಷ್ಯ ಮತ್ತು ಆರೋಗ್ಯ ನಿರಾಕರಣೆಯಿಂದ ಸಾವು ಸಂಭವಿಸಿದೆ. ಅದರ ಕುರಿತು ದಾವಣಗೆರೆ ಜಿಲ್ಲಾ ಜನಾರೋಗ್ಯ ಆಂದೋಲನ ಕರ್ನಾಟಕ ಕಾರ್ಯಕರ್ತರು ಸಾವು ಸಂಭವಿಸಿದ ಕುಟುಂಬಗಳನ್ನು ಖುದ್ದು ಭೇಟಿ ನೀಡಿ ವರದಿಗಳನ್ನು ತಯಾರಿಸಿ ದಿನಾಂಕ 26.10.2010 ರಂದು ಕರ್ನಾಟಕ ಲೋಕಾಯುಕ್ತರಿಗೆ ತನಿಖೆಗಾಗಿ ದೂರು ನೀಡಲಾಗಿದೆ.

ಅದರ ಕುರಿತು ರಾಜ್ಯ ಲೋಕಾಯುಕ್ತರು ದಾವಣಗೆರೆ ಲೋಕಾಯುಕ್ತ ಎಸ್.ಪಿ ರವರಿಗೆ ತನಿಖೆಗಾಗಿ ನೇಮಿಸಿದ್ದಾರೆ. ಅವರು ಈಗಾಗಲೇ 3 ಕುಟುಂಬಗಳಿಗೂ ಮತ್ತು ಸಂಬಂಧಿತ ವೈದ್ಯಾಧಿಕಾರಿ ಜೊತೆಗೆ ಸಿಬ್ಬಂದಿಗಳನ್ನು ಭೇಟಿಮಾಡಿ ವಿಚಾರಣೆ ಮಾಡಿದ್ದಾರೆ.

ಜನಾರೋಗ್ಯ ಆಂದೋಲನ ಕರ್ನಾಟಕ (JAA-K) ಹಾಗೂ ಆಹಾರದ ಹಕ್ಕಿನ ಆಂದೋಲನದ ಕಾರ್ಯಕರ್ತೆ ಕೆ.ಎಲ್.ಪುಷ್ಪಾರವರನ್ನು ಭೇಟಿಯಾಗಿ ಹೇಳಿಕೆ ತೆಗೆದುಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ವರದಿ : ಕೆ.ಎಲ್.ಪುಷ್ಪ ಮತ್ತು ಎಂ.ಕರಿಬಸಪ್ಪ

4. ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕು ಚಿಕ್ಕಬನ್ನಿಹಟ್ಟಿಯ – 3 ಡೆಂಗೆ ಜ್ವರ ಸಾವಿನ ಬಗ್ಗೆ ಲೋಕಾಯುಕ್ತರಿಗೆ ದೂರು

ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕು ಚಿಕ್ಕಬನ್ನಿ ಹಟ್ಟಿ ಮತ್ತು ಸಿಬಿ ಗೊಲ್ಲರಹಟ್ಟಿಯಲ್ಲಿ 3 ಜನ ಡೆಂಗೆ ಜ್ವರಕ್ಕೆ ತುತ್ತಾಗಿ ಆರೋಗ್ಯದ ನಿರ್ಲಕ್ಷ್ಯದಿಂದ ಮರಣ ಹೊಂದಿದ್ದಾರೆ. ಈ ಕುರಿತು ದಾವಣಗೆರೆ (JAA-K) ಕಾರ್ಯಕರ್ತರು 07–11–2010 ರಂದು ಗ್ರಾಮಕ್ಕೆ ಭೇಟಿ ನೀಡಿ ವರದಿಯನ್ನು ತಯಾರಿಸಿ ಕರ್ನಾಟಕ ಲೋಕಾಯುಕ್ತಕ್ಕೆ ಮತ್ತು ರಾಜ್ಯ ಮಾನವ ಹಕ್ಕು ಆಯೋಗಕ್ಕೆ ದೂರು ನೀಡಲಾಗಿದೆ. ಈ ಕುರಿತು ಇನ್ನೂ ತನಿಖೆ ನಡೆಯಬೇಕಿದೆ.

ವರದಿ : ಎಲ್.ಮಂಜುನಾಥ ಮತ್ತು ಎಂ.ಕರಿಬಸಪ್ಪ

5. ಬೆಂಗಳೂರು ನಗರ:– ಮಾನವ ಹಕ್ಕುಗಳ ಆಯೋಗ ಮತ್ತು ಲೋಕಾಯುಕ್ತರಿಗೆ ದೂರು

ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ತನ್ನ ಮಗುವನ್ನು ಕಳೆದುಕೊಂಡ ಬಡ ಕಾರ್ಮಿಕ ಮಹಿಳೆ

ಬೆಂಗಳೂರು ಮಹಾನಗರ ವಾಣಿ ವಿಲಾಸ ಆಸ್ಪತ್ರೆಯ ವಿವಿಧ ಅವಘಡಗಳು ಸಾಮಾನ್ಯವಾಗಿ ಎಲ್ಲಾ ಜನಸಾಮಾನ್ಯರಿಗೂ ತಿಳಿದಿದ್ದೆ. ಇವುಗಳಲ್ಲಿ ಗಂಭೀರವಾದ ಘಟನೆ ದಿನಾಂಕ 07–09–2010 ರಂದು ನಡೆದುಹೋಗಿದೆ. ಈ ಘಟನೆ ಬಗ್ಗೆ ಜನಾರೋಗ್ಯ ಆಂದೋಲನ ಕರ್ನಾಟಕ ಕಾರ್ಯಕರ್ತರು ಈ ಘಟನೆ ಬಗ್ಗೆ ಕೂಡಲೇ ಕಾರ್ಯಪ್ರವೃತ್ತರಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ದಾಖಲಿಸಿದೆ.

ಘಟನೆ: ದಿನಾಂಕ 7/9/2010 ಮಂಗಳವಾರ ಬೆಳಿಗ್ಗೆ ಸುಮಾರು 6.30 ನಿಮಿಷಕ್ಕೆ ಲಲಿತಮ್ಮ ಮತ್ತು ನಾಗರಾಜ್ ದಂಪತಿಗಳ ಗಂಡು ಮಗುವನ್ನು ಸರ್ಕಾರಿ ಆಸ್ಪತ್ರೆಯ ವ್ಯವಸ್ಥೆಯಲ್ಲಿ ವೈದ್ಯರ ವೇಷದಲ್ಲಿ ಬಂದ ಕಳ್ಳರು ಮಗುವನ್ನು ಅಪಹರಣ ಮಾಡಿಕೊಂಡು ಹೋಗಿದ್ದಾರೆ. ಈಗಾಗಲೇ ರಾಜ್ಯದ ಎಲ್ಲಾ ಮಾಧ್ಯಮಗಳಲ್ಲಿ ವರದಿ ಆಗಿ ಸುದ್ದಿ ಮಾಡಿದೆ. ಈ ಪ್ರಕರಣ ಸಂಬಂಧ ಜನಾರೋಗ್ಯ ಆಂದೋಲನ–ಕರ್ನಾಟಕದ ಕಾರ್ಯಕರ್ತರು ಆಸ್ಪತ್ರೆ ವ್ಯವಸ್ಥಾಪಕರು ಹಾಗೂ ಮಗುವಿನ ಪೋಷಕರನ್ನು ಬೇಟಿ ಮಾಡಿ ಚರ್ಚಿಸಿದೆ.

ಮಗು ಕಳೆದುಕೊಂಡವಳ ಬದುಕೇ ಶೂನ್ಯ

■ ಮಗು ಕಳೆದುಕೊಂಡ ಲಲಿತಮ್ಮ ಈಗ ಮಾನಸಿಕ ಅಸ್ವಸ್ಥೆ ■ ಮಗು ಜೊತೆ ಪತ್ನಿ ಕಳೆದುಕೊಳ್ಳುವ ಭೀತಿಯಲ್ಲಿ ಪತಿ

■ ಆಸ್ಪತ್ರೆ ಖರ್ಚಿಗಾಗಿ ಈಗಾಗಲೇ ₹ 25 ಸಾವಿರ ಮುಗಿದಿದೆ

■ ಈಗ ಬೆಂಗಳೂರು ತ್ಯಜಿಸಿ ರಾಯಚೂರಿನಲ್ಲಿ ನೆಲೆಸಿದ್ದಾರೆ

■ ಲಲಿತಮ್ಮನ ಮಗುವಿನ ಸುಳಿವು ಪೊಲೀಸರಿಗೆ ಇನ್ನೂ ಸಿಕ್ಕಿಲ್ಲ

■ ಯಾವ ಮಗುವನ್ನು ಕಂಡರೂ ತನ್ನದೇ ಎಂದು ಕಿತ್ತುಕೊಳ್ಳಲು ಹೋಗುತ್ತಾರೆ ಲಲಿತಮ್ಮ

ಮಗು ಮತ್ತು ಪೋಷಕರ ಹಿನ್ನೆಲೆ:

ಲಲಿತಮ್ಮ ವಯಸ್ಸು 23 ಮತ್ತು ಆಕೆಯ ಗಂಡ ನಾಗರಾಜ್ ವಯಸ್ಸು 25, ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಗಬ್ಬೂರಿನ ಗ್ರಾಮದವರು ಕಳೆದ 8 ವರ್ಷಗಳಿಂದ ಹಿಂದೆ ಸ್ವ ಗ್ರಾಮದಿಂದ ಬೆಂಗಳೂರಿಗೆ ಕೆಲಸ ಹುಡುಕಿಕೊಂಡು ವಲಸೆ ಬಂದಿರುವ ಬಡ ಕುಟುಂಬವಾಗಿದೆ. ಪ್ರಸ್ತುತ ಕಟ್ಟಡ ಕಾರ್ಮಿಕರಾಗಿ ಚಂದ್ರಲೇಔಟ್‌ನ ಆರುಂಧತಿ ನಗರದಲ್ಲಿ ವಾಸ ಮಾಡಿಕೊಂಡಿದ್ದಾರೆ. ಕಳೆದ 7 ವರ್ಷಗಳ ಹಿಂದೆ ನಾಗರಾಜ್ ಮತ್ತು ಲಲಿತಮ್ಮ ವಿವಾಹವಾಗಿದ್ದು ಅಂದಿನಿಂದ ಮಕ್ಕಳಿಗಾಗಿ ಪರಿತಪಿಸುತ್ತಿದ್ದರು ಬಹಳ ವರ್ಷಗಳ ನಂತರ ದಿನಾಂಕ 5/9/2010 ರಂದು ಲಲಿತಮ್ಮ ದಂಪತಿಯು ಗಂಡು ಮಗುವಿಗೆ ಜನ್ಮ ನೀಡಿದ್ದಾರೆ, ಹೆರಿಗೆಗಾಗಿ ಅವರು ಆಯ್ಕೆ ಮಾಡಿಕೊಂಡ ಆಸ್ಪತ್ರೆ ನಗರದ ವಾಣಿ ವಿಲಾಸ ಆಸ್ಪತ್ರೆ.

ಮಗು ಅಪಹರಣದ ಬಗ್ಗೆ:

ದಿನಾಂಕ 5/9/2010 ರಂದು ಹೆರಿಗೆಗಾಗಿ ದಾಖಲಾಗಿದ್ದಾರೆ. ದಿನಾಂಕ 6/9/2010 ರಂದು 7.25 ಕ್ಕೆ ಹೆರಿಗೆ ಆಗಿದೆ. ಮಗು ಸುರಕ್ಷಿತವಾಗಿದೆ. ಮಾರನೆ ದಿನ ಮಂಗಳವಾರ ಬೆಳಿಗ್ಗೆ ಸುಮಾರು 6.20ಗಂಟೆಗೆ ವೈದ್ಯರೆಂದು ಮಾರುವೇಷದಲ್ಲಿ ಬಂದ ಮಹಿಳೆ ಮಗುವನ್ನು ಯಾವುದೋ ನೆಪ ಹೇಳಿ ಅಪಹರಣ ಮಾಡಿದ್ದಾರೆ. ಅದೃಷ್ಟವಶಾತ್

ಮಾಧ್ಯಮಗಳಿಗೆ ವಿಷಯ ತಿಳಿದು ರಾಜ್ಯಾದ್ಯಾಂತ 2–3 ದಿನಗಳಕಾಲ ಸುದ್ದಿ ಪ್ರಸಾರವಾಗಿದೆ. ಆದರೆ ದೂರು ದಾಖಲಿಸಿ ಕೊಳ್ಳಲು ಮೊದಲು ನಿರಾಕರಿಸಿದ್ದು ನಂತರ ಪೋಲಿಸ್ ಆಯುಕ್ತರನ್ನು ಪೋಷಕರು ಖುದ್ದಾಗಿ ಬೇಟಿ ಮಾಡಿದ್ದಾರೆ ಅನಂತರ ದೂರು ದಾಖಲಿಸಿದ್ದಾರೆ. ಅದಲ್ಲದೆ ಗೌ.ಲೋಕಾಯುಕ್ತ ನ್ಯಾ. ಸಂತೋಷ ಹೆಗ್ಗಡೆಯವರು ದೂರು ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ವಾಣಿ ವಿಲಾಸ ಆಸ್ಪತ್ರೆ ಅಧೀಕ್ಷಕರೊಂದಿಗೆ ಚರ್ಚೆ

ಅಸ್ಪತ್ರೆಯ ಅಧೀಕ್ಷರಾದ ಡಾ|| ಓ.ಎಸ್.ಸಿದ್ದಪ್ಪರವರು ಮಗು ಕಳೆದುಕೊಂಡು ಮಾನಸಿಕವಾಗಿ ನೊಂದು ದುಃಖಿತರಾಗಿರುವ ಪೋಷಕರನ್ನು ನಿರ್ಲಕ್ಷ್ಯದಿಂದ ಕಂಡು ಉದಾಸೀನವಾಗಿ ಕಾಣುತ್ತಿದ್ದು, ಕುಟಿಲತೆಯಿಂದ ವರ್ತಿಸುತ್ತಿದ್ದಾರೆ. ಜೊತೆಗೆ ಪೋಷಕರದ್ದೇ ತಪ್ಪು ಎಂದು ಯಾವುದೇ ಕ್ರಮ ತೆಗೆದುಕೊಳ್ಳದೆ ಬೇಜವಾಬ್ದಾರಿತನದಿಂದ ವರ್ತಿಸುತ್ತಿದ್ದಾರೆ.

ಈ ಪ್ರಕರಣದಿಂದ ಇಡೀ ಸರ್ಕಾರಿ ಆರೋಗ್ಯ ವ್ಯವಸ್ಥೆ ತಲೆ ತಗ್ಗಿಸುವಂತೆ ಆಗಿದ್ದರೂ ಸಹ ಇದುವರೆಗೂ ಸಂಬಂಧ ಪಟ್ಟ ಇಲಾಖೆಯು ಯಾವುದೇ ಪ್ರತಿಕ್ರಿಯೆ ನೀಡದೆ ಜಾಣ ಕುರುಡರಾಗಿ ಇರುವುದು ಅತ್ಯಂತ ನೀಚ ಕೃತ್ಯವಾಗಿದೆ. ಆಸ್ಪತ್ರೆಯ ಸಿಬ್ಬಂದಿಯ ಕೈವಾಡ ಇಲ್ಲದೇ ಇಂತಹ ಅಪಹರಣ ಆಗಲು ಸಾಧ್ಯವೇ ಎಂಬ ಅನುಮಾನ ಉಂಟು ಮಾಡುತ್ತಿದೆ.

ಈ ಸಂಬಂಧ ಜನಾರೋಗ್ಯ ಆಂದೋಲನ– ಕರ್ನಾಟಕವು ಒತ್ತಾಯಿಸುವುದೇನೆಂದರೆ

1. ಈ ಕೂಡಲೆ ಆಸ್ಪತ್ರೆಯ ಆಡಳಿತ ವ್ಯವಸ್ಥೆಯನ್ನು ಈ ಪ್ರಕರಣಕ್ಕೆ ಗುರಿ ಮಾಡಿ ಸಂಬಂಧ ಪಟ್ಟ ಎಲ್ಲರನ್ನು ಸೇವೆಯಿಂದ ಅಮಾನತ್ತು ಮಾಡಬೇಕು.
2. ಅಪಹರಣ ಮಾಡಿರುವ ಮಗುವನ್ನು ಹುಡುಕಿ ತರಲು ಕೂಡಲೇ ಪ್ರತ್ಯೇಕ ತನಿಖಾ ತಂಡ ರಚಿಸಿ ಮಗುವನ್ನು ಪತ್ತೆ ಮಾಡಿ ಕೊಡುವುದು.
3. ಬಾಣಂತಿ ಲಲಿತಮ್ಮನವರ ಸಂಪೂರ್ಣ ಆರೋಗ್ಯ ವ್ಯವಸ್ಥೆಯ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಬೇಕು.
4. ಮಗುವನ್ನು ಕಳೆದುಕೊಂಡಿರುವ ದಂಪತಿಗಳಿಗೆ 10 ಲಕ್ಷ ರೂಪಾಯಿಗಳ ಪರಿಹಾರವನ್ನು ಆಸ್ಪತ್ರೆಯು ಆಡಳಿತ ಮಂಡಳಿಯಿಂದ ಒದಗಿಸಬೇಕು.
5. ಮುಂದಿನ ದಿನಗಳಲ್ಲಿ ಶಿಶುಮರಣ ಅಥವಾ ಅಪಹರಣದಂತಹ ಪ್ರಕರಣಗಳು ನಡೆದರೆ ಅಸ್ಪತ್ರೆಯ ವೈದ್ಯರು ಹಾಗೂ ಆಡಳಿತ ಮಂಡಳಿಯವರಿಗೆ ನೇರ ಹೊಣೆ ಮಾಡಬೇಕು ಮತ್ತು ಅವರ ಮೇಲೆ ಕ್ರಿಮಿನಲ್ ಕೇಸು ದಾಖಲಿಸಬೇಕು.

ಇತ್ತೀಚಿನ ಬೆಳವಣಿಗೆ:

ದಿನಾಂಕ 31/1/2010 ರಂದು ವಾಣಿ ವಿಲಾಸ್ ಆಸ್ಪತ್ರೆಯ ಅಧೀಕ್ಷಕರು ಮಗು ಕಳ್ಳತನ ಮಾಡಿದ ಮಹಿಳೆಯೊಬ್ಬರ ಫೋಟೋವನ್ನು ಶ್ರೀಮತಿ ಲಲಿತಾರವರಿಗೆ ಕಳುಹಿಸಿ, ಆ ಮಹಿಳೆಯನ್ನು ಅವರು ಗುರುತಿಸಿದ್ದಾರೆ. ಆ ಮಹಿಳೆಯನ್ನು ಬಂಧಿಸುವ ಅಥವಾ ಮಗುವನ್ನು ಪತ್ತೆಹಚ್ಚುವ ಕೆಲಸದಲ್ಲಿ ಪೋಲೀಸರು ನಿರ್ಲಕ್ಷ್ಯ ತೋರಿಸಿದ್ದಾರೆ. ಜನಾರೋಗ್ಯ ಆಂದೋಲನ– ಕರ್ನಾಟಕ ಕಾರ್ಯಾಲಯದಿಂದ ಪೋಲೀಸ್ ಕಮಿಷನರ್, ಲೋಕಾಯುಕ್ತರು ಮತ್ತು ಮಾನವ ಹಕ್ಕುಗಳ ಆಯೋಗಕ್ಕೆ ಇದರ ಬಗ್ಗೆ ಮನವಿಯನ್ನು ಸಲ್ಲಿಸಲಾಗಿದೆ.

ಜಿಲ್ಲೆಗಳಲ್ಲಿ ಜನಾರೋಗ್ಯ ಆಂದೋಲನ– ಕರ್ನಾಟಕ

1. ದಾವಣಗೆರೆ

ದಾವಣಗೆರೆ ಜಿಲ್ಲಾ (JAA-K) ಸಭೆ

ದಿನಾಂಕ 12.12.2010 ರಂದು ದಾವಣಗೆರೆ ಜಿಲ್ಲೆ (JAA-K) ಜಿಲ್ಲಾ ಸಮಿತಿ ಸದಸ್ಯರ ಸಭೆಯನ್ನು ಕರೆಯಲಾಗಿತ್ತು. ಈ ಸಭೆಯನ್ನು ದಾವಣಗೆರೆ ಮಹಾನಗರ ಪಾಲಿಕೆಯ ಆವರಣದಲ್ಲಿ ಮಾಡಲಾಯಿತು ಸಭೆಯಲ್ಲಿ ಕಾರ್ಯಕರ್ತರಾದ ಮಂಜುನಾಥ, ಪುಷ್ಪಾ, ಜಬಿನಾ ಖಾನಂ, ಆಜಂರಜ್ವಿ, ಹನುಮಂತಪ್ಪ, ಎಂ.ಕರಿಬಸಪ್ಪ ಭಾಗವಹಿಸಿದ್ದರು.

ಸಭೆಯಲ್ಲಿ ಈಗಾಗಲೇ ಶಿಶು ಮರಣ ಡೆಂಗೆಜ್ವರದ ಸಾವು ಕುರಿತು ಲೋಕಾಯುಕ್ತಕ್ಕೆ ದೂರು ನೀಡಿದ್ದರೆ ಅನುಸರಣೆ ಮುಂದಿನ ಕ್ರಮದ ಕುರಿತು ಚರ್ಚಿಸಲಾಯಿತು. ಹಾಗೂ ಜನವರಿ 20, 2011 ರಂದು 30 ಜನ ಗ್ರಾಮಪಂಚಾಯತಿ ಸದಸ್ಯರಿಗೆ ಆರೋಗ್ಯದ ಹಕ್ಕು ಮತ್ತು ಮುಂದೆ ಆಂದೋಲನದ ಹೆಜ್ಜೆ ಕುರಿತು ಒಂದು ದಿನದ ಕಾರ್ಯಗಾರವನ್ನು ನಡೆಸಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಮುಖ್ಯವಾಗಿ ಎರಡು ವಿಷಯಗಳ ಕುರಿತು ಚರ್ಚಿಸಲಾಯಿತು.

1. ಪ್ರಸಕ್ತ ಲೋಕಾಯುಕ್ತರಿಗೆ ದೂರು ಸಲ್ಲಿಸಿರುವ ಡೆಂಗ್ಯೂ ಜ್ವರ ಪ್ರಕರಣ ಮತ್ತು ಶಿಶುಮರಣ ಪ್ರಕರಣಗಳ ದೂರನ್ನು ಮಾನ್ಯ ಲೋಕಾಯುಕ್ತರಿಗೆ ಸಲ್ಲಿಸಲಾಗಿದೆ. ಈ ಸಂಬಂಧ ಮುಂದಿನ ಅನುಸರಣೆ ಹೇಗೆ ಕೈಗೊಳ್ಳಬೇಕು.
2. ಬರುವ ಜನವರಿ ತಿಂಗಳಲ್ಲಿ ದಾವಣಗೆರೆ ಜಿಲ್ಲಾ ಮಟ್ಟದಲ್ಲಿ ಆರೋಗ್ಯದ ಹಕ್ಕು ಮತ್ತು JAAK ಮುಂದಿನ ಕಾರ್ಯಾಚರಣೆ ಕುರಿತ ಒಂದು ದಿನದ ಚರ್ಚೆ/ಸಂವಾದ ನಡೆಸುವಂತೆ ನಿರ್ಧರಿಸಲಾಯಿತು.

2. ಬೆಳಗಾವಿ

ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕು ಕಕ್ಕೇರಿ ಗ್ರಾಮದಲ್ಲಿ ಆರೋಗ್ಯದ ಹಕ್ಕಿನ ಕಾರ್ಯಗಾರ

ದಿನಾಂಕ : 02/11/2010 ರಂದು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕು, ಕಕ್ಕೇರಿ ಗ್ರಾಮದ ಜೀವನ ಜ್ಯೋತಿ ಸಂಸ್ಥೆಯಲ್ಲಿ 20 ಜನ (SHG) ಗುಂಪಿನ ಸದಸ್ಯರಿಗೆ ಆರೋಗ್ಯದ ಹಕ್ಕು ಮಾನವ ಹಕ್ಕು ಕಾರ್ಯಗಾರವನ್ನು ಮಾಡಲಾಯಿತು.

ಈ ಕಾರ್ಯಗಾರದಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (NRHM) ದಲ್ಲಿನ ಉದ್ದೇಶಗಳು ತಾಯಿ ಮರಣ, ಶಿಶು ಮರಣ, ಗ್ರಾಮ ಮತ್ತು ಆರೋಗ್ಯ ನೈರ್ಮಲ್ಯ ಸಮಿತಿಯ ಪಾತ್ರ, ಜವಾಬ್ದಾರಿಗಳು ಮುಕ್ತ ನಿಧಿಗಳ ಬಳಕೆ, ಆಶಾ ಕಾರ್ಯಕರ್ತರ ಚಟುವಟಿಕೆ, ಮೇಲ್ವಿಚಾರಣಾ ಸಮಿತಿಗಳ ಜವಾಬ್ದಾರಿಯನ್ನು ತಿಳಿಸಲಾಯಿತು.

ಜನಾರೋಗ್ಯ ಆಂದೋಲನ ಕರ್ನಾಟಕ ಸಂಘಟನೆಯು ನಡೆದು ಬಂದ ದಾರಿ. ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆದ ಆರೋಗ್ಯ ಕಾರ್ಯಾಚರಣೆ ಮತ್ತು ಲೋಕಾಯುಕ್ತರೊಂದಿಗಿನ ಕಾರ್ಯಾಚರಣೆ ಹಾಗೂ ಪ್ರಕ್ರಿಯೆಗಳ ಕುರಿತು ಚರ್ಚಿಸಲಾಯಿತು.

ಕೊನೆಯಲ್ಲಿ ಖಾನಾಪುರ ತಾಲ್ಲೂಕಿನಲ್ಲಿ ಆರೋಗ್ಯ ಸೇವೆ ನಿರಾಕರಣೆಯಾದರೆ ಕೇಸು ದಾಖಲಾತಿ, ಪತ್ರಾಂದೋಲನ, ಲೋಕಾಯುಕ್ತಕ್ಕೆ ದೂರು ಸಲ್ಲಿಸುವುದು ಕುರಿತು ಕ್ರಿಯಾಯೋಜನೆಯನ್ನು ಮಾಡಲಾಯಿತು.

3. ಚಿಕ್ಕೋಡಿ (ಬೆಳಗಾವಿ ಜಿಲ್ಲೆ)

ಜನಾರೋಗ್ಯ ಆಂದೋಲನ ಕರ್ನಾಟಕ, ಬೆಳಗಾವಿ ಜಿಲ್ಲಾ ಸಮಿತಿ. ಚಿಕ್ಕೋಡಿ ತಾಲೂಕಿನಲ್ಲಿ ಒಂದು ದಿನದ ಕಾರ್ಯಾಗಾರವನ್ನು ದಿನಾಂಕ 28–10–2010 ರಂದು ವಿಮುಕ್ತಿ ಸಂಸ್ಥೆಯ ಕಛೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಸುಮಾರು 48 ಜನ ಭಾಗವಹಿಸಿದ್ದರು. ಈ ದಿನದಂದು ಜನಾರೋಗ್ಯ ಆಂದೋಲನ ಕರ್ನಾಟಕ, ಬೆಳಗಾವಿ ಜಿಲ್ಲಾ ಸಮಿತಿಯವರು, ಚಿಕ್ಕೋಡಿ ತಾಲೂಕಿನ ವಿಮುಕ್ತಿ ಸಮಾಜ ಕಾರ್ಯ ಸಂಸ್ಥೆಯ ಕೆಲಸ ಮಾಡುತ್ತಿರುವ ಕಾರ್ಯವ್ಯಾಪ್ತಿಯಿಂದ ಮಹಾಸಂಘದ ಅಧ್ಯಕ್ಷರು, ಸ್ವಯಂಸೇವಕಿಯರು, ಗ್ರಾಮಾಭಿವೃದ್ಧಿ ಕಮಿಟಿಯ ಅಧ್ಯಕ್ಷರು, ಆಶಾಕಾರ್ಯಕರ್ತೆಯರು ಮುಂತಾದವರು ಭಾಗವಹಿಸಿದ್ದರು. ಕೈಗೆಟಕುವ ಸೂಕ್ತ ಗುಣಮಟ್ಟದ ಹಾಗೂ ಉಚಿತ ಆರೋಗ್ಯ ಸೇವೆ ಪ್ರತಿಯೊಬ್ಬರಿಗೂ ಸಿಗಬೇಕು ಮತ್ತು ನಾವು ಕೂಡ ಅದರ ಭಾಗವಾಗಿ ಹೋರಾಟ ಮಾಡುವ ಕಾರ್ಯಕ್ರಮದ ಮೂಲ ಉದ್ದೇಶದ ನಿಟ್ಟಿನಲ್ಲಿ ಈ ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಯಿತು.

ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಆರೋಗ್ಯ ಸೇವೆಗಳ ಕಳಪೆತನ, ಭ್ರಷ್ಟಚಾರ, ಅನಗತ್ಯ ಸಾವುಗಳಲ್ಲಿ ಅಧಿಕಾರಿಗಳ ಹೊಣೆಗೇಡಿತನ ಮತ್ತು ಖಾಸಗಿ ವ್ಯವಸ್ಥೆಯತ್ತ ಹೋಗುವಂತೆ ಮಾಡುವ ಸರ್ಕಾರಿ ಆರೋಗ್ಯ ಸಿಬ್ಬಂದಿಯ ಬೇಜವಾಬ್ದಾರಿತನ ಮುಂತಾದವುಗಳನ್ನು ಚರ್ಚಿಸಲಾಯಿತು. ಇಂಥ ಬ್ರಷ್ಟತೆಗಳಿಗೆ ಜನರು ಸ್ಪಂದಿಸದಿದ್ದರೆ, ಆಗುವ ಆಹುತಿಗೆ 'ಬಿಹಾರ' ದಲ್ಲಿ ನಡೆದ ಭ್ರಷ್ಟತೆಯ ಬಗ್ಗೆ ಉದಾಹರಿಸಲಾಯಿತು. ಈ ನಿಟ್ಟಿನಲ್ಲಿ ಸಮುದಾಯ ಅದನ್ನು ಪ್ರಶ್ನಿಸಿ ವ್ಯವಸ್ಥಿತವಾಗಿ ನಡೆಯುವಂತೆ ಮಾಡಬೇಕೆಂದು ನಿರ್ಧರಿಸಲಾಯಿತು.

ಅನಂತರ ಸ್ವರ್ಣಾ ಭಟ್‌ರವರು, ಆರೋಗ್ಯ ಅಂದರೇನು?" ಮತ್ತು ಅನಾರೋಗ್ಯಕ್ಕೆ ಕಾರಣಗಳೇನು? ಅನ್ನುವ ವಿಚಾರವಾಗಿ ಶಿಬಿರಾಥಿಗಳನ್ನು ಪ್ರಶ್ನಿಸಿದಾಗ ಬಂದ ಅಂಶಗಳು, ಅಶುದ್ಧ ನೀರು, ಅಶುದ್ಧ ಗಾಳಿ, ಪೌಷ್ಠಿಕ ಆಹಾರ ಸೇವಿಸದೆ ಇದ್ದದು ಮತ್ತು ಸಮಯಕ್ಕೆ ಆಹಾರ ಸಿಗದೆ ಇದ್ದದು, ಸಿದ್ಧ ಆಹಾರ ಆರ್ಥಿಕ ಅಡಚಣೆ, ಮಾನಸಿಕ ಒತ್ತಡ. ಇವುಗಳ ವಿಶ್ಲೇಷಣೆ ಮಾಡುತ್ತಾ ನಮ್ಮ ಜೀವನ ಹೇಗೆ ಕೆಡುತ್ತಾ ಇದೆ, ಇದನೆಲ್ಲಾ ನಾವೇ ಸರಿಯಾಗಿ ಪಾಲಿಸಿದರೆ ಆರೋಗ್ಯವಂತರಾಗಿರುತ್ತೆವೆಂದು ಮನದಟ್ಟು ಮಾಡಿದರು.

ಕೇಂದ್ರ ಸರ್ಕಾರವು ರಾಷ್ಟ್ರಮಟ್ಟದಲ್ಲಿ ಸರ್ಕಾರಿ ಆರೋಗ್ಯ ಸೇವೆಗಳು ಸಾರ್ವಜನಿಕರಿಗೆ ಕೈಗೆಟಕುವಂತೆ ಮಾಡಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕಾರ್ಯಕ್ರಮ ಜಾರಿಗೆ ಬಂದು ವರ್ಷಗಳಾದರು, ರಾಜ್ಯದಲ್ಲಿ ಆರೋಗ್ಯ ಸೇವೆಗಳ ಸುಧಾರಣೆ ಆಗದಿರುವ ಹಿನ್ನೆಲೆಯಲ್ಲಿ ಜನಾರೋಗ್ಯ ಆಂದೋಲನ ಕರ್ನಾಟಕವು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯತ್ತ ಆರೋಗ್ಯದ ಹಕ್ಕನ್ನು ಮನದಟ್ಟಾಗಿ ಮಾಡಿಕೊಂಡು ಕೇಳುವಂತಹದ್ದು ಮತ್ತು ಆಸ್ಪತ್ರೆ ಮತ್ತು ಕೇಂದ್ರಕ್ಕೆ ಇರುವ ವ್ಯತ್ಯಾಸದ ಬಗ್ಗೆ ವಿವರಣೆ: ಜನಾರೋಗ್ಯ ಆಂದೋಲನ ಕರ್ನಾಟಕದ ಹುಟ್ಟು, ಬೆಳೆದ ಬಂದ ದಾರಿ ಮತ್ತು ಸಾಧನೆ, ಎದುರಿಸಿದ ಸಮಸ್ಯೆಗಳು, ಸರಕಾರಕ್ಕೆ ಇಟ್ಟ ಸವಾಲುಗಳ

ಬಗ್ಗೆ ವಿವರಣೆ ನೀಡುತ್ತಾ, ಜನ ಮಾಹಿತಿ ಪಡೆದು, ಹಕ್ಕಾಗಿ ಪಡೆಯುತ್ತಿರುವದಕ್ಕೆ, ಕಚ್ಚೇರಿಯ ಹೆರಿಗೆ ನಿರಾಕರಣೆಯ ನೈಜ ಘಟನೆ ಹೇಳಿದರು. ಖಾಸಗೀಕರಣ ಆಗಲು ನಾವುಗಳು ಹೇಗೆ ಕಾರಣರಾಗುತ್ತಿದ್ದೇವೆ. ಅದಕ್ಕೆ ನಾವೆಲ್ಲರು ಮಾಡುವ ಕ್ರಿಯೆ ಅಥವಾ ಕಾರ್ಯತಂತ್ರದ ಬಗ್ಗೆ ಚರ್ಚಿಸುತ್ತ ಮುಕ್ತನಿಧಿ, ಉಪಕೇಂದ್ರಗಳ ಬಗ್ಗೆ ಮಾಹಿತಿ ತಿಳಿಸಿದರು.

ನಂತರ ಮಲ್ಲಿಕಾರ್ಜುನರವರು ಆರೋಗ್ಯ ವ್ಯವಸ್ಥೆಗಳಾದ, ಉಪಕೇಂದ್ರ, ಪ್ರಾರ್ಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಅಂಗನವಾಡಿ ಕಾರ್ಯಕರ್ತೆ, ನರ್ಸ್, ಆಶಾಕಾರ್ಯಕರ್ತೆ, ಗ್ರಾಮ ನೈರ್ಮಲ್ಯ ಸಮಿತಿ ಇವುಗಳ ಬಗ್ಗೆ ಮಾಹಿತಿ ನೀಡುತ್ತ, ದಾಖಲಾತಿಗಳ ಸಂಗ್ರಹಣೆ ಮಾಡುವದು &

ಇದರಲ್ಲಿರುವ ಸೌಲತ್ತುಗಳ ಬಗ್ಗೆ, ಮಾಹಿತಿ ನೀಡಿದಾಗ, ಶಿಬಿರಾರ್ಥಿಗಳು ಗ್ರಾಮದ ಸಂಘಟನೆಗಳಲ್ಲಿ ಮಾಹಿತಿ ನೀಡುವದರ ಜೊತೆಗೆ ಮುಚ್ಚಿರುವ ಉಪಕೇಂದ್ರಗಳು, ತೆರೆಯುವಂತೆ ಮಾಡುವದು, ಆಸ್ಪತ್ರೆಯಲ್ಲಿ ಸ್ವಚ್ಚವಾಗಿರುವಂತೆ, ಸಿಬ್ಬಂದಿಗಳು ಇರುವಂತೆ ವಾರಕ್ಕೆ 1 ದಿನವಾದರೂ ಬರುವಂತೆ ಮಾಡುವುದು ಮತ್ತು ವೈಯಕ್ತಿಕವಾಗಿ ಪತ್ರ ಚಳುವಳಿ ಮಾಡುವಂತೆ. ಕ್ರಿಯಾಯೋಜನೆ ಮಾಡಿದರು.

ವರದಿ: ಮಲ್ಲಿಕಾರ್ಜುನ, ಹೊಸಪೇಟೆ, Intern, CHC

4. ಬಳ್ಳಾರಿ–ಆಶಾ ಕಾರ್ಯಕರ್ತೆಯ ಜೊತೆ ಸಂದರ್ಶನ: ನಮ್ಮನ್ನು ಆರೋಗ್ಯ ಕಾರ್ಯಕರ್ತೆಯರೆಂದು ಗುರುತಿಸಿ

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (2005) ಕಾರ್ಯಕ್ರಮವು ಕರ್ನಾಟಕದಲ್ಲಿ ಅನುಷ್ಠಾನಗೊಂಡು ಸುಮಾರು 5 ವರ್ಷಗಳು ಕಳೆದಿವೆ. ಈ ಯೋಜನೆಯ ಮೂಲ ಉದ್ದೇಶ ಉಚಿತ ಆರೋಗ್ಯ ಸೇವೆಯು ಗ್ರಾಮೀಣ ಮಟ್ಟದಲ್ಲಿ ಪ್ರತಿ ಕುಟುಂಬಕ್ಕೂ ಈ ಸೌಲಭ್ಯ ಸಿಗಬೇಕೆಂಬುದು ಆಗಿದೆ. ಅದರ ಅಡಿಯಲ್ಲಿ ಕರ್ನಾಟಕದಾದ್ಯಂತ 28000 ಆಶಾ (ಸಾಮಾಜಿಕ ಮಾನ್ಯತೆ ಪಡೆದ ಆರೋಗ್ಯ ಕಾರ್ಯಕರ್ತೆ) ರನ್ನು ಆಯ್ಕೆ ಮಾಡಲಾಯಿತು.

NRHM ಮಾರ್ಗ ಸೂಚಿಗಳಂತೆ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಡಿಯಲ್ಲಿ ಬರುವಂತಹ ಅವರ ಹಳ್ಳಿಗಳಲ್ಲಿನ ಮಹಿಳೆಯರೆ ಆಶಾ ಕಾರ್ಯಕರ್ತರಾಗಿ ಆಯ್ಕೆಯಾಗುತ್ತಾರೆ. ಆಶಾ ಆಯ್ಕೆ ಮೂಲ ಉದ್ದೇಶ ತಾಯಿ ಮತ್ತು ಶಿಶು ಮರಣ ತಡೆಗಟ್ಟುವುದರ ಜೊತೆಗೆ ಆರೋಗ್ಯ ಶಿಕ್ಷಣ ನೀಡುವುದು ಆಗಿದೆ. ಈ ಆಶಾಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮತ್ತು ಹಳ್ಳಿಗಳಿಗೆ /ಸಮುದಾಯಕ್ಕೆ ಕೊಂಡಿಯಂತೆ ಸುಮಾರು 8 ಕಾರ್ಯಗಳನ್ನು ಇಟ್ಟುಕೊಂಡು 24 x 7 ನಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಚಾಂದನಿ : ಸಂದರ್ಶನ

(ಚಾಂದಿನಿಯವರು ಈಗ ಹೊಸಪೇಟೆ ತಾಲ್ಲೂಕು ಶ್ರೀ ರಾಮಲಿಂಗಪುರ ಪಿ.ಹೆಚ್.ಸಿ ಕೇಂದ್ರದ ವ್ಯಾಪ್ತಿಯಲ್ಲಿ "ಆಶಾ" ಕಾರ್ಯಕರ್ತೆಯಾಗಿ ಕಳೆದ ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದಾರೆ)

"ನಾನು ಎಸ್ ಎಸ್ ಎಲ್ ಸಿ ಓದಿದ್ದೀನಿ ಸಾರ್ ನಾನು ಮೊದಲು ಹೊಲದಲ್ಲಿ ಕೆಲಸ ಮಾಡುತ್ತಿದ್ದೆ. ಈಗ 2ವರ್ಷದಿಂದ ಆಶಾ ಆಗಿ ಕೆಲಸ ಮಾಡುತ್ತಿದ್ದೀನಿ. ನನಗೆ ಸಮಾಜ ಸೇವೆ ಮಾಡುವುದು ನನಗೆ ತುಂಬಾ ಸಂತೋಷ ಆಗಿದೆ. ಸಮುದಾಯದವರು ಮತ್ತು ಜನರು ತುಂಬಾ ಗೌರವ ಕೊಡುತ್ತಿದ್ದಾರೆ ಎಂದು ಹೇಳುತ್ತಾರೆ. ಆದರೆ ಅಧಿಕಾರಿಗಳು, ಡಾಕ್ಟರು, ನರ್ಸ್‌ಗಳು, ಟೀಚರ್‌ಗಳು ನಮ್ಮನ್ನು ಕೆಲಸದಾಳುಗಳಂತೆ ಕಾಣುತ್ತಾರೆ. ನನಗೆ 4 ತಿಂಗಳ ಮಗು ಇದೆ. ನನಗೆ (*NRHM*) ಯೋಜನೆಯಲ್ಲಿ ಸಿಗುವಂತಹ ಸೌಲಭ್ಯಗಳಾದ ಪ್ರಸೂತಿ ಆರೈಕೆ, ಮಡಿಲು, ಹೆರಿಗೆ ಭತ್ಯೆ ಯಾವುದು ಸಿಕ್ಕಿಲ್ಲ ನನಗೆ ಸಿಕ್ಕಿಲ್ಲ ಅಂದರೆ ಇನ್ನು ಸಮುದಾಯದ ಬಡವರಿಗೆ ಏನು ಸಿಗುತ್ತೆ? ಇದರಿಂದ ಸಮುದಾಯ ಮತ್ತು ನಮ್ಮ ಮಧ್ಯೆ ಇರುವ ಸಂಬಂಧ ಕಳೆದುಹೋಗುತ್ತೆ. ನಿಮ್ಮಂತಹ ಸಂಘಟನೆಯವರಾದರೂ ನಮ್ಮ ಅಧಿಕಾರಿಗಳಿಗೆ ಬುದ್ಧಿ ಹೇಳಿ ನಮ್ಮನ್ನು ಆರೋಗ್ಯ ಕಾರ್ಯಕರ್ತರೆಂದು ಗುರುತಿಸಲು ಸಹಾಯಮಾಡಿ".

ಹೀಗೆ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಿರುವ ಆಶಾ ಆರೋಗ್ಯ ವ್ಯವಸ್ಥೆಯಿಂದ ತುಂಬ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದು ಕೇವಲ ಒಂದು ಉದಾಹರಣೆ ಅಷ್ಟೆ. ಆದರೆ, ಇಂತಹ ನೂರಾರು ಆಶಾಗಳು ಇಂತಹ ಸ್ಥಿತಿ ಅನುಭವಿಸುತ್ತಿದ್ದಾರೆ. ಸಮುದಾಯ ಕುಟುಂಬದವರಿಂದ ಹಾಗೂ ನೆರೆ ಹೊರೆಯವರಿಂದ ದೈಹಿಕ ಮಾನಸಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳಲ್ಲಿ ಕೆಲವಕ್ಕಾದರೂ ಪರಿಹಾರ ಸಿಕ್ಕರೆ ಅಂದರೆ ಕೊನೆ ಪಕ್ಷ ಆರೋಗ್ಯ ವ್ಯವಸ್ಥೆಯಿಂದ ಉಂಟಾಗುವ ಸಮಸ್ಯೆಗಳು ನಿವಾರಣೆ ಆದರೆ ಇನ್ನೂ ಉತ್ತಮ ರೀತಿಯಲ್ಲಿ ಆರೋಗ್ಯ ಸೇವೆಯನ್ನು ಒದಗಿಸುವುದು ಅಲ್ಲದೇ ತಾಯಿ ಮತ್ತು ಶಿಶು ಮರಣವನ್ನು ತಡೆಗಟ್ಟಬಹುದು. ಹಾಗೂ ತಳಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಶಾಗಳನ್ನು ಗಟ್ಟಿಗೊಳಿಸಿದರೆ ತಾಯಿ ಮತ್ತು ಶಿಶು ಮರಣದ ಪ್ರಮಾಣವನ್ನು ಕಡಿಮೆಗೊಳಿಸುವುದರ ಜೊತೆಗೆ ಪ್ರತಿ ಕುಟುಂಬಕ್ಕೂ ಆರೋಗ್ಯ ಶಿಕ್ಷಣವನ್ನು ಪರಿಪೂರ್ಣವಾಗಿ ಒದಗಿಸುವುದು.

ವರದಿ: ಮಲ್ಲಿಕಾರ್ಜುನ, ಹೊಸಪೇಟೆ, Intern, CHC

5 ಚಿತ್ರದುರ್ಗ ಜಿಲ್ಲಾ ಮಟ್ಟದ ಸಮಾಲೋಚನಾ ಮತ್ತು ಅನುಸರಣಾ ಸಭೆ

ಚಿತ್ರದುರ್ಗದಲ್ಲಿ 29 ಆಗಸ್ಟ್ 2010 ರಲ್ಲಿ ಜಿಲ್ಲಾ ಮಟ್ಟದ ಹಕ್ಕೊತ್ತಾಯ ರ್‍ಯಾಲಿಯನ್ನು ಮತ್ತು 13–14 ಡಿಸೆಂಬರ್, 2010 ರಂದು ಜಿಲ್ಲಾ ಮಟ್ಟದ ಆರೋಗ್ಯ ಮತ್ತು ಮಾನವ ಹಕ್ಕು ಕುರಿತ ಎರಡು ದಿನಗಳ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿದ್ದು, ಈ ಎರಡು ಕಾರ್ಯಕ್ರಮಗಳ ನಂತರದಲ್ಲಿ ಜಿಲ್ಲಾ ಆಡಳಿತ ತೆಗೆದುಕೊಂಡಿರುವ ವಿವಿಧ ಕ್ರಮಗಳ ಬಗ್ಗೆ ಚರ್ಚಿಸಲು ದಿನಾಂಕ 19–02–2011 ರಂದು ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯಲ್ಲಿ ವಿವಿಧ ಸಂಸ್ಥೆಗಳು ಹಾಗೂ ಮಹಿಳಾ ಒಕ್ಕೂಟಗಳಿಂದ 15 ಮುಖಂಡರು ಭಾಗವಹಿಸಿದ್ದರು.

ಕಾರ್ಯಕರ್ತರಿಂದ ಅನುಭವ ಹಾಗೂ ಕಾರ್ಯಾಚರಣೆಯ ಬಗ್ಗೆ ಹಂಚಿಕೆ:

ಕಾರ್ಯಕರ್ತರು ಆಗಸ್ಟ್ ತಿಂಗಳ ಜಿಲ್ಲಾ ಪ್ರತಿಭಟನೆಯ ನಂತರ ಆದ ಹಾಗೂ ಕಾರ್ಯಕರ್ತರು ಮಾಡಿದ ಕೆಲಸಗಳ ಬಗ್ಗೆ ಹಂಚಿಕೊಂಡರು.

ಜಿಲ್ಲಾ ಮಟ್ಟದ ಪ್ರತಿಭಟನೆ ನಡೆದ ನಂತರ ಆದ ಬದಲಾವಣೆಗಳು

- ಮೊಳಕಾಲ್ಮೂರು ತಾಲ್ಲೂಕು ಆಸ್ಪತ್ರೆಗೆ ಮಹಿಳಾ ವೈದ್ಯರ ನೇಮಕ ಆಗಿದೆ
- PHC ಗಳಲ್ಲಿ ಸ್ವಲ್ಪ ಮಟ್ಟಿಗೆ ಸ್ವಚ್ಛತೆಯಲ್ಲಿ ಬದಲಾವಣೆ ಆಗಿದೆ ಮತ್ತು DHO ಕಛೇರಿಯಲ್ಲಿ ಜನಾರೋಗ್ಯ ಆಂದೋಲನದೊಂದಿಗೆ ಚರ್ಚೆ ನಡೆಸಿದ್ದು

ಜಿಲ್ಲಾ ತರಬೇತಿಯ ನಂತರ ಒಟ್ಟು 37 ಉಪಕೇಂದ್ರಗಳ ಸಮೀಕ್ಷೆ ಮಾಡಿದ ಬಗ್ಗೆ ಹಾಗೂ 34 ಆರೋಗ್ಯ ಸೇವೆ ನಿರಾಕರಣೆಗಳ ದಾಖಲಾತಿ ಮಾಡಿದ್ದನ್ನು ಹಂಚಿಕೊಂಡರು.

ಉಪಕೇಂದ್ರಗಳಲ್ಲಿನ ಕೊರತೆಗಳು

- ಸ್ವಚ್ಛತೆ, ನೀರು, ಶೌಚಾಲಯ ಮತ್ತು ಔಷಧ ಇಲ್ಲದೆ ಇರುವುದು, ANM ಗಳು ಸ್ಥಳೀಯವಾಗಿ ವಾಸ ಇಲ್ಲದೆ ಇರುವುದು, ANM ಗಳ ಗ್ರಾಮ ಭೇಟಿ ನಿಯಮಿತವಾಗಿ ನಡೆಯದೆ ಇರುವುದು, "ಆಶಾ" ಗಳ ಕೆಲಸ ಕಾರ್ಯಗಳು ನಿಗದಿತವಾಗಿ/ ಸ್ಪಷ್ಟವಾಗಿ ಇಲ್ಲದೆ ಇರುವುದು ಹೀಗೆ ವಿವಿಧ ರೀತಿಯ ಆರೋಗ್ಯ ಸೇವೆಯ ನಿರ್ಲಕ್ಷ್ಯ ಹಾಗೂ

ನಿರಾಕರಣೆಗಳಲ್ಲಿ

- PHCಗಳಲ್ಲಿ ರೋಗಿಗಳಿಗೆ ಸರಿಯಾಗಿ ಸ್ಪಂದಿಸದೇ ಇರುವುದು.
- ಔಷಧಿಗಳನ್ನು ಹೊರಗಡೆ ಬರೆದುಕೊಡುವುದು.
- ವೈದ್ಯರ ಕೊರತೆ
- HIV ಪಾಸಿಟಿವ್ ಮಹಿಳೆಯರಿಗೆ ತಾರತಮ್ಯ
- ಹೆರಿಗೆ ಸೇವೆಯ ನಿರಾಕರಣೆ/ ಸಾವು
- ಖಾಸಗಿ ನರ್ಸಿಂಗ್ ಹೋಂಗಳಿಗೆ ಹೋಗುವಂತೆ ನಿರ್ದೇಶಿಸುವುದು. ಕೆಲವು ANM ಗಳು ಮಾಹಿತಿ ಕೊಡದೆ ನಿರಾಕರಣೆ ಮಾಡಿರುವುದು ಹಾಗೂ ಬಹುತೇಕ ಉಪಕೇಂದ್ರಗಳ ANM ಗಳು ಮಾಹಿತಿಯನ್ನು ನೀಡಲು ಹಲವಾರು ದಿನಗಳನ್ನು ತೆಗೆದುಕೊಂಡಿದ್ದು, ಜೊತೆಗೆ ಉಪಕೇಂದ್ರದಲ್ಲಿ ಸಿಗದೇ ಇರುವುದು. ರಸ್ತೆ, ಹೋಟೆಲ್ ಮತ್ತು ಬಸ್‌ಸ್ಟ್ಯಾಂಡ್‌ಗಳಲ್ಲಿ ಮಾಹಿತಿ ನೀಡಿದ್ದರ ಬಗ್ಗೆ ಹೆಚ್ಚಿನ ಕಾರ್ಯಕರ್ತರು ತಮ್ಮ ಅನುಭವಗಳನ್ನು ಹಂಚಿಕೊಂಡರು. (ಪೂರ್ಣ ಮಾಹಿತಿ ಫಾರಂಗಳಲ್ಲಿ ಲಭ್ಯವಿದೆ)

ಕ್ರಿಯಾ ಯೋಜನೆ

- ಏಪ್ರಿಲ್ 2 ನೇ ವಾರದಲ್ಲಿ 3 ದಿನಗಳ ತರಬೇತಿ ಕಾರ್ಯಾಗಾರ ನಡೆಸುವಂತೆ ಕೋರಿದ್ದಾರೆ.
- ಜಿಲ್ಲಾ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸುವುದು
- ವಿವಿಧ ಸಂಸ್ಥೆಗಳ ಮಟ್ಟದಲ್ಲಿ ಸಂಸ್ಥೆಯ ಸಿಬ್ಬಂದಿ ಹಾಗೂ ಸ್ವಯಂ ಕಾರ್ಯಕರ್ತರಿಗೆ ಒಂದು ದಿನದ ತರಬೇತಿ ಆಯೋಜಿಸುವುದು
- ವಿವಿಧ ಆರೋಗ್ಯ ರಕ್ಷಣಾ ಮಾಹಿತಿಗಳು ಹಾಗೂ ಸೇವಾ ಸೌಲಭ್ಯಗಳನ್ನು ಆಗಿಂದಾಗ್ಗೆ ಜಿಲ್ಲಾ ಸಮಿತಿಗೆ ನೀಡುವುದು
- ಪ್ರತಿ ತಿಂಗಳು ಜಿಲ್ಲಾ ಸಮಿತಿ ಸಭೆ ನಡೆಸುವುದು
- ಜಿಲ್ಲಾ ಸಮಿತಿಯ ಸಂಪರ್ಕ ಕಾರ್ಯವನ್ನು ಶ್ರೀದೇವಿ ಕೃಷ್ಣಮೂರ್ತಿ, ವಿಶ್ವಚೇತನ ಸಂಸ್ಥೆಯಿಂದ ನಡೆಸುವುದು

6. ಬಾಗಲಕೋಟೆ:

17 ವರ್ಷಗಳ ನಂತರ ತೆರೆದ ಉಪ–ಕೇಂದ್ರದ ಬಾಗಿಲು. ಜನಾರೋಗ್ಯ ಆಂದೋಲನ–ಕರ್ನಾಟಕ ಬಾಗಲಕೋಟೆ ಜಿಲ್ಲಾ ಸಮಿತಿ

ಬಾದಾಮಿ ತಾಲ್ಲೂಕಿನ ಯರಗೊಪ್ಪ ಎಸ್.ಪಿ. ಗ್ರಾಮದಲ್ಲಿ 17 ವರ್ಷಗಳ ಹಿಂದೆ ಸದರಿ ಗ್ರಾಮದ ಜನರ ತಕ್ಷಣದ ಆರೋಗ್ಯ ಸೇವೆಗಳಿಗಾಗಿ ಪ್ರಾಥಮಿಕ ಆರೋಗ್ಯ ಉಪಕೇಂದ್ರವನ್ನು ಕಟ್ಟಿಸಲಾಗಿತ್ತು. ಸದರಿ ಆರೋಗ್ಯ ಕೇಂದ್ರಕ್ಕೆ ಕಿರಿಯ ಆರೋಗ್ಯ ಸಹಾಯಕಿಯನ್ನು (ANM) ನೇಮಕ ಮಾಡಲಾಗಿತ್ತು. ಆದರೆ ಆಕೆಗೆ ಸ್ಥಳೀಯ ರಾಜಕೀಯ ಮುಖಂಡ ಕುಮ್ಮಕ್ಕಿದ್ದರಿಂದ ಸರಿಯಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲ. ಉಪಕೇಂದ್ರಕ್ಕೆ ಬರುತ್ತಿರಲಿಲ್ಲ. ಬಾಗಿಲು ಸಹ ತೆರೆಯುತ್ತಿರಲಿಲ್ಲ. ಗ್ರಾಮದ ದಲಿತ ಯುವಕರು ಅನೇಕ ಬಾರಿ ಆರೋಗ್ಯ ಇಲಾಖೆಗೆ ದೂರು ನೀಡಿದ್ದರೂ ಸಹ ಪ್ರಯೋಜನವಾಗಿರಲಿಲ್ಲ. ಕೇಂದ್ರದ ಒಳಗಿರುವ ಫ್ಯಾನ್, ವಿದ್ಯುತ್ ದೀಪ, ನೀರಿನ ಟ್ಯಾಂಕ್ ಸೇರಿದಂತೆ ಎಲ್ಲಾಸಲಕರಣೆಗಳು ಹಾಳಾಗಿದ್ದವು. ಅದಲ್ಲದೆ ದಿನಗಳು ಕಳೆದಂತೆ ಸ್ಥಳೀಯ ಸಲಕರಣೆಗಳು ಹಾಳಾಗಿದ್ದವು. ಅಲ್ಲದೆ ದಿನಗಳು ಕಳೆದಂತೆ ಸ್ಥಳೀಯ ಜನರು ಉಪಕೇಂದ್ರದ ಕಟ್ಟಡವನ್ನು ಸ್ವಂತ ಬಳಕೆಗೆ ದನ, ಕುರಿ ಕಟ್ಟಲು ದಿನಬಳಕೆ ವಸ್ತುಗಳನ್ನು ಶೇಖರಿಸಲು ಸೇರಿದಂತೆ ಇತರೇ ಕೆಲಸಗಳಿಗೆ ಧಾರಾಳವಾಗಿ ಬಳಸುತ್ತಿದ್ದರು.

ಈ ವಿಷಯವು ಜನಾರೋಗ್ಯ ಆಂದೋಲನ–ಬಾಗಲಕೋಟೆ ಸಮಿತಿ ಸದಸ್ಯರಿಗೆ ತಿಳಿದ ಕೂಡಲೇ ಖುದ್ದು ಸ್ಥಳ ವೀಕ್ಷಿಸಿದರು. ಅದರ ಪ್ರಸಕ್ತ ಸ್ಥಿತಿಗತಿಯ ಬಗ್ಗೆ ಶ್ರೀಮತಿ ಸ್ವರ್ಣ ಭಟ್ ಮತ್ತು ನವೀನ್ (ಹೆಡ್‌ಸ್ಟ್ರೀಮ್ಸ್ ಸಂಸ್ಥೆ) ಕಿರು ಸಾಕ್ಷ್ಯ ಚಿತ್ರ "ಆರೋಗ್ಯಕ್ಕಾಗಿ ಹೋರಾಟ– ಉಪಕೇಂದ್ರವೊಂದರ ಕಥೆ" ತಯಾರಿಸಿ ಸ್ಥಳೀಯ ಜಿಲ್ಲಾ ಆರೋಗ್ಯ ಅಧಿಕಾರಿಗಳ ಗಮನಕ್ಕೆ ತರಲಾಯಿತು. ತಕ್ಷಣ ಸ್ಪಂದಿಸಿದ DHO ರವರು 17 ವರ್ಷಗಳಿಂದ ಉಪಕೇಂದ್ರದ ದುಸ್ಥಿತಿಗೆ ಕಾರಣವಾಗಿದ್ದ ANM ರವರನ್ನು ವರ್ಗ ಮಾಡಿ ಬೇರೆಯವರಿಗೆ ಜವಾಬ್ದಾರಿ ನೀಡಿದ್ದಾರೆ. ಆದರೆ ಹೊಸದಾಗಿ ನೇಮಕಗೊಂಡಿರುವ ANM ಎರಡು ಕೇಂದ್ರಗಳ ಕರ್ತವ್ಯ ನಿರ್ವಹಿಸಬೇಕಿದೆ. ಆದರೂ ಮುಂದಿನ ದಿನಗಳಲ್ಲಿ ಈ ಕೇಂದ್ರ ಕರ್ತವ್ಯ ನಿರ್ವಹಿಸುವ ಭರವಸೆ ಇದೆ.

7. ಬಾಗಲಕೋಟೆ– "ಔಷಧ ಮತ್ತುಶ್ರೀಸಾಮಾನ್ಯ"–ಔಷಧಗಳ ಬಗ್ಗೆಕಾರ್ಯಾಗಾರ

ದಿನಾಂಕ 24–10–2010 ರಂದು ಜನಾರೋಗ್ಯ ಆಂದೋಲನ ಕರ್ನಾಟಕ, ಶ್ರೀಮತಿ ಸ್ವರ್ಣ ಭಟ್ ಮತ್ತು ಹೆಡ್‌ಸ್ಟ್ರೀಮ್ಸ್ ಸಂಸ್ಥೆ ಬಾಗಲಕೋಟೆ ಜಿಲ್ಲಾ ಘಟಕದ ವತಿಯಿಂದ ಒಂದು ದಿನದ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಡಾ.ಗೋಪಾಲ ದಾಬಡೆಯವರು ಔಷಧ ಮತ್ತು ಶ್ರೀ ಸಾಮಾನ್ಯ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಹೆಡ್ ಸ್ಟ್ರೀಮ್ ಸಂಸ್ಥೆ ಈ ಜವಾಬ್ದಾರಿಯನ್ನು ಹೊತ್ತುಕೊಂಡಿತ್ತು. 45 ಜನ ಭಾಗವಹಿಸಿದ್ದರು. ಡಾ. ಗೋಪಾಲ ದಾಬಡೆಯವರು ಅವಶ್ಯಕ ಮತ್ತು ಅನವಶ್ಯಕ ಔಷಧಿಗಳ ಬಗ್ಗೆ ಮಾತಾಡಿದರು. ಇಂದು ಬಹುರಾಷ್ಟ್ರೀಯ ಔಷಧ ಕಂಪನಿಗಳು ಪೇಟೆಂಟಿನ ಬಲದಿಂದ ಜನಸಾಮಾನ್ಯರ ಆರೋಗ್ಯದ ಮೇಲೆ ಸವಾರಿ ಮಾಡುತ್ತಿವೆ, ಇಂಥ ಕಂಪನಿಗಳ ವಿರುದ್ಧ ಔಷಧ ಕ್ರಿಯಾ ವೇದಿಕೆ ಜನಾರೋಗ್ಯ ಆಂದೋಲನದ ಜೊತೆ ಸೇರಿಕೊಂಡು ಕೆಲಸ ಮಾಡುತ್ತಿದೆಯೆಂದು ವಿವರಿಸಿದರು. ಹೊಳೆಆಲೂರು ಪ್ರಾ.ಆ.ಕೇ. ದ ವೈದ್ಯಾಧಿಕಾರಿಗಳಾದಂತಹ ಶ್ರೀಮತಿ ಶಾರದಾ ಅವರನ್ನು ಸಂವಾದಕ್ಕಾಗಿ ಆಹ್ವಾನಿಸಲಾಗಿತ್ತು. ಇವರೊಂದಿಗೆ ಶಿಬಿರಾರ್ಥಿಗಳು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ತಮಗಿದ್ದ ಹತ್ತಾರು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಿದರು.

ಜಿಲ್ಲಾ ಮಟ್ಟದ ಆರೋಗ್ಯ ಮತ್ತು ಮಾನವ ಹಕ್ಕು ಕುರಿತ ತರಬೇತಿ ಕಾರ್ಯಾಗಾರ

1. ಚಿತ್ರದುರ್ಗ

ಮಾನವ ಹಕ್ಕಾಗಿ ಆರೋಗ್ಯ ಎಂಬ ವಿಷಯಕ್ಕೆ ಕುರಿತಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದ 2 ದಿನದ ತರಬೇತಿ ಕಾರ್ಯಕ್ರಮದ ವರದಿ

ದಿನಾಂಕ: 13–14 ನೇ ಡಿಸೆಂಬರ್ 2010 ಸ್ಥಳ: ಮಯೂರಿ ಯಾತ್ರಿ ನಿವಾಸ, ಚಿತ್ರದುರ್ಗ

2010, ಆಗಸ್ಟ್ 30 ರಂದು ಜಿಲ್ಲಾಮಟ್ಟದ ಪ್ರತಿಭಟನ ರ್‍ಯಾಲಿ ನಡೆಸಲಾಯಿತು. ರ್‍ಯಾಲಿಯಲ್ಲಿ ಸುಮಾರು 300 ಜನ ವಿವಿಧ ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ವಿವಿಧ ಸಂಘ/ಸಂಸ್ಥೆಗಳ ಮುಖಂಡರು ಭಾಗವಹಿಸಿದ್ದರು. ಅದೇ ಸಂದರ್ಭದಲ್ಲಿ ಜಿಲ್ಲಾ ಸಮಿತಿ ಸದಸ್ಯರು ಸೇರಿ ನಿರ್ಧರಿಸಿದಂತೆ 2 ದಿನಗಳ ಆರೋಗ್ಯ ಹಾಗೂ ಮಾನವ ಹಕ್ಕು ಕುರಿತ ಕಾರ್‍ಯಾಗಾರವನ್ನು ದಿನಾಂಕ 13–14ನೇ ಡಿಸೆಂಬರ್ 2010ರಂದು ಆಯೋಜಿಸಲಾಗಿತ್ತು. ಸದರಿ ತರಬೇತಿಗೆ ಹೊಳಲ್ಕೆರೆ, ಚಳ್ಳಕೆರೆ, ಮೊಳಕಾಲ್ಮೂರು, ಚಿತ್ರದುರ್ಗ ತಾಲ್ಲೂಕುಗಳು ಸೇರಿದಂತೆ ಮೊದಲನೆ ದಿನದ ತರಬೇತಿಗೆ 34 ಕಾರ್ಯಕರ್ತರು ಭಾಗವಹಿಸಿದ್ದರು. 2 ನೇ ದಿನ 72 ಸ್ವಯಂ ಸೇವಾ ಕಾರ್ಯಕರ್ತರು ಭಾಗವಹಿಸಿದ್ದರು. ಈ ಎರಡು ದಿನಗಳ ಕಾರ್ಯಾಗಾರಕ್ಕೆ 7 ಸ್ವಯಂ ಸೇವಾ ಸಂಸ್ಥೆಗಳು, ಮಹಿಳಾ ಒಕ್ಕೂಟದ ಸದಸ್ಯರು ಭಾಗವಹಿಸಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ಎಂ.ಕರಿಬಸಪ್ಪ, ಪ್ರಹ್ಲಾದ್, ಓಬಳೇಶ್, ಮಂಜುಳಾ ಮತ್ತು ಮಲ್ಲಿಕಾರ್ಜುನ ಇವರುಗಳು ಭಾಗವಹಿಸಿದ್ದರು.

ತರಬೇತಿಯ ವಿಷಯಗಳು:

1. – ಆರೋಗ್ಯದ ಪರಿಕಲ್ಪನೆ
   – ಆರೋಗ್ಯದ ಹಕ್ಕು– ಮಾನವ ಹಕ್ಕು
   – ಆರೋಗ್ಯದ ಸಾಮಾಜಿಕ ನಿರ್ಧಾರಕಗಳು
   – ಆಲ್ಮಾ ಆಟ ಘೋಷಣೆ ಮತ್ತು ಪ್ರಾಥಮಿಕ ಆರೋಗ್ಯ ಪಾಲನೆ
2. NRHM ನ ಆಶಯಗಳು
   – NRHM ನ ಗುರಿ, ಉದ್ದೇಶ ಮತ್ತು ಕಾರ್ಯಕ್ರಮಗಳು ಮತ್ತು NRHM ನ ಸಾಮುದಾಯೀಕರಣ
   – ASHA, VHSC, ARS ಮುಕ್ತನಿಧಿಗಳು
3. 8 ಜಿಲ್ಲೆಗಳ ಜನಸಂವಾದದ ಪರಿಣಾಮಗಳು
4. ಕ್ರಿಯಾ ಯೋಜನೆ

ಅಲ್ಲದೆ, ಎರಡನೇ ದಿನ ಹೊಸದಾಗಿ ಭಾಗವಹಿಸಿದ್ದ ಸುಮಾರು 30 ಕಾರ್ಯಕರ್ತರಿಗೆ ಮೊದಲನೆ ದಿನದ ವಿಷಯಗಳ ಕುರಿತ ತರಬೇತಿಯನ್ನು 1 ಗಂಟೆಗಳ ಕಾಲ ಪ್ರತ್ಯೇಕವಾಗಿ ನಡೆಸಲಾಯಿತು. ಮುಂದಿನ ಕ್ರಿಯಾ ಯೋಜನೆಯನ್ನು ಹೀಗೆ ನಿರ್ಧರಿಸಲಾಯಿತು.

ಕ್ರ.ಸಂ	ಸಂಸ್ಥೆ ಹೆಸರು	ತಾಲ್ಲೂಕು	ಜವಾಬ್ದಾರಿ	ಕ್ರಿಯಾ ಯೋಜನೆ (ಸಮೀಕ್ಷೆಗಳ ಸಂಖ್ಯೆ)			
				ಉ.ಕೇಂದ್ರ	ಪ್ರಾ.ಆ.ಕೇಂದ್ರ	ವಿಹೆಚ್‌ಎಸ್‌ಸಿ	ಆರೋಗ್ಯ
1.	ಸ್ವಾಮಿ ರೂರಲ್	ಹೊಳಲ್ಕೆರೆ	ಶ್ರೀಮತಿಗೌರಮ್ಮ	5	3	2	2
2.	ಡೆವಲಪ್‌ಮೆಂಟ್	ಚಳ್ಳಕೆರೆ	ಪ್ರಕಾಶ್/ಜಯಣ್ಣ	5	2	3	5
3.	ಸಂಸ್ಥೆದಲಿತ್	ಹೊಳಲ್ಕೆರೆ	ಕೃಷ್ಣಪ್ಪ	4	2	2	2
4.	ವರ್ಲ್ಡ್‌ಕುವೆಂಪು ಸಂಸ್ಥೆ	ಚಿತ್ರದುರ್ಗ	ಮಂಜುಳಾ	2	2	2	5
5.	ಸಿರಿ ಒಕ್ಕೂಟಗಗನ	ಚಿತ್ರದುರ್ಗ	ಪಾರ್ವತಮ್ಮ	2	2	2	6
6.	ಒಕ್ಕೂಟವಿಶ್ವಚೇತನ	ಚಿತ್ರದುರ್ಗ	ಶ್ರೀದೇವಿ	2	2	2	5
7.	ಸಂಸ್ಥೆಭೂಮಿ ತಾಯಿ ಮಹಿಳಾ ಒಕ್ಕೂಟ	ಭರಮಸಾಗರ	ಸುಶೀಲಮ್ಮ	5	4	3	5
	ಒಟ್ಟು			**25**	**17**	**16**	**30**

2. ತುಮಕೂರು

ಜನಾರೋಗ್ಯ ಆಂದೋಲನ–ಕರ್ನಾಟಕ ಜಿಲ್ಲಾ ಸಮಿತಿಯ ಜಿಲ್ಲಾಮಟ್ಟದ ಆರೋಗ್ಯ ಹಾಗೂ ಮಾನವ ಹಕ್ಕು ಕುರಿತ ಎರಡು ದಿನಗಳ ತರಬೇತಿ ಕಾರ್ಯಾಗಾರವನ್ನು ದೇವರಾಯನ ದುರ್ಗ, ಪ್ರವಾಸಿ ಮಂದಿರದಲ್ಲಿ ದಿನಾಂಕ 24 ಮತ್ತು 25 ಫೆಬ್ರವರಿ, 2011 ರಂದು ಆಯೋಜಿಸಲಾಗಿತ್ತು.

ಸದರಿ ತರಬೇತಿಯಲ್ಲಿ ಜಿಲ್ಲೆಯ 4 ತಾಲ್ಲೂಕುಗಳಾದ ಪಾವಗಡ, ಮಧುಗಿರಿ, ಕೊರಟಗೆರೆ, ತುಮಕೂರುಗಳಿಂದ ತಮಟೆ, ಗ್ರಾಕೂಸ, ಜೀವಿಕ, ಅಂಗವಿಕಲರ ಒಕ್ಕೂಟ, ಗೀತಾಂಜಲಿ ಮತ್ತು ದಲಿತ ಕ್ರೈಸ್ತ ಒಕ್ಕೂಟದ ಸದಸ್ಯರು ಭಾಗವಹಿಸಿದ್ದರು. ಒಟ್ಟು 41 ಜನ ಪ್ರತಿನಿಧಿಗಳು ಎರಡು ದಿನಗಳ ತರಬೇತಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ತರಬೇತಿಯಲ್ಲಿ ವಿಶೇಷವಾಗಿ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ (VHSC) ಸದಸ್ಯರು, ಆಶಾ, ಗ್ರಾಮ ಪಂಚಾಯಿತಿ ಸದಸ್ಯರು, ವಿದ್ಯಾರ್ಥಿಗಳು, ದಲಿತ, ಅಂಗವಿಕಲ ಕಾರ್ಯಕರ್ತರು ಭಾಗವಹಿಸಿದ್ದರು.

ತರಬೇತಿಯ ವಿಷಯಗಳು:

- ಆರೋಗ್ಯದ ಪರಿಕಲ್ಪನೆ, ಆರೋಗ್ಯದ ಹಕ್ಕು ಮತ್ತು ಆರೋಗ್ಯದ ಹಕ್ಕು ಮತ್ತು ಆರೋಗ್ಯದ ಸಾಮಾಜಿಕ ನಿರ್ಧಾರಕಗಳು
- ಮಾನಸಿಕ ಆರೋಗ್ಯದ ಅವಲೋಕನ ಹಾಗೂ ಆರೋಗ್ಯ ಹಕ್ಕು ಚಳುವಳಿಯಲ್ಲಿ ಒಳಗೊಳ್ಳುವಿಕೆ
- ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಗುರಿ, ಉದ್ದೇಶ, ಕಾರ್ಯಕ್ರಮಗಳು ಮತ್ತು ಸಮುದಾಯಗಳ ಪಾತ್ರ

ಮೊದಲನೇ ದಿನ:

ಮಾನಸಿಕ ಆರೋಗ್ಯ:

ವಿಶೇಷವಾಗಿ ಮಾನಸಿಕ ಆರೋಗ್ಯದ ಪರಿಕಲ್ಪನೆಗಳ ಬಗ್ಗೆ ಡಾ:ಅಜಯಕುಮಾರ್, ಪುಣ್ಯಕೋಟಿ ಫೌಂಡೇಷನ್, ಹೊಸಪೇಟೆ, ಸುದೀರ್ಘವಾಗಿ ಮತ್ತು ಸರಳವಾಗಿ ಕಾರ್ಯಕರ್ತರಿಗೆ ಅರ್ಥೈಸಿದರು. ಅದರಂತೆ ಮುಂದಿನ ದಿನಗಳಲ್ಲಿ ಆರೋಗ್ಯದ ಹಕ್ಕು ಚಳುವಳಿಯಲ್ಲಿ ಮುಖ್ಯವಾಹಿನಿಗೆ ತಂದು ಗ್ರಾಮೀಣ– ನಗರ ಬಡವರ ಮಾನಸಿಕ ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡಲು ನಿರಂತರ ಕಾರ್ಯಚಟುವಟಿಕೆಗಳನ್ನು ರೂಪಿಸುವ ನಿಟ್ಟಿನಲ್ಲಿ ಚಿಂತಿಸಲಾಗಿದೆ. ಮಾನಸಿಕ ಆರೋಗ್ಯದ ಬಗ್ಗೆ ಲಭ್ಯವಿರುವ ವಿವಿಧ ಶಿಕ್ಷಣ ಸಾಮಗ್ರಿಗಳನ್ನು ವಿತರಿಸಲಾಯಿತು.

ಆರೋಗ್ಯದ ಹಕ್ಕು:

ಆರೋಗ್ಯ ಹೇಗೆ ಮೂಲಭೂತ ಹಕ್ಕು, ಪ್ರಾಥಮಿಕ ಆರೋಗ್ಯ ಆರೈಕೆಯಲ್ಲಿ ಮೂಲಭೂತ ಸೌಲಭ್ಯಗಳಾದ ನೀರು, ಆಹಾರ, ನೈರ್ಮಲ್ಯ, ಶಿಕ್ಷಣ, ಉದ್ಯೋಗ ಮುಖ್ಯ ಪಾತ್ರ ವಹಿಸಿದೆ ಎಂಬುದರ ಬಗ್ಗೆ ಓಬಳೇಶ್ ವಿವರವಾಗಿ ತಿಳಿಸಿದರು. ಅದೇ ರೀತಿ ಪ್ರಸ್ತುತ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ವಿವಿಧ ಹಂತಗಳನ್ನು ಪ್ರಹ್ಲಾದ್ ವಿವರಿಸಿದರು. ಚರ್ಚೆ/ ಸಂವಾದಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಎರಡನೇ ದಿನ:

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (NRHM) ಘಟಕಗಳು ಅವುಗಳ ಕಾರ್ಯವ್ಯಾಪ್ತಿ, ಆರೋಗ್ಯ ಸಮುದಾಯೀಕರಣಗಳ ಕುರಿತು ಓಬಳೇಶ್ ವಿವರಿಸಿದರು.

ನಂತರ ಪ್ರಹ್ಲಾದ್‌ರವರು ಸಂಪೂರ್ಣ ಶೌಚಾಲಯ ಮತ್ತು ಆರೋಗ್ಯದ ಬಗ್ಗೆ ಸಂಕ್ಷಿಪ್ತವಾದ ಪರಿಕಲ್ಪನೆಯನ್ನು ವಿವರಿಸಿದರು.

ತರಬೇತಿಯ ಕೊನೆಯಲ್ಲಿ ಪ್ರತಿ ತಾಲ್ಲೂಕು ಸೇರಿದಂತೆ ಭಾಗವಹಿಸಿದ್ದ ಸಂಸ್ಥೆ/ಸಂಘಗಳ ವ್ಯಾಪ್ತಿಯಲ್ಲಿ ಕ್ರಿಯಾ ಯೋಜನೆ ನಡೆಸಲಾಯಿತು.

ಸಂಸ್ಥೆ	ತಾಲ್ಲೂಕು	ಚಟುವಟಿಕೆಗಳು	ಕಾಲ
ತಮಟೆ/ ಗ್ರಾಕೂಸ	ಪಾವಗಡ / ಮಧುಗಿರಿ	– 15 ಉಪಕೇಂದ್ರಗಳು – 15 ಮುಕ್ತ ನಿಧಿ, VHSCಗಳ ಅಧ್ಯಯನ/ದ ದಾಖಲೀಕರಣ – ಆರೋಗ್ಯ ಸೇವೆ/ ಸೌಲಭ್ಯಗಳ ನಿರಾಕರಣೆಗೆ ದಾಖಲೀಕರಣ – 8 PHC ಗಳ ಅಧ್ಯಯನ	ಏಪ್ರಿಲ್/ಮೇ/ಜೂನ್
ಜೀವಿಕ, ಗೀತಾಂಜಲಿ	ಮಧುಗಿರಿ	–ಆಶಾ ಕಾರ್ಯಕರ್ತರ ಭೇಟಿ ಅವರ ಸಮಸ್ಯೆ ಸವಾಲುಗಳ ಅಧ್ಯಯನ –10 ಉಪಕೇಂದ್ರಗಳ ಅಧ್ಯಯನ	ಏಪ್ರಿಲ್/ಮೇ/ಜೂನ್
ಅಂಗವಿಕಲರ ಒಕ್ಕೂಟ, DCF, ಆದರ್ಶ ಫೌಂಡೇಶನ್	ತುಮಕೂರು ಕೊರಟಗೆರೆ	– ಅಂಗವಿಕಲರಿಗೆ ಒದಗಿಸಿರುವ ಶೇ.3% ಹಣದ ಬಗ್ಗೆ ಖಖಖ ಅರ್ಜಿ ಸಲ್ಲಿಸುವುದು – ಅಂಗನವಾಡಿ, ಉಪಕೇಂದ್ರಗಳು ಸರ್ವೆ, ಸಮಸ್ಯೆ–ಸವಾಲುಗಳ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರುವುದು.	ಏಪ್ರಿಲ್/ಮೇ/ಜೂನ್
ತಮಟೆ	ಪಾವಗಡ, ಮಧುಗಿರಿ	– ಫ್ಲೋರೈಡ್ ನೀರಿನ ಪರಿಣಾಮ – ಅಪೌಷ್ಟಿಕತೆ ಮಕ್ಕಳ, ಮಹಿಳೆಯರ ಸಂಬಂಧ, BMI ಮಾಡುವುದು. – ಪ್ರತಿ ತಾಲ್ಲೂಕಿನಿಂದ 5 ಹಳ್ಳಿಗಳಂತೆ	ಏಪ್ರಿಲ್/ಮೇ/ಜೂನ್

ರಾಜ್ಯ ಮಟ್ಟದ ಆರೋಗ್ಯ ಮತ್ತು ಮಾನವ ಹಕ್ಕು ಕುರಿತ ತರಬೇತಿ ಕಾರ್ಯಾಗಾರ

1. ರಾಜ್ಯ ಮಟ್ಟದ 2 ದಿನಗಳ ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರ

ಜನಾರೋಗ್ಯ ಆಂದೋಲನ ಕಳೆದ 2-3 ವರ್ಷಗಳಿಂದ ಎರಡು ಮುಖ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿದೆ. ಮೊದಲನೆಯದು ಜಿಲ್ಲಾ ಮಟ್ಟದಲ್ಲಿ ವಿವಿಧ ಸಂಘ/ಸಂಸ್ಥೆಗಳ ಕಾರ್ಯಕರ್ತರನ್ನು ಒಂದುಗೂಡಿಸುತ್ತ ಜಿಲ್ಲಾ ಸಮಿತಿಗಳನ್ನು ರೂಪಿಸುವುದು. ಈ ಸಮಿತಿಗಳಿಗೆ ಆರೋಗ್ಯ ಮಾನವ ಹಕ್ಕು ಕುರಿತ ತರಬೇತಿಗಳನ್ನು ಆಯೋಜಿಸಿ ಆರೋಗ್ಯ ಹಕ್ಕು ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಪ್ರೇರೇಪಿಸುವುದು.

ಎರಡನೆಯದು ಜಿಲ್ಲಾ, ತಾಲ್ಲೂಕು, ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಸ್ಥಿತಿಗತಿಗಳನ್ನು ಅಧ್ಯಯನ / ಅವಲೋಕನ ಮಾಡುವುದರ ಮೂಲಕ ಬಹುತೇಕ ವಸ್ತುಸ್ಥಿತಿಯನ್ನು ದಾಖಲೀಕರಿಸಿ, ಸಾರ್ವಜನಿಕರು, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಜನಾರೋಗ್ಯ ಜನಸಂವಾದಗಳನ್ನು (ಜನತಾ ನ್ಯಾಯಾಲಯ) 8

ಜಿಲ್ಲೆಗಳಲ್ಲಿ ವ್ಯವಸ್ಥಿತವಾಗಿ ಆಯೋಜಿಸಲಾಯಿತು. ಈ ಪ್ರಕ್ರಿಯೆಗಳಿಂದ 8 ಜಿಲ್ಲೆಗಳಾದ (ತುಮಕೂರು, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಬಾಗಲಕೋಟೆ, ಬೆಳಗಾವಿ, ರಾಯಚೂರು ಮತ್ತು ಬಳ್ಳಾರಿ) ಗಳ ಕಾರ್ಯಕರ್ತರು ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಅನುಭವಗಳನ್ನು ಪಡೆದುಕೊಂಡಿದ್ದಾರೆ. ಅಲ್ಲದೆ ಆರೋಗ್ಯ ಸೇವೆ ಸೌಲಭ್ಯಗಳ ಜಾರಿಯಲ್ಲಿ ಆಗುವ ನ್ಯೂನ್ಯತೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವಂತೆ ಪ್ರೇರಣೆಗೊಂಡಿದ್ದಾರೆ. ಈ ಹಂತದಲ್ಲಿ ಸದರಿ ಕಾರ್ಯಕರ್ತರಿಗೆ ಅಗತ್ಯವಿರುವ ನಿರ್ದಿಷ್ಟ ವಿಷಯಗಳ ಮೇಲೆ ತರಬೇತಿ ಅಗತ್ಯವಿದೆ ಎಂದು ಭಾವಿಸಿ, ಮತ್ತು ಈ 3 ವರ್ಷಗಳಲ್ಲಿ ನಡೆದ ಒಟ್ಟಾರೆ ಪ್ರಕ್ರಿಯೆಗಳಲ್ಲಿ ಪ್ರತಿ ಕಾರ್ಯಕರ್ತರು ವ್ಯಕ್ತಿಗತವಾಗಿ ಅವರು ಹಾಗೂ ಜಿಲ್ಲಾ ಮಟ್ಟದ ವೇದಿಕೆಯಲ್ಲಿ ಭಾಗವಹಿಸಿ ಆಗಿರುವ ಅನುಭವ, ಬಂದ ಸವಾಲುಗಳು ಹಾಗೂ ಸಮಸ್ಯೆಗಳು ಮತ್ತು ಆಯಾ ಜಿಲ್ಲೆಗಳಲ್ಲಿ ನಡೆದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿದ ಬೆಂಬಲಿಸಿದ ಜನಪರ ಸಂಘಟನೆಗಳು ಮುಖಂಡರು ಒಳಗೊಂಡಂತೆ ಒಂದು ಅವಲೋಕನ ಮಾಡುವುದರ ಅಗತ್ಯ ಇತ್ತು. ಅದರ ಜೊತೆಗೆ JAAK ಮುಂದಿನ ಸಂಘಟನಾತ್ಮಕ ಪ್ರಕ್ರಿಯೆಗಳಿಗೆ ಅಗತ್ಯವಿರುವ ಕಾರ್ಯತಂತ್ರಗಳ ಬಗ್ಗೆ ಕ್ರೋಢೀಕೃತ ಸಂವಾದ ನಡೆಸುವುದಕ್ಕೋಸ್ಕರ ಈ ಎರಡು ದಿನಗಳ ರಾಜ್ಯಮಟ್ಟದ ಕಾರ್ಯಾಗಾರವನ್ನು ಹಾವೇರಿಯಲ್ಲಿ ಅಗಸ್ಟ್ 26-28,2010 ರಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಡಾ:ಗೋಪಾಲ ದಾಬಡೆ, ಡಾ:ಅಖಿಲಾ ವಾಸನ್ ಇ. ಪ್ರೇಮ್‌ದಾಸ್, ಸ್ವರ್ಣಭಟ್, ನವೀನ್ ಥಾಮಸ್ ಮುಂತಾದವರು ಆಗಮಿಸಿದ್ದರು. 8 ಜಿಲ್ಲೆಗಳಿಂದ ಸುಮಾರು 40 ಕಾರ್ಯಕರ್ತರು ಭಾಗವಹಿಸಿದ್ದರು.

1. ಮೊದಲನೇ ದಿನದ ಕಾರ್ಯಾಗಾರದಲ್ಲಿ ಕಳೆದ ಮೂರು ವರ್ಷಗಳ ಪುನರಾವಲೋಕನ ಮತ್ತು ಮುಂದಿನ ಕಾರ್ಯತಂತ್ರಗಳ ಬಗ್ಗೆ ಚರ್ಚೆಯನ್ನು ಡಾ:ಅಖಿಲಾ ವಾಸನ್ ಮತ್ತು ಪ್ರೇಮ್‌ದಾಸ್ ನಡೆಸಿಕೊಟ್ಟರು.

2. ಎರಡನೇ ಹಾಗೂ ಮೂರನೇ ದಿನ ನಿರ್ದಿಷ್ಟ ವಿಷಯಗಳಾದ ಔಷಧಿಗಳು, ಅವುಗಳ ಗುಣಮಟ್ಟ ಮತ್ತು ಜೆನರಿಕ್ ಮತ್ತು ಬ್ರ್ಯಾಂಡೆಂಡ್ ಔಷಧಗಳ ವ್ಯತ್ಯಾಸ ಅಗತ್ಯತೆ ಕುರಿತು ಡಾ:ಗೋಪಾಲ ದಾಬಡೆಯವರು ವಿಷಯ ಮಂಡಿಸಿದರು. ಔಷಧಿಗಳ (ಪೇಟೆಂಟ್) ಹಕ್ಕು ಸ್ವಾಮ್ಯತೆ ಕುರಿತಂತೆ ವಿಸ್ತೃತವಾಗಿ ನವೀನ್ ಥಾಮಸ್ ಮಂಡಿಸಿದರು.

– ಈ ಕಾರ್ಯಾಗಾರದಲ್ಲಿ ಪ್ರಬಲವಾಗಿ ಹೊರಹೊಮ್ಮಿದ ವಿಷಯಗಳು.

- ಮುಂದಿನ ದಿನಗಳಲ್ಲಿ ಜನಾರೋಗ್ಯ ಆಂದೋಲನ ಕರ್ನಾಟಕ ರಾಜ್ಯ ಮಟ್ಟದ ಚಳುವಳಿಯಾಗಬೇಕು.
- ಈಗಿರುವ ವ್ಯಾಪ್ತಿ ಅಲ್ಲದೆ ರಾಜ್ಯಾದ್ಯಂತ ವಿಸ್ತರಿಸಬೇಕು.
- ಹೆಚ್ಚಿನ ಕಾರ್ಯಕರ್ತರು ಸಂಘ/ಸಂಸ್ಥೆಗಳು ಪಾಲ್ಗೊಳ್ಳಬೇಕು.
- ರಾಜ್ಯ ಮಟ್ಟದಲ್ಲಿ ಕಲಾತಂಡ ಸಿದ್ಧಗೊಳಿಸಬೇಕು. ರಾಜ್ಯಾದ್ಯಂತ ಕಲಾತಂಡ ಪ್ರವಾಸ ಮಾಡಿ ಆರೋಗ್ಯದ ಹಕ್ಕು ಮಾನವ ಹಕ್ಕಾಗುವತ್ತ ಜನಸಮುದಾಯಗಳನ್ನು ಜಾಗೃತಗೊಳಿಸಬೇಕು.

3. ಕಾರ್ಯಕರ್ತರು ಜಿಲ್ಲಾವಾರು ತಂಡಗಳಲ್ಲಿ ಚರ್ಚೆಮಾಡಿ ಜಿಲ್ಲಾ ಸಮಿತಿಗಳನ್ನ ಬಲಗೊಳಿಸಲು ಯೋಜನೆಯನ್ನು ಹಾಕಿದರು.

2. ಮಾತೃಮರಣ ಮತ್ತು ಅದರ ವ್ಯಾಪ್ತಿ ಕುರಿತ 2 ದಿನಗಳ ರಾಜ್ಯಮಟ್ಟದ ತರಬೇತಿ

ಜುಲೈ 2010 ರಲ್ಲಿ ತುಮಕೂರು ಜಿಲ್ಲೆ ತಮಟೆ ಸಂಸ್ಥೆಯಲ್ಲಿ ನಡೆದ ರಾಜ್ಯ ಮಟ್ಟದ ಕಾರ್ಯಯೋಜನೆ ಸಭೆಯ ನಿರ್ಣಯದಂತೆ ಜನತಾ ನ್ಯಾಯಾಲಯ ನಡೆಸಿದ 8 ಜಿಲ್ಲೆಗಳಲ್ಲಿ ಜಿಲ್ಲಾ ಆಡಳಿತ ತೆಗೆದುಕೊಳ್ಳುವ ಸುಧಾರಿತ ಕ್ರಮಗಳನ್ನು ನಿಯಮಬದ್ಧವಾಗಿ ಅನುಸರಣೆ ಮಾಡುವುದು ಅಗತ್ಯ ಮತ್ತು ಅನಿವಾರ್ಯ. ಈ ಕಾರಣಕ್ಕಾಗಿ ಪ್ರತಿ ಜಿಲ್ಲೆಯಿಂದ ಇಬ್ಬರು ಸಕ್ರಿಯ ಕಾರ್ಯಕರ್ತರನ್ನು ತೊಡಗಿಸಬೇಕು ಎಂದು ನಿರ್ಣಯಿಸಿ, ಪ್ರತಿ ಜಿಲ್ಲೆಯಿಂದ ಕೆಲವು ಕಾರ್ಯಕರ್ತರನ್ನು ಗುರುತಿಸಲಾಗಿತ್ತು. ಇವರು ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್, 3 ತಿಂಗಳುಗಳ ಪ್ರತಿ ತಿಂಗಳು 10 ದಿನಗಳು ಪೂರ್ಣ ಪ್ರಮಾಣದಲ್ಲಿ ಅನುಸರಣಾ ಚಟುವಟಿಕೆಗಳನ್ನು ಮಾಡುವುದು ಹಾಗೂ ಆರೋಗ್ಯ ಸೇವೆ-ಸೌಲಭ್ಯಗಳ ನಿರಾಕರಣೆಗಳನ್ನು ದಾಖಲಿಸಿ ಸಂಬಂಧಪಟ್ಟ ಇಲಾಖೆ, ಲೋಕಾಯುಕ್ತರಿಗೆ ಮತ್ತು ರಾಜ್ಯ ಮಾನವ ಹಕ್ಕು ಆಯೋಗಕ್ಕೆ ದೂರು ಸಲ್ಲಿಸಿ ಆರೋಗ್ಯ ಸೇವೆಗಳ ಸುಧಾರಣೆಗೆ ಶ್ರಮಿಸಬೇಕೆಂಬ ಉದ್ದೇಶಗಳೊಂದಿಗೆ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರಿಗೆ ಸೆಪ್ಟಂಬರ್ 16-17, 2010 ರಂದು ಈ ಎರಡು ದಿನಗಳ ತರಬೇತಿ ಆಯೋಜಿಸಿತ್ತು. ಈ ತರಬೇತಿಯಲ್ಲಿ 6 ಜಿಲ್ಲೆಗಳಿಂದ 12 ಕಾರ್ಯಕರ್ತರು ಭಾಗವಹಿಸಿದ್ದರು.

ಈ ತರಬೇತಿಯಲ್ಲಿ ಮತ್ತೊಂದು ನಿರ್ದಿಷ್ಟ ವಿಷಯ ಅಂದರೆ ಆರೋಗ್ಯ ನಿರಾಕರಣೆಗಳ ವಿಶೇಷವಾಗಿ ತಾಯಿ ಮರಣಗಳ ನೋಂದಣಿ ಮತ್ತು ಸತ್ಯಶೋಧನೆಗೆ ಸಂಬಂಧಿಸಿದಂತೆ, ನಿಖರವಾಗಿ ಹೇಗೆ ತಾಯಿ ಮರಣ ಸಂಭವಿಸುತ್ತದೆ ಇದರ ಹಿಂದಿನ ಸಮಸ್ಯೆಗಳ ಬಗ್ಗೆ ಅಧಿಕೃತವಾದ ಕೆಲ ಅಂಶಗಳನ್ನು ಜನಾರೋಗ್ ಆಂದೋಲನದ ಕಾರ್ಯಕರ್ತೆ ಮತ್ತು ಆರೋಗ್ಯ ಸಂಶೋಧಕಿ ಡಾ:ಆಶಾ ಕಿಲಾರುರವರು ವಿವರವಾದ ಮಾಹಿತಿ ನೀಡುವುದರ ಮೂಲಕ ತಿಳಿಸಿಕೊಟ್ಟರು.

ಜನಾರೋಗ್ಯ ಆಂದೋಲನ ಮುಂದಿನ ದಿನಗಳಲ್ಲಿ ತಾಯಿ ಮರಣದ ಬಗ್ಗೆ ಸತ್ಯಶೋಧನೆ ನಡೆಸಿ ದಾಖಲೀಕರಣ ಮಾಡುವಾಗ ವಿವಿಧ ಅಧಿಕೃತ ವೈದ್ಯಕೀಯ, ಕೌಟುಂಬಿಕ, ವ್ಯಕ್ತಿಗತವಾದ ಅಂಶಗಳ ಆಧಾರದ ಮೇಲೆ ನಡೆಸಲು ಈ ತರಬೇತಿಯಿಂದ ಕಲಿತು ನಿರ್ಧರಿಸಲಾಯಿತು. ಈ ಸಂಬಂಧ ತಾಯಿ ಮರಣಕ್ಕೆ ಪ್ರತ್ಯೇಕ ನಮೂನೆ ಸಿದ್ಧಪಡಿಸಲು

ಜನಾರೋಗ್ಯ ಆಂದೋಲನ- ಕರ್ನಾಟಕ ಉತ್ತರ ಕರ್ನಾಟಕ ವೇದಿಕೆ

ಉತ್ತರ ಕರ್ನಾಟಕದ ಅನೇಕ ಹಿಂದುಳಿದ ಜಿಲ್ಲೆಗಳಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಅವಲೋಕಿಸಿ ಪ್ರಸ್ತುತ ಇರುವಂತ ಸಮಸ್ಯೆಗಳನ್ನು ಸಂಘಟನಾತ್ಮಕವಾಗಿ ಪರಿಹರಿಸುವಂತಹ ಪ್ರಯತ್ನ ಮಾಡುವ ನಿಟ್ಟಿನಲ್ಲಿ 2009-10 ರಲ್ಲಿ ಉತ್ತರ ಕರ್ನಾಟಕ ವೇದಿಕೆ ರಚನೆ ಮಾಡಲಾಯಿತು.

ಮೂಲ ಉದ್ದೇಶ: ಉತ್ತರ ಕರ್ನಾಟಕ ಜಿಲ್ಲೆಗಳ ಆರೋಗ್ಯ ಸಮಸ್ಯೆಗಳ ಅನುಗುಣವಾಗಿ ಹೆಚ್ಚಿನ ಒತ್ತು ಕೊಟ್ಟು, ವಿವಿಧ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಪ್ರಗತಿಪರ ಸಂಘ/ಸಂಸ್ಥೆಗಳು, ಕಾರ್ಯಕರ್ತರಿಗೆ ಆರೋಗ್ಯದ ಹಕ್ಕುಗಳ ಬಗ್ಗೆ ಕೌಶಲ್ಯ ಅಭಿವೃದ್ಧಿಪಡಿಸುವುದು, ಆರೋಗ್ಯ ಸೇವೆ/ಸೌಲಭ್ಯಗಳ ನಿರಾಕರಣೆಗಳ ಬಗ್ಗೆ ಸತ್ಯಶೋಧನೆ ಮಾಡಿ, ವರದಿ ಸಿದ್ಧಪಡಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ, ತನಿಖಾ ಸಂಸ್ಥೆಗಳಿಗೆ ಸಲ್ಲಿಸುವುದರ ಮೂಲಕ ಸಂಬಂಧಪಟ್ಟ ಆರೋಗ್ಯ ಇಲಾಖೆಯ ಹೊಣೆಗಾರಿಕೆ ಹೆಚ್ಚಿಸುವುದು ಹಾಗೂ ಸಾರ್ವಜನಿಕರು, ವಿಶೇಷವಾಗಿ ದಲಿತರು, ಬಡವರು, ಹಿಂದುಳಿದ ಸಮುದಾಯಗಳು, ಅಲ್ಪಸಂಖ್ಯಾತರು, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವುದರ ಮೂಲಕ ಆರೋಗ್ಯ ವ್ಯವಸ್ಥೆಯಲ್ಲಿ "ಸಮುದಾಯೀಕರಣ" ದ ಪ್ರಕ್ರಿಯೆಗೆ ಮುನ್ನಡೆ ನೀಡುವುದು.

ಚಟುವಟಿಕೆಗಳು: ಈ ಹಿನ್ನೆಲೆಯಲ್ಲಿ 2010 ರಲ್ಲಿ 5 ಜಿಲ್ಲೆಗಳಾದ ಬಳ್ಳಾರಿ, ಬಾಗಲಕೋಟೆ, ಬೆಳಗಾವಿ, ಹಾವೇರಿ, ರಾಯಚೂರು ಜಿಲ್ಲೆಗಳಲ್ಲಿ ವಿವಿಧ ಕಾರ್ಯಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಮುಖ್ಯವಾಗಿ ಜಿಲ್ಲಾ ಮಟ್ಟದಲ್ಲಿ ವಿವಿಧ ಸಂಘ/ಸಂಸ್ಥೆಗಳನ್ನು ಒಂದು ವೇದಿಕೆ ಅಡಿಯಲ್ಲಿ ಸೇರಿಸಿ, ಅವರಿಗೆ ಕೌಶಲ್ಯ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ನಿರಂತರವಾದ ಸಭೆ/ಚರ್ಚೆಗಳು, ತರಬೇತಿಗಳನ್ನು ನಡೆಸಲಾಯಿತು. ನಿರ್ದಿಷ್ಟವಾದ ತರಬೇತಿ ಹಾಗೂ ಸಭೆಗಳು ನಡೆದ ನಂತರ ಸ್ಥಳೀಯ ಮುಖಂಡರ ಅಭಿಮತದಂತೆ ಜಿಲ್ಲಾ ಮಟ್ಟದಲ್ಲಿ ಜನಾರೋಗ್ಯ ಜನಸಂವಾದಗಳನ್ನು ಆಯೋಜಿಸಲಾಗಿತ್ತು. ಈ ಸಂವಾದದಲ್ಲಿ ಜಿಲ್ಲೆಯ ಆರೋಗ್ಯ, ಆಹಾರ, ನೀರು, ಮಹಿಳೆ-ಮಕ್ಕಳ ಸಂಬಂಧ ಅನೇಕ ಸಮಸ್ಯೆಗಳನ್ನು ಸಾರ್ವಜನಿಕವಾಗಿ ಸಂಬಂಧಪಟ್ಟ ಅಧಿಕಾರಿಗಳ ಸಮ್ಮುಖದಲ್ಲಿ ಸುಧೀರ್ಘ ಚರ್ಚೆ ನಡೆಸಲಾಯಿತು. ಅದೇ ಸಂಧರ್ಭದಲ್ಲಿ ನಿರ್ದಿಷ್ಟ ಸಮಸ್ಯೆಗಳ ಬಗ್ಗೆ ಜಿಲ್ಲಾಡಳಿತ, ರಾಜ್ಯ ಮಟ್ಟದ ಉನ್ನತ ಅಧಿಕಾರಿಗಳಿಗೆ ಬೇಡಿಕೆಗಳನ್ನು ಸಲ್ಲಿಸಲಾಗಿತ್ತು.

ತಿರುಳು ಗುಂಪಿನ ಸಭೆ: ಅವುಗಳಲ್ಲಿನ ಬದಲಾವಣೆಗಳು, ಪರಿಣಾಮ-ಸಾಧನೆಗಳ ಪುನರಾವಲೋಕನ ನಡೆಸುವ ಉದ್ದೇಶದಿಂದ ದಿನಾಂಕ 11-02-2011 ರಂದು ಉತ್ತರ ಕರ್ನಾಟಕ ವೇದಿಕೆಯ ಸಭೆಯನ್ನು ಕರೆಯಲಾಗಿತ್ತು. ಸಭೆಯು ಜನಶಿಕ್ಷಣ ಸಂಸ್ಥಾನ ಕಛೇರಿಯಲ್ಲಿ ಬೆಳಿಗ್ಗೆ 10.30 ರಿಂದ ಸಂಜೆ 4.00 ಗಂಟೆಯವರೆಗೆ ನಡೆಯಿತು.

ಸಭೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ಕೆಳಕಂಡಂತಿವೆ. ಕರಿಬಸಪ್ಪ (ನಿರ್ಮಾಣ ಸಂಸ್ಥೆ), ಹಾವೇರಿ- ಜನಾರೋಗ್ಯ ಆಂದೋಲನ ಉತ್ತರ ಕರ್ನಾಟಕ ವೇದಿಕೆ ಸಹ ಸಂಚಾಲಕರು. ಸ್ವರ್ಣ ಭಟ್ (ಹೆಡ್ ಸ್ಟ್ರೀಮ್ಸ್ ಸಂಸ್ಥೆ),ಬಾಗಲಕೋಟೆ. ಶಿವರಾಮರೆಡ್ಡಿ (ರೂವಾರಿ ಸಂಸ್ಥೆ)ರಾಯಚೂರು. ಅಶೋಕ್ ಹಿರೇಕೆರೂರು ಮತ್ತು ಯಲ್ಲಪ್ಪ, (ಜಾಗೃತಿ ಸಂಸ್ಥೆ)ಬೆಳಗಾವಿ. ಮಂಜುಳಾ (ದಲಿತ ಫೌಂಡೇಶನ್) ಮತ್ತು ಮಲ್ಲಿಕಾರ್ಜುನ (ಪುಣ್ಯಕೋಟಿ ಫೌಂಡೇಶನ್)ಬಳ್ಳಾರಿ. ಮಲ್ಲಿಕಾರ್ಜುನ ಪತ್ತಾರ್, ಗದಗ. ಹನುಮಂತಪ್ಪ, ಮಂಜುನಾಥ ಮತ್ತು ಸುಧಾ, ದಾವಣಗೆರೆ. ಪ್ರಹ್ಲಾದ್, CHC, ಬೆಂಗಳೂರು ಮತ್ತು ಓಬಳೇಶ್,JAAK, ಕಾರ್ಯಾಲಯ ಬೆಂಗಳೂರು.

ಈ ಸಭೆಯಲ್ಲಿ 5 ಜಿಲ್ಲೆಗಳ ಸಾಧನೆಗಳು ಹಾಗೂ ಪರಿಣಾಮಗಳನ್ನು ಕ್ರೂಡೀಕರಿಸಿ ಅವಲೋಕಿಸಲಾಯಿತು.

- ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ವಚ್ಛತೆ, ವಾತಾವರಣ ಶೌಚಾಲಯಗಳ ಶುದ್ಧಿ ಆಗಿದೆ.
- ಆರೋಗ್ಯ ಸೌಲಭ್ಯಗಳಾದ ಜನನಿ ಸುರಕ್ಷ, ಮಡಿಲು, ಪ್ರಸೂತಿ ಆರೈಕೆಯಂತಹ ವಿವಿಧ ಸೌಲಭ್ಯಗಳ ವಿತರಣೆಯಲ್ಲಿ ಬದಲಾವಣೆ ಕಂಡಿದೆ.
- ಸಂಬಂಧಪಟ್ಟ ಅಧಿಕಾರಿಗಳ ಜನಾರೋಗ್ಯ ಆಂದೋಲನ ಕಾರ್ಯಕರ್ತರನ್ನು ವಿಶೇಷವಾಗಿ ಗುರುತಿಸುವಂತಹ ಪ್ರಕ್ರಿಯೆ ನಡೆಯುತ್ತಿದೆ.
- ಸುಮಾರು 5–6 ನಿಷ್ಕ್ರಿಯಗೊಂಡಿದ್ದ ಆರೋಗ್ಯ ಉಪಕೇಂದ್ರಗಳು ಜನರ ಸೇವೆಗೆ ತೆರೆದಿವೆ.
- ಸುಮಾರು 10–12 PHC ಗಳಲ್ಲಿ ವೈದ್ಯರ ಮತ್ತು ಮಹಿಳಾ ವೈದ್ಯರ ನೇಮಕ ನಡೆದಿದೆ.

ಎಲ್ಲಾ 5 ಜಿಲ್ಲೆಗಳಲ್ಲಿ ನಮ್ಮ ಕಾರ್ಯಾಚರಣೆ ನಡೆಸಿರುವ ಗ್ರಾಮಗಳಲ್ಲಿ ಆರೋಗ್ಯ ಸೇವೆಗಳ ಬಗ್ಗೆ ಸಾರ್ವಜನಿಕರು ಮುಕ್ತವಾಗಿ ಚರ್ಚಿಸುತ್ತಿದ್ದಾರೆ. ಸಂಬಂಧಪಟ್ಟ ASHA, ANM ಗಳನ್ನು ಸಂಪರ್ಕಿಸುತ್ತಿದ್ದಾರೆ.

- PHC ಗಳಲ್ಲಿ ಮರು ಉತ್ತರ ಪತ್ರಗಳು (Feed back forms) ಜನರ ಕೈಗೆ ಸಿಗುವಂತೆ ಕ್ರಮ ಕೈಗೊಳ್ಳಲಾಗಿದೆ.
- ಔಷಧಿಗಳ ವಿತರಣೆಯಲ್ಲಿ ಅಲ್ಪ ಸುಧಾರಣೆ ಕಂಡಿದೆ.
- ಜಿಲ್ಲೆಯ ಕಾರ್ಯಕರ್ತರು ನಿರಂತರವಾಗಿ RTI ಬಳಕೆಯಂತಹ ಕಾನೂನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ.
- ಸರ್ಕಾರಿ ತನಿಖಾ ಸಂಸ್ಥೆಗಳಾದ ಲೋಕಾಯುಕ್ತ, ರಾಜ್ಯ ಮಾನವ ಹಕ್ಕು ಆಯೋಗಗಳೊಂದಿಗೆ ಸಂಧರ್ಭಕ್ಕನುಸಾರವಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ.

- ಬಹುತೇಕ ಎಲ್ಲಾ PHC ಗಳಲ್ಲಿ ನಾಗರೀಕ ಸನ್ನದು ನಂತಹ ವಿವಿಧ ಮಾಹಿತಿ ಫಲಕಗಳನ್ನು ಹಾಕಲಾಗಿದೆ.
- ಸುಮಾರು 500 ಜನ ಕಾರ್ಯಕರ್ತರಿಗೆ ಆರೋಗ್ಯ, ಸೇವೆ, ಸೌಲಭ್ಯ ವ್ಯವಸ್ಥೆ, NRHM, ನ ಬಗ್ಗೆ ಸ್ವಲ್ಪವಾದ ಅರಿವು / ಜಾಗೃತಿ ಮೂಡಿದೆ (ಇದರಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು, ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ ಸದಸ್ಯರು, 'ಆಶಾ' ಗಳು ಒಳಗೊಂಡಿದ್ದಾರೆ)
- 5 ಜಿಲ್ಲೆಗಳಲ್ಲಿ ಜಿಲ್ಲಾ ಸಮಿತಿ ಸಭೆಗಳು ನಿರಂತರವಾಗಿ ತಿಂಗಳಿಗೊಮ್ಮೆ ನಡೆಯುತ್ತಿವೆ.
- ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಮಾಧ್ಯಮಗಳು ನಮ್ಮ ಚಟುವಟಿಕೆಗಳಿಗೆ ಉತ್ತಮವಾದ ಸ್ಪಂದನೆ ನೀಡಿ ಬೆಂಬಲಿಸುತ್ತಿದ್ದಾರೆ,

ಈ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಮುಖ್ಯಾಂಶಗಳು:

- ರಾಜ್ಯ ಮಟ್ಟದಲ್ಲಿ ನಡೆಸಲು ಉದ್ದೇಶೀಸಿರುವ **"ಆರೋಗ್ಯ ಸಮುದಾಯೀಕರಣ"** ಕಾರ್ಯಗಾರ,
- ಜನಾರೋಗ್ಯ ಆಂದೋಲನ–ಕರ್ನಾಟಕವು ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ಜೊತೆ ಸೇರಿ ಕಾರ್ಯತಂತ್ರ ರೂಪಿಸುವ ಅಗತ್ಯತೆ.
- ದಿನಾಂಕ:– 19.02.2011 ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಯಲಿರುವ ಜಿಲ್ಲಾ ಮಟ್ಟದ ಸಭೆ ಮತ್ತು ಆ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ.
- ದಿನಾಂಕ:– 20.02.2011 ರಂದು ದಾವಣಗೆರೆಯಲ್ಲಿ ನಡೆಯಲಿರುವ ಗ್ರಾಮ ಪಂಚಾಯತ್ ಸದಸ್ಯರ ಒಂದು ದಿನದ ಕಾರ್ಯಗಾರದ ಬಗ್ಗೆ
- 2011–12 ರಲ್ಲಿ ಜನಾರೋಗ್ಯ ಆಂದೋಲನ–ಕರ್ನಾಟಕ ನಡೆಸಲು ಉದ್ದೇಶಿಸಿರುವ ಕ್ರಿಯಯೋಜನೆಯ ಬಗ್ಗೆ ಚರ್ಚಿಸಲಾಯಿತು.
- ಬಾಗಲಕೋಟೆ ಜಿಲ್ಲೆಯಲ್ಲಿ 50 ಉಪಕೇಂದ್ರಗಳ ಸಮೀಕ್ಷೆ ನಡೆಸುವುದೆಂದು ತೀರ್ಮಾನಿಸಲಾಯಿತು.
- ಬಳ್ಳಾರಿ ಜಿಲ್ಲೆಯಲ್ಲಿ "ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ" ಗಳಿಗೆ ಪುಣ್ಯಕೋಟಿ ಫೌಂಡೇಶನ್ ಜೊತೆ ಸೇರಿ ತರಬೇತಿನೀಡುವುದರ ಕುರಿತು ಚರ್ಚೆ ನಡೆಸಲಾಯಿತು.
- ಜಿಲ್ಲೆಗಳಲ್ಲಿ ಇತರೇ ಸಂಸ್ಥೆಗಳ ಜೊತೆ ಸಮನ್ವಯ ಸಾಧಿಸುವುದು ಮತ್ತು ಹೊಸ ಸಂಸ್ಥೆಗಳಿಗೆ ತರಬೇತಿ ನೀಡುವುದು.
- ಎಪ್ರೀಲ್–2011 ರಲ್ಲಿ ರಾಜ್ಯ ಮಟ್ಟದಲ್ಲಿ 3 ದಿನಗಳ **"ಆರೋಗ್ಯ ಮತ್ತು ಮಾನವ ಹಕ್ಕು"** ತರಬೇತಿ ನಡೆಸಲು ಉದ್ದೇಶಿಸಿದ್ದು ಇದರ ಬಗ್ಗೆ ಚರ್ಚೆ ನಡೆಸಲಾಯಿತು.
- ಜಿಲ್ಲಾ ಮಟ್ಟದಲ್ಲಿ ಸಾಂಸ್ಕೃತಿಕ ತಂಡ ಕಟ್ಟುವ ಕುರಿತಾದ ವಿಷಯಗಳ ಬಗ್ಗೆ ಚರ್ಚೆ ನಡೆಸಲಾಯಿತು.
- ಸಮಿತಿಯ ತೀರ್ಮಾನದಂತೆ "ಉತ್ತರ ಕರ್ನಾಟಕ ವೇದಿಕೆಯ ತಿರುಳು ಗುಂಪು" ಸಭೆಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ನಡೆಸಲು ಅನುಮೋದಿಸಲಾಯಿತು.
- ಮೇ, 2011 ರ ಮಾಹೆಯಲ್ಲಿ ಗದಗ ಜಿಲ್ಲೆಯಲ್ಲಿ ಉತ್ತರ ಕರ್ನಾಟಕ ವೇದಿಕೆಯ ಸಭೆ ನಡೆಸಲು ತೀರ್ಮಾನ ನಡೆಸಲಾಯಿತು.

ಜನಾರೋಗ್ಯ ಆಂದೋಲನ–ಕರ್ನಾಟಕ ರಾಜ್ಯ ಮಟ್ಟದ ತಿರುಳು ಗುಂಪು ಸಭೆ

ದಿನಾಂಕ:– 22.02.2011 ರಂದು ರಾಜ್ಯ ಮಟ್ಟದ ಜನಾರೋಗ್ಯ ಆಂದೋಲನ–ಕರ್ನಾಟಕದ ತಿರುಳು ಗುಂಪು ಸಭೆಯನ್ನು ಸಮುದಾಯ ಆರೋಗ್ಯ ಕೋಶ ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯನ್ನು ಡಾ॥ ಪ್ರಕಾಶ್ ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಸಭೆಗೆ ತಿರುಳು ಗುಂಪಿನ ಸದಸ್ಯರ ಜೊತೆ ಇತರೇ ಆಹ್ವಾನಿತರು ಸೇರಿ ಸುಮಾರು 17 ಜನ ಕಾರ್ಯಕರ್ತರು ಭಾಗವಹಿಸಿದ್ದರು. ಜನಾರೋಗ್ಯ ಆಂದೋಲನ–ಕರ್ನಾಟಕ ಉತ್ತರ ಕರ್ನಾಟಕ ವೇದಿಕೆಯಿಂದ ಡಾ:ಗೋಪಾಲ್ ದಾಬಡೆ, ಸ್ವರ್ಣಭಟ್ ಮತ್ತು ಕರಿಬಸಪ್ಪ ಉಪಸ್ಥಿತರಿದ್ದರು. ಈ ಸಭೆಯಲ್ಲಿ ಮುಖ್ಯವಾಗಿ ಚರ್ಚೆ ನಡೆಸಿದ ವಿಷಯಗಳೆಂದರೆ

- ಕಳೆದ 2007 ರಿಂದ ಜಿಲ್ಲೆಗಳಲ್ಲಿ ನಡೆಯುತ್ತಿರುವ ಜನಾರೋಗ್ಯ ಆಂದೋಲನ–ಕರ್ನಾಟಕದ ಚಟುವಟಿಕೆಗಳಾದ ಜಿಲ್ಲೆಗಳಲ್ಲಿ ನಡೆದ ಜನತಾ ನ್ಯಾಯಾಲಯ ಮತ್ತು ನಂತರ ಅನುಸರಣೆ ಕಾರ್ಯಕ್ರಮಗಳು.
- ಜನಾರೋಗ್ಯ ಆಂದೋಲನ–ಕರ್ನಾಟಕದ ಉತ್ತರ ಕರ್ನಾಟಕ ವೇದಿಕೆಯ ಕಾರ್ಯಚಟುವಟಿಕೆಗಳು.
- ಜಿಲ್ಲಾ ಮಟ್ಟದ ಜನಾರೋಗ್ಯ ಆಂದೋಲನ–ಕರ್ನಾಟಕ ಹತ್ತು ವರ್ಷಗಳ ಸಾಧನೆಯ ಕುರಿತು ಪುನರಾವಲೋಕನ ನಡೆಸುವ ಬಗ್ಗೆ.
- ಜನಾರೋಗ್ಯ ಆಂದೋಲನ–ಕರ್ನಾಟಕ ಸುದ್ದಿ ಪತ್ರಿಕೆಯ ಸಂಪಾದಕೀಯ ಮಂಡಳಿ ಮತ್ತು ಮುಂದಿನ ಸಂಚಿಕೆಗಳ ಬಗ್ಗೆ ಚರ್ಚೆ.
- ಇತರೇ ಸಂಘಟನೆಗಳೊಡನೆ ಜನಾರೋಗ್ಯ ಆಂದೋಲನ–ಕರ್ನಾಟಕದ ಸಂಬಂಧವನ್ನು ಬಲಗೊಳಿಸುವ ಬಗ್ಗೆ.
- **"ಸಾರ್ವಜನಿಕ ಆರೋಗ್ಯ ಕಾಯ್ದೆ"** ಮತ್ತು ನೋವಾರ್ಟೀಸ್–ಚಳುವಳಿಯ ಜನಾರೋಗ್ಯ ಆಂದೋಲನ–ಕರ್ನಾಟಕದ ನಿಲುವು.
- ಜನಾರೋಗ್ಯ ಆಂದೋಲನ–ಕರ್ನಾಟಕ ನಡೆಸಿಕೊಂಡು ಹೋಗಲು ಮುಂದಿನ ಕಾರ್ಯತಂತ್ರ ಇತ್ಯಾದಿ.

ಸಭೆಯಲ್ಲಿ ಚರ್ಚಿಸಿದ ಕೆಲವೊಂದು ವಿಷಯಗಳು ಮತ್ತು ತೆಗೆದುಕೊಂಡ ತೀರ್ಮಾನಗಳು:

❖ **ಮಾನಸಿಕ ಆರೋಗ್ಯ ವಿಷಯದ ಬಗ್ಗೆ ಜನಾರೋಗ್ಯ ಆಂದೋಲನ–ಕರ್ನಾಟಕದ ಚಟುವಟಿಕೆ:** ಜನಾರೋಗ್ಯ ಆಂದೋಲನ–ಕರ್ನಾಟಕದ ಜೊತೆ ಸೇರಿ ಡಾ.ಅಜಯ್ ಕುಮಾರ್, (ಪುಣ್ಯಕೋಟಿ ಫೌಂಡೇಶನ್) ಹೊಸಪೇಟೆ ರವರು ಆಯೋಜಿಸುವ ಆರೋಗ್ಯ ಸಂಬಂಧಿತ ಕಾರ್ಯಾಗಾರಗಳಿಗೆ ಜಿಲ್ಲಾ ಮಟ್ಟದ ಕಾರ್ಯಕರ್ತರು ಭಾಗವಹಿಸುವಂತೆ ತಿಳಿಸಿಲಾಯಿತು.

❖ **10 ವರ್ಷಗಳ ಜನಾರೋಗ್ಯ ಆಂದೋಲನ–ಕರ್ನಾಟಕದ ಪುನರಾವಲೋಕನ:** ಜನಾರೋಗ್ಯ ಆಂದೋಲನ–ಕರ್ನಾಟಕದ 10 ವರ್ಷಗಳ ಪುನರ್‌ಮನನದ ಪುನರಾವಲೋಕನದ ಬಗ್ಗೆ ಚರ್ಚೆ ನಡೆಸಲಾಯಿತು. ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರ ಮಟ್ಟದಲ್ಲಿ, ಅಂದೋಲನದ 10 ವರ್ಷಗಳ ಕಾರ್ಯಚಟುವಟಿಕೆಗಳ ಹಿನ್ನೆಲೆಯಲ್ಲಿ, ಈ ಪುನರಾವಲೋಕನವನ್ನು ಕೈಗೊಂಡಿದ್ದು, (PANS- Participatory Assessment for Network Strengthening: ಕಾರ್ಯಜಾಲದ ಬಲವರ್ಧನೆಗೆ ಸಹಭಾಗಿತ್ವದ ಮೌಲ್ಯಮಾಪನ), ಜನಾರೋಗ್ಯ ಆಂದೋಲನವು ಡಾ.ಪ್ರಕಾಶ್ ರಾವ್, ಆಶಾ ಕಿಲಾರು, ಇ.ಪ್ರೇಮ್‌ದಾಸ್, ಡಾ.ಅಖಿಲಾ ವಾಸನ್‌ರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಈ ಕೆಲಸವನ್ನು ಮುಂದುವರೆಸಬೇಕೆಂಬ ಠರಾವು ಮಂಜೂರಾಯಿತು. ಡಾ.ಪ್ರಕಾಶ್‌ರಾವ್‌ಅವರು ಈ ಕಾರ್ಯತಂಡದ ಜವಾಬ್ದಾರಿಯನ್ನು ವಹಿಸಿಕೊಂಡು ಪುನರಾವಲೋಕನ ಪ್ರಕ್ರಿಯೆಯನ್ನು ಮುಂದುವರೆಸಲು ಜವಾಬ್ದಾರಿವಹಿಸಿಕೊಂಡರು.

❖ **ಜನಾರೋಗ್ಯ ಆಂದೋಲನ–ಕರ್ನಾಟಕದ ಸುದ್ದಿ ಪತ್ರ**

i. ಜನಾರೋಗ್ಯ ಆಂದೋಲನ–ಕರ್ನಾಟಕದ ಪತ್ರಿಕೆಯ ಸಂಪಾದಕೀಯ ಮಂಡಳಿಗೆ ಹಾಲಿ (ಆಗಸ್ಟ್–2010) ಇರುವ ಸಮಿತಿಯನ್ನು ಪುನರ್‌ರಚಿಸಲಾಯಿತು. ಸಮಿತಿಯ ಸದಸ್ಯರುಗಳು:

ಡಾ. ಪ್ರಕಾಶ್‌ರಾವ್, ಡಾ.ಗೋಪಾಲ ದಾಬಡೆ,
ಕೆ.ಬಿ.ಓಬಳೇಶ್, ಇ.ಪ್ರೇಮ್‌ದಾಸ್,
ಡಾ.ಅಖಿಲಾವಾಸನ್, ಪ್ರಭಾ ನಾರಾಯಣಪ್ಪ,
ಸ್ವರ್ಣಭಟ್, ಎಂ.ಕರಿಬಸಪ್ಪ,
ಮತ್ತು ಐ.ಎಂ.ಪ್ರಹ್ಲಾದ್

ಡಾ.ಮನೀಶ್ ಮತ್ತು ಆಶಾಕಿಲಾರುರವರಿಗೆ ಸಮುದಾಯ ಆರೋಗ್ಯ ಕೋಶ ಸಂಯೋಜನೆಯಲ್ಲಿ ವರ್ಷಕ್ಕೆ ಎರಡು ಆರೋಗ್ಯ ಸುದ್ದಿಪತ್ರಗಳನ್ನು ಇಂಗ್ಲಿಷ್ ಭಾಷೆ (E-news) ಯಲ್ಲಿ ಪ್ರಕಟಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಲಾಗಿದೆ ಮಾರ್ಚ್–2011 ರ ಪತ್ರಿಕೆಯನ್ನು ಸಮುದಾಯ ಆರೋಗ್ಯ ಕೋಶ, ಜೂನ್–2011ರ ಪತ್ರಿಕೆಯನ್ನು ಡಿ.ಎ.ಎಫ್.ಕೆ, ಸೆಪ್ಟಂಬರ್–2011 ರ ಪತ್ರಿಕೆಯನ್ನು, ಬಿ.ಜಿ.ವಿ.ಎಸ್ ಮತ್ತು ಡಿಸೆಂಬರ್–2011ರ ಪತ್ರಿಕೆಯನ್ನು ಹೆಡ್‌ಸ್ಟ್ರೀಮ್ಸ್ ಸಂಸ್ಥೆಗಳು ಮುದ್ರಣಕ್ಕೆ ಜವಾಬ್ದಾರಿ ವಹಿಸಿ ಕೊಂಡವು.

ii. 2011 ರ ವರ್ಷದಲ್ಲಿ ಸುದ್ದಿ ಪತ್ರಿಕೆಯ ಪ್ರಕಾಶನಕ್ಕೆ ಜವಾಬ್ದಾರಿಗಳನ್ನು ಸದಸ್ಯರು ಹಂಚಿಕೊಂಡರು.

iii. ಜೊತೆ 2 ವಾರ್ಷಿಕ ಸಂಪುಟಗಳನ್ನು ಪತ್ರಿಕೆಗಳನ್ನು ಆಂಗ್ಲ ಭಾಷೆಯಲ್ಲಿ ಹೊರತರಲು ತೀರ್ಮಾನಿಸಲಾಯಿತು. ಮುಖ್ಯವಾಗಿ ಇದರ ಜವಾಬ್ದಾರಿಯನ್ನು ಡಾ॥ಮನೀಷ್ ರವರು ತೆಗೆದುಕೊಂಡರು.

ಉತ್ತರ ಕರ್ನಾಟಕ ವೇದಿಕೆ

❖ ಜನಾರೋಗ್ಯ ಆಂದೋಲನ–ಕರ್ನಾಟಕದ ಉತ್ತರ ಕರ್ನಾಟಕ ವೇದಿಕೆ ಬಗ್ಗೆ ಚರ್ಚೆ ನಡೆಸಲಾಯಿತು ಪ್ರಾರಂಭದಿಂದ ನಡೆಸಿರುವ ಕಾರ್ಯಚಟುವಟಿಕೆಯನ್ನು ಕರಿಬಸಪ್ಪರವರು ಹಂಚಿಕೊಂಡರು ಮತ್ತು ಶ್ರೀಮತಿ.ಸ್ವರ್ಣಭಟ್, ಶ್ರೀ.ಎಂ.ಕರಿಬಸಪ್ಪ ಅವರನ್ನು ಉತ್ತರ ಕರ್ನಾಟಕ ವೇದಿಕೆಯ ಸಹ–ಸಂಚಾಲಕರನ್ನಾಗಿ ಮತ್ತು ಡಾ॥ಗೋಪಾಲದಾಬಡೆ ಅವರು ಸಲಹೆಗಾರರನ್ನಾಗಿ ಸರ್ವಾನುಮತದ ಅನುಮೋದನೆ ಸಿಕ್ಕಿತು. ಉತ್ತರ ಕರ್ನಾಟಕ ವೇದಿಕೆಯಡಿಯಲ್ಲಿ ನಡೆದ ಚಟುವಟಿಕೆಗಳು ಮತ್ತು ವ್ಯವಸ್ಥಿತ ಸಭೆಗಳನ್ನು ಎಲ್ಲಾ ಸದಸ್ಯರು ಪ್ರಶಂಸಿದರು.

ಜನಾರೋಗ್ಯ ಆಂದೋಲನ–ಕರ್ನಾಟಕದ ರಾಜ್ಯ ಸಂಯೋಜನಾ ಸಮಿತಿಯನ್ನು ಬಲಗೊಳಿಸುವ ಬಗ್ಗೆ.

i.ರಾಜ್ಯ ಸಂಯೋಜನಾ ಸಮಿತಿಯಲ್ಲಿ ಈಗಾಗಲೇ 20 ಜನ ಸದಸ್ಯ ಸಂಸ್ಥೆಗಳಿದ್ದು ಕೆಲವು ಸಂಸ್ಥೆಗಳು ಜನಾರೋಗ್ಯ ಆಂದೋಲನ–ಕರ್ನಾಟಕದ ಪ್ರಕ್ರಿಯೆಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸದೇ ಇರುವ ಬಗ್ಗೆ ಚರ್ಚೆ ನಡೆಸಲಾಯಿತು ಮತ್ತು ಡಾ॥ಪ್ರಕಾಶ್‌ರಾವ್‌ರವರು ಸಂಬಂಧಪಟ್ಟ ಸಂಸ್ಥೆಗಳಿಗೆ ಪತ್ರ ಬರೆಯಬೇಕೆಂದು ಅಭಿಪ್ರಾಯಪಟ್ಟರು. ಕೆಲವು ಸಮಿತಿ ಸದಸ್ಯರುಗಳು ಈ ಸಂಸ್ಥೆಗಳನ್ನು ದೂರವಾಣಿ ಮುಖಾಂತರ ಸಂಪರ್ಕಿಸಲು ಜವಾಬ್ದಾರಿಗಳನ್ನು ಹಂಚಿಕೊಂಡರು.

ii. ರಾಜ್ಯ ಸಂಯೋಜನಾ ಸಮಿತಿಯಲ್ಲಿ ಜಿಲ್ಲೆಗಳ ಜನಾರೋಗ್ಯ ಆಂದೋಲನ–ಕರ್ನಾಟಕ ಸಮಿತಿಗಳನ್ನು ಸೇರಿಸಲು ಅನುಮೋದನೆ ನೀಡಲಾಯಿತು.

iii. ಉತ್ತರ ಕರ್ನಾಟಕ ವೇದಿಕೆಯು ಅಧಿಕೃತವಾಗಿ ಪ್ರತಿನಿಧಿಸುವಂತೆ ತೀರ್ಮಾನ ತೆಗೆದುಕೊಳ್ಳಲಾಯಿತು.

iv. ಜನಾರೋಗ್ಯ ಆಂದೋಲನ–ಕರ್ನಾಟಕದ ಎಲ್ಲಾ ಜಿಲ್ಲಾ ಸಮಿತಿಗಳು ಮತ್ತು ಉತ್ತರ ಕರ್ನಾಟಕ ವಿಭಾಗದ ಸಮಿತಿಯ ಸದಸ್ಯರುಗಳ ವಿವರಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿ ಕೊಡುವಂತೆ ಸೂಚನೆ ನೀಡಲಾಯಿತು.

ರಾಜ್ಯ ಸಂಯೋಜನಾ ಸಮಿತಿ ಮತ್ತು ತಿರುಳು ಗುಂಪಿನ ಸಭೆಗಳು

i.ಪ್ರತಿ ಮೂರು ತಿಂಗಳಿಗೊಮ್ಮೆ ತಿರುಳು ಗುಂಪು ಸಭೆ ಮತ್ತು ವರ್ಷಕ್ಕೆ ಎರಡು ಸಾರಿ ರಾಜ್ಯ ಸಂಯೋಜನಾ ಸಮಿತಿ ಸಭೆ ನಡೆಸಲು ತೀರ್ಮಾನ ಮಾಡಲಾಯಿತು.

ii. ಮುಂದಿನ ರಾಜ್ಯ ಮಟ್ಟದ ತಿರುಳು ಗುಂಪು ಸಭೆಯನ್ನು 16 ಏಪ್ರೀಲ್ 2011 ರಂದು ಐ.ಐ.ಎಸ್.ಸಿ (Indian Institute of Social Science) ಯ ಬಿ.ಜಿ.ವಿ.ಎಸ್ ಕಾರ್ಯಾಲಯದಲ್ಲಿ ನಡೆಸಲು ತೀರ್ಮಾನ ನಡೆಸಲಾಯಿತು.

ರಾಜ್ಯದ ವಿವಿಧ ಪ್ರಗತಿಪರ ಸಂಘಟನೆ/ಸಂಸ್ಥೆಗಳೊಂದಿಗೆ ಸಹಕಾರ ಮತ್ತು ಬೆಂಬಲ

I.ಸಂಘಟನೆಗಳಾದ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ(GCKS) ಆಹಾರದ ಹಕ್ಕಿಗಾಗಿ ಆಂದೋಲನ (RFC) ಮತ್ತು ಇತರೇ ಸಂಘಟನೆಗಳೊಡನೆ ಸೇರಿ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಜನಾರೋಗ್ಯ ಆಂದೋಲನ–ಕರ್ನಾಟಕವನ್ನು ಗಟ್ಟಿಗೊಳಿಸಲು ತೀರ್ಮಾನಿಸಲಾಯಿತು.

ಸಾರ್ವಜನಿಕ ಆರೋಗ್ಯ ಮಸೂದೆ:

I. **"ಸಾರ್ವಜನಿಕ ಆರೋಗ್ಯ ಕಾಯ್ದೆ"** ಯ ಬಗ್ಗೆ ಚರ್ಚೆ ನಡೆಸಿದ್ದು ಡಾ॥ಗೋಪಾಲ ದಾಬಡೆ ಅವರು ಧಾರವಾಡದಲ್ಲಿ ನಡೆದ ಸಭೆ ಮತ್ತು ಶ್ರೀಮತಿ.ಸ್ವರ್ಣಭಟ್ ರವರು ಬಾಗಲಕೋಟೆಯಲ್ಲಿ ನಡೆದ ಸಭೆಯ ಬಗ್ಗೆ ವಿವರ ನೀಡಿದರು. ಈ ಮಸೂದೆಯ ಕನ್ನಡ ಸಾರಾಂಶ ತಯಾರಾಗಿದ್ದು, JAAK ಕಾರ್ಯಾಲಯದಿಂದ ಪಡೆಯಬಹುದೆಂದು ತಿಳಿಸಲಾಯಿತು.

ii. **"ಸಾರ್ವಜನಿಕ ಆರೋಗ್ಯ ಕಾಯ್ದೆ"** ಯ ಕರುಡು ಪ್ರತಿಯಲ್ಲಿ ಇರುವ ನ್ಯೂನತೆಗಳ ಬಗ್ಗೆ ಕೆ.ಹೆಚ್.ಎಸ್.ಆರ್.ಡಿ.ಪಿ ಯ ನಿರ್ದೇಶಕರಾದ ಶ್ರೀ.ಸೆಲ್ವಕುಮಾರ ಮತ್ತು ಕೆ.ಐ.ಎಲ್.ಪಿ.ಎ.ಆರ್ ನ ಮುಖ್ಯಸ್ಥರಾದ ಶ್ರೀ.ದಕ್ಷಿಣಮೂರ್ತಿ ಅವರನ್ನು ಸಂಪರ್ಕಿಸಿ ಚರ್ಚಿಸಲು ತೀರ್ಮಾನಿಸಲಾಯಿತು. ಈ ಪ್ರಕ್ರಿಯೆಯನ್ನು ಶ್ರೀಮತಿ.ಆಶಾಕಿಲ್ಲಾರು ರವರು ಮುಂದುವರೆಸುವಂತೆ ಸೂಚಿಸಲಾಯಿತು.

ಇತರ ವಿಷಯಗಳು:

I."ನೋವಾರ್ಟೀಸ್ **ಚಳುವಳಿ"** ಮತ್ತು ನೀರಿನ ಹಕ್ಕಿಗಾಗಿ ಆಂದೋಲನದ ಬಗ್ಗೆ ಚರ್ಚೆ ನಡೆಸಲಾಯಿತು. ನೀರಿನ ಖಾಸಗೀಕರಣದ ವಿರುದ್ಧ ಮತ್ತು "ನೋವಾರ್ಟೀಸ್ ಮೊಕದ್ದಮೆ ಬಿಟ್ಟುಬಿಡಿ" ಎಂಬ ಎರಡೂ ಚಳುವಳಿಗೆ JAAK ಅಧಿಕೃತವಾಗಿ ಬೆಂಬಲಿಸುವುದೆಂದು ಸರ್ವಾನುಮತದಿಂದ ತೀರ್ಮಾನವನ್ನು ಮಾಡಲಾಯಿತು.

ii. ರಾಜ್ಯ ಮಟ್ಟದಲ್ಲಿ ಸಮುದಾಯೀಕರಣದ ಬಗ್ಗೆ ನಡೆಸಲು ಯೋಚಿಸಿರುವ ವಿಚಾರ ಗೋಷ್ಠಿಯ ಬಗ್ಗೆ ಮತ್ತು ರಾಜ್ಯ ಮಟ್ಟದ "ಆರೋಗ್ಯ ಮತ್ತು ಆರೋಗ್ಯದ ಹಕ್ಕಿನ" ಕಾರ್ಯಗಾರದ ಬಗ್ಗೆ ಸಹ ಚರ್ಚೆ ನಡೆಸಲಾಯಿತು.

iii. ಡಾ॥ಗೋಪಾಲ್‌ದಾಬಡೆ ಯವರು ರಾಜಸ್ಥಾನ ರಾಜ್ಯದ ಚಿತ್ತೋಡ್‌ಗಡ ಜಿಲ್ಲೆಯಲ್ಲಿ ಔಷದಿಗಳ ದರ ತಗ್ಗಿಸಲು ಅಲ್ಲಿನ ಜಿಲ್ಲಾಧಿಕಾರಿಗಳು ಜೆನೆರಿಕ್ ಔಷಧಿಗಳನ್ನು ಮಾರುವ ಔಷಧಿ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ಕೈಗೊಂಡ ಕ್ರಮದ ಬಗ್ಗೆ ಚರ್ಚೆ ನಡೆಸಿ ಅಲ್ಲಿನ ಸರಕಾರಿ ಆದೇಶದ ಪ್ರತಿಯನ್ನು ಎಲ್ಲರಿಗೂ ಹಂಚಿದರು. ಕರ್ನಾಟಕದಲ್ಲಿಯೂ ಇಂತಹ ಕಾರ್ಯಾಚರಣೆಗೆ JAAK ಬೆಂಬಲಿಸುವಂತೆ ಠರಾವು ಮಾಡಲಾಯಿತು.

iv. ಕನ್ನಡದಲ್ಲಿ ಆರೋಗ್ಯದ ಹಕ್ಕಿಗೆ ಸಂಬಂಧಪಟ್ಟ ವಿಷಯದ ಮೇಲೆ ಜನಾರೋಗ್ಯ ಆಂದೋಲನದ ಅಧ್ಯಕ್ಷರಾದ ಡಾ:ಪ್ರಕಾಶ್‌ರಾವ್ ಅವರು 3 ಪುಸ್ತಕಗಳನ್ನು ಬರೆದಿದ್ದು, ಎಲ್ಲಾ ಸದಸ್ಯರು ಅವರನ್ನು ಅಭಿನಂದಿಸಿದರು.

ಕರ್ನಾಟಕ ಸಾರ್ವಜನಿಕ ಆರೋಗ್ಯ ಮಸೂದೆ

ಭಾರತದ ಸಂವಿಧಾನದಲ್ಲಿ ಆರೋಗ್ಯದ ವಿಷಯ ರಾಜ್ಯಕ್ಕೆ ಸಂಬಂಧಪಟ್ಟ ವಿಷಯವಾಗಿದೆಯೆಂದು ರಾಜ್ಯ ಪಟ್ಟಿಯಲ್ಲಿ ಸೇರಿಸಿದ್ದಾರೆ. ಇದಕ್ಕಾಗಿ ಆಯಾ ರಾಜ್ಯದ ಸಾರ್ವಜನಿಕ ಆರೋಗ್ಯ ಕಾಯಿದೆಯನ್ನು ಮಾಡಿ, ಸಾರ್ವಜನಿಕರ ಆರೋಗ್ಯವನ್ನು ಸಂರಕ್ಷಿಸುವುದು ಮತ್ತು ವೃದ್ಧಿಗೊಳಿಸುವುದು ರಾಜ್ಯಗಳ ಜವಾಬ್ದಾರಿಯಾಗಿರುತ್ತದೆ.
ಮೈಸೂರು ಸಾರ್ವಜನಿಕ ಆರೋಗ್ಯ ಕಾಯಿದೆ, 1944 ಇನ್ನೂ ಕರ್ನಾಟಕದಲ್ಲಿ ಜಾರಿಯಲ್ಲಿದೆ. ಕರ್ನಾಟಕದಲ್ಲಿ ಆರೋಗ್ಯವು ಎಷ್ಟೊಂದು ನಿರ್ಲಕ್ಷ್ಯಕ್ಕೆ ಗುರಿಯಾಗಿದೆ ಎಂದರೆ, ಭಾರತದಲ್ಲೇ ಆರೋಗ್ಯ/ವೈದ್ಯಕೀಯ ಶಿಕ್ಷಣ, ಆರೋಗ್ಯ ವ್ಯವಸ್ಥೆ ಮುಂತಾದವುಗಳ ಖಾಸಗೀಕರಣದಲ್ಲಿ ಕರ್ನಾಟಕ ಬಹಳಷ್ಟು ಮುಂದಿದೆ. ಕರ್ನಾಟಕದಲ್ಲಿ ಎಸ್.ಎಂ.ಕೃಷ್ಣರ ಅವಧಿಯಲ್ಲಿ "ರಾಜ್ಯ ಆರೋಗ್ಯ ಕಾರ್ಯ ಪಡೆ" ಯನ್ನು ರಚಿಸಿ ಅವರ ಶಿಫಾರಸ್ಸಿನ ಪ್ರಕಾರ ರಾಜ್ಯ ಸಾರ್ವಜನಿಕ ಆರೋಗ್ಯ ಕಾಯಿದೆಯನ್ನು ಜಾರಿಗೆ ತರುವಂತೆ ಶಿಫಾರಸ್ಸನ್ನು ಕಾರ್ಯಪಡೆ ನೀಡಿತ್ತು.

2010 ನೇ ವರ್ಷದಲ್ಲಿ, 'ಕರ್ನಾಟಕ ಪ್ರೊಮೋಷನ್ ಆಫ್ ಪಬ್ಲಿಕ್ ಹೆಲ್ತ್ ಆ್ಯಂಡ್ ಪ್ರಿವೆನ್ಷನ್ ಆಫ್ ಡಿಸೀಸಸ್ ಬಿಲ್, 2010' (ಕರ್ನಾಟಕ ಸಾರ್ವಜನಿಕ ಆರೋಗ್ಯ ಕಾಯಿದೆ, 2010) ಇದರ ಕರಡು ಪ್ರತಿಯನ್ನು KILPAR ಎಂಬ ಸಂಸ್ಥೆ ರಚಿಸಿ ಸರ್ಕಾರಕ್ಕೆ ಒಪ್ಪಿಸಲಿದೆ. ಜನಾರೋಗ್ಯ ಆಂದೋಲನ ಕರ್ನಾಟಕ ಮತ್ತು ಸಾರ್ವಜನಿಕ ಆರೋಗ್ಯದ ಬಗ್ಗೆ ಚಿಂತನೆ ಮಾಡುವ ಕೆಲವೊಂದು ಸದಸ್ಯರು ಈ ಮಸೂದೆಯ ಕರಡು ಪ್ರತಿಯನ್ನು ಪಡೆದು ಇದರ ವಿಮರ್ಶೆಯನ್ನು ಸರ್ಕಾರಕ್ಕೆ ಈಗಾಗಲೇ ಒಪ್ಪಿಸಿದ್ದಾರೆ.

ಈ ಮಸೂದೆಯಲ್ಲಿ 13 ಅಧ್ಯಾಯಗಳಿವೆ. ಇದು ಒಂದು ಉತ್ತಮ ಹೆಜ್ಜೆಯಾಗಿದ್ದರೂ ಇದರಲ್ಲಿರುವ ನ್ಯೂನ್ಯತೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಲು ಜನಾರೋಗ್ಯ ಆಂದೋಲನ ಪ್ರಯತ್ನ ಪಟ್ಟಿದೆ.

ಸಕಾರಾತ್ಮಕ ವಿಷಯಗಳು:

- ಸಾರ್ವಜನಿಕ ಆರೋಗ್ಯ ಯೋಜನೆ
- ಸಾರ್ವಜನಿಕ ಆರೋಗ್ಯದ ಗುಣಮಟ್ಟ ಮತ್ತು ಮಾನದಂಡಗಳು
- ಸಾರ್ವಜನಿಕ ಆರೋಗ್ಯ 'ಏಜೆನ್ಸಿ'

ನ್ಯೂನ್ಯತೆಗಳು:

- ಈ ಮಸೂದೆಯು ಆರೋಗ್ಯದ ಹಕ್ಕಿನ ಬಗ್ಗೆ ಅಥವಾ ಸಾಮಾಜಿಕ ನಿರ್ಧಾರಕಗಳ ಬಗ್ಗೆ ಉಲ್ಲೇಖ ಮಾಡುವುದಿಲ್ಲ.
- ಖಾಸಗೀ– ಸರ್ಕಾರ ಸಹಭಾಗಿತ್ವಕ್ಕೆ ಅತಿಯಾದ ಒತ್ತು ಕೊಡುತ್ತದೆ.
- ಖಾಸಗೀಕರಣವನ್ನು ಒಪ್ಪಿಕೊಳ್ಳುತ್ತದೆ (ಮಾನ್ಯತೆ ಕೊಡುತ್ತದೆ)
- ದುರ್ಬಲ ವರ್ಗದವರು (ದಲಿತರು, ಮಹಿಳೆಯರು, ಅಂಗವಿಕಲ ಸಮುದಾಯ, ಲೈಂಗಿಕ ಅಲ್ಪಸಂಖ್ಯಾತರು ಮತ್ತು ಮಾನಸಿಕ ಆರೋಗ್ಯ) ಇತ್ಯಾದಿಗಳ ಬಗ್ಗೆ ಮೌನ.
- ಜನಾರೋಗ್ಯ ಆಂದೋಲನ ರಾಷ್ಟ್ರೀಯ ಮಟ್ಟದಲ್ಲಿ ಸರ್ಕಾರಕ್ಕೆ ರಚಿಸಿಕೊಟ್ಟ ರಾಷ್ಟ್ರೀಯ ಆರೋಗ್ಯ ಕಾಯಿದೆಯ ಕರಡು ಪ್ರತಿಯನ್ನು ಇದು ಪರಿಗಣಿಸಿಲ್ಲ. ಬದಲಾಗಿ ಅಮೆರಿಕಾದ ಸಾರ್ವಜನಿಕ ಆರೋಗ್ಯ ಕಾಯಿದೆಯನ್ನು ಮಾದರಿಯಾಗಿ ಇಟ್ಟುಕೊಂಡಿದೆ. (ಪ್ರಪಂಚದಲ್ಲಿ ಆರೋಗ್ಯ ವ್ಯವಸ್ಥೆಯನ್ನು ಖಾಸಗೀಕರಣ ಮಾಡಿದವರಿಗೆ ಅಮೆರಿಕ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ಉತ್ತಮ ನಿದರ್ಶನವಾದುದ್ದನ್ನು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕು!)

ಸೂಚನೆಗಳು:

ಜನಾರೋಗ್ಯ ಆಂದೋಲನ ಕೊಟ್ಟಂತಹ ಸೂಚನೆಗಳಲ್ಲಿ ಕೆಲವು:

- ಈ ಮಸೂದೆಯ ಬಗ್ಗೆ ರಾಜ್ಯಾದ್ಯಂತ ವ್ಯಾಪಕ ಚರ್ಚೆಯಾಗಬೇಕು.
- ವಿವಿಧ ಜನಸಮೂಹ–ಸಮುದಾಯಗಳ ಜೊತೆ ಚರ್ಚೆಯಾಗಬೇಕು.

,

- ಆರೋಗ್ಯದ ಹಕ್ಕು– ಮೂಲಭೂತ ಹಕ್ಕು/ ಸಂವಿಧಾನಾತ್ಮಕ ಹಕ್ಕು' ಎಂಬ ದೃಷ್ಟಿಕೋನದಲ್ಲಿ ಇದನ್ನು ರೂಪಿಸಬೇಕು.
- ಯಾವುದೇ ರೀತಿಯಲ್ಲಿ ಖಾಸಗೀಕರಣ, ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಮುಂತಾದವುಗಳಿಗೆ ಮಾನ್ಯತೆ ನೀಡುವಂತಹುದನ್ನು ತೆಗೆದುಹಾಕಬೇಕು.

ಜನಾರೋಗ್ಯ ಆಂದೋಲನ– ಕರ್ನಾಟಕಕ್ಕೆ ರಾಜ್ಯ ಮಾನವ ಹಕ್ಕುಗಳ ಆಯೋಗದ ಸ್ಪಂದನೆ

2009–10 ರ ಅವಧಿಯಲ್ಲಿ ನಡೆಸಿದ ನಿರಾಕರಣೆಗಳ ಬಗ್ಗೆ ಅಧ್ಯಯನ, ಜಿಲ್ಲಾ ಸಾರ್ವಜನಿಕ ಜನಾರೋಗ್ಯ ಜನತಾ ನ್ಯಾಯಾಲಯದ ವರದಿಗಳನ್ನು ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ದಾಖಲಿಸಿದ್ದೆವು. ಇದರ ಪರಿಣಾಮವಾಗಿ ರಾಜ್ಯ ಸರ್ಕಾರಕ್ಕೆ ಈ ದೂರುಗಳನ್ನು ಬಗೆ ಹರಿಸುವ ಸಮಿತಿಯೊಂದನ್ನು ರಚಿಸಲು ನೀಡಿರುವ ಆದೇಶವು ಜನಾರೋಗ್ಯ ಆಂದೋಲನದ ಕೈ ಸೇರಿದೆ. ಇದರ ಪ್ರಮುಖ ಭಾಗವನ್ನು ಇಲ್ಲಿ ಪ್ರಕಟಿಸಲಾಗಿದೆ. ಜನಾರೋಗ್ಯ ಆಂದೋಲನ ಕರ್ನಾಟಕದ ಎಲ್ಲಾ ಸ್ಥಳೀಯ ಕಾರ್ಯಕರ್ತರ ನಿರಂತರ ಶ್ರಮಕ್ಕೆ ಸಿಕ್ಕಿದ ಫಲ ಇದಾಗಿದೆ. ಅಭಿನಂದನೆಗಳು. ಎಲ್ಲಾ ಕಾರ್ಯಕರ್ತರು ನಿರಂತರವಾಗಿ ರಾಜ್ಯ ಮಾನವ ಹಕ್ಕುಗಳ ಆಯೋಗ (SHRC) ಗೆ ಮತ್ತು ಲೋಕಾಯುಕ್ತರಿಗೆ ಅಧಿಕೃತವಾಗಿ ದೂರುಗಳನ್ನು ಸಲ್ಲಿಸುವ ಪ್ರಕ್ರಿಯೆಯನ್ನು ಮುಂದುವರೆಸಬೇಕೆಂದು ಕೋರಿಕೆ.

ಶ್ರೀ.ಪಾರ್ಥಸಾರಥಿ, ಗೌರವಾನ್ವಿತ ಸದಸ್ಯರು.
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

ಆದೇಶ

ನಮ್ಮ ಸಂವಿಧಾನದಲ್ಲಿ ಅನೇಕ ಮೂಲಭೂತ ಹಕ್ಕುಗಳನ್ನು ಭಾರತದ ಪ್ರಜೆಗಳಿಗೆ ನೀಡಲಾಗಿದೆ. ಜೊತೆಗೆ ರಾಜ್ಯನೀತಿ ಮಾರ್ಗದರ್ಶಿ ಸೂತ್ರಗಳನ್ನು ಸಹ ಅಳವಡಿಸಲಾಗಿದೆ.
ಮೂಲಭೂತ ಹಕ್ಕುಗಳನ್ನು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ಪಡೆಯಬಹುದಾಗಿದೆ. ಮಾರ್ಗದರ್ಶಿ ಸೂತ್ರಗಳು ರಾಜ್ಯ ಸರ್ಕಾರಗಳ ಮತ್ತು ಕೇಂದ್ರ ಸರ್ಕಾರಕ್ಕೆ ಉತ್ತಮ ರೀತಿಯಾಗಿ ಆಡಳಿತ ರೂಪಿಸಲು ಮಾರ್ಗದರ್ಶಿ ಸೂತ್ರಗಳಾಗಿದೆ. ಮಾನವ ಹಕ್ಕುಗಳು ಇವೆರಡರಲ್ಲಿರುವ ಅಂಶಗಳನ್ನು ಒಳಗೊಂಡಿರುವುದರಿಂದ ಕಾರ್ಯವ್ಯಾಪಿ ವಿಸ್ತಾರವಾಗಿದೆ. ಬದುಕುವ ಹಕ್ಕಿನಿಂದ ಹಿಡಿದು ಘನತೆಯಿಂದ ಬದುಕುವ ಹಕ್ಕು, ಸಂವಿಧಾನದ ಹಕ್ಕು ವೈಯಕ್ತಿಕ ಸ್ವಾತಂತ್ರದ ಹಕ್ಕು, ಶೋಷಣೆ ವಿರುದ್ಧ ಹಕ್ಕು, ಗುಲಾಮಗಿರಿಯ ಹಕ್ಕು, ಖಾಸಗಿ ಹಕ್ಕು, ವಿಚಾರಣೆಯ ಹಕ್ಕು, ಆರೋಗ್ಯದ ಹಕ್ಕು, ಧರ್ಮದ ಹಕ್ಕು, ಶಿಕ್ಷಣದ ಹಕ್ಕು ಹಾಗೂ ಪರಿಸರದ ಹಕ್ಕು ಹೀಗೆ ಆನೇಕ ಹಕ್ಕುಗಳನ್ನು ನೀಡಲಾಗಿದೆ.

ಮೇಲಿನ ತಿಳಿಸಿರುವ ಹಕ್ಕುಗಳು ಜೀವಿಸುವ ಹಕ್ಕಾಗಿದ್ದು, ಜೀವಿಸುವ ಹಕ್ಕಿನ ಜೊತೆಗೆ ಘನತೆಯಿಂದ ಜೀವಿಸುವುದು ಹಾಗೂ ಸಮಾನತೆಯ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಸ್ವಾತಂತ್ರ್ಯದ ಹಕ್ಕು ಇವೆಲ್ಲವು ಸೇರಿವೆ. ಈ ಮೂರು ಮುಖ್ಯ ಹಕ್ಕುಗಳನ್ನು ಸಹ ನಾವು ಗಮನಿಸಬೇಕಾಗುತ್ತದೆ. ಶಿಕ್ಷಣದ ಹಕ್ಕು, ಆರೋಗ್ಯದ ಹಕ್ಕು ಮತ್ತು ಧರ್ಮದ ಹಕ್ಕು ಈ ದೇಶದಲ್ಲಿ ಸಂವಿಧಾನ ನೀಡಿರುವ ಸ್ವಾತಂತ್ರ್ಯದಿಂದ ಯಾವುದೇ ವ್ಯಕ್ತಿ ಯಾವುದೇ ಧರ್ಮವನ್ನು ಅನುಸರಿಸಬಹುದಾಗಿದೆ. ಶಿಕ್ಷಣದ ಹಕ್ಕಿನ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರವು ಶಾಸನವನ್ನು ರೂಪಿಸಿ ಜಾರಿಗೆ ತಂದಿದೆ. ಘನತೆಯಿಂದ ಜೀವಿಸುವ, ಶಾಂತಿ ಮತ್ತು ನೆಮ್ಮದಿಯಿಂದ ಬಾಳಬೇಕಾದರೆ ಬದುಕುವ ಹಕ್ಕಿಗೆ ಆರೋಗ್ಯದ ಹಕ್ಕು ಪ್ರಮುಖ ಪಾತ್ರ ವಹಿಸುತ್ತದೆ.
ಹೀಗಿರುವಾಗ ಸರ್ಕಾರ ಆರೋಗ್ಯ ಸೇವೆಯನ್ನು ಜನರಿಗೆ ಒದಗಿಸಬೇಕಾದ ಪ್ರಮುಖ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ಇತ್ತೀಚಿನ ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಜ್ಞಾನ ಆರೋಗ ನಿರ್ವಹಿಸಿದ ಒಂದು ಸಮೀಕ್ಷೆಯ ಪ್ರಕಾರ ಆರೋಗ್ಯ ಸೇವೆಗೆ ಜನರಿಗೆ ಖರ್ಚಾಗುವ ಹಣದಲ್ಲಿ ಶೇಕಡ 67 ರಷ್ಟು ಖರ್ಚನ್ನು ಜನರೇ ಭರಿಸುತ್ತಿದ್ದಾರೆ ಎನ್ನುವ ಅಂಶ ಬೆಳಕಿಗೆ ಬಂದಿದೆ. ಸ್ವಾತಂತ್ರ್ಯ ಭಾರತ ಈಗಾಗಲೇ ಆರು ದಶಕಗಳನ್ನು ಮೀರಿದ್ದರೂ ಸಹ ನಮ್ಮ ಸರ್ಕಾರವು ಒದಗಿಸುತ್ತಿರುವ ಅಥವಾ ಭರಿಸುತ್ತಿರುವ ಆರೋಗ್ಯದ ವೆಚ್ಚ ಶೇಕಡ 33ಕ್ಕೆ ಮಾತ್ರ ಸೀಮಿತವಾಗಿದೆ.

ನಮ್ಮ ಆಯೋಗಕ್ಕೆ ಆರೋಗ್ಯ ಸೇವೆಗಳ ಬಗ್ಗೆ ಹಲವಾರು ದೂರುಗಳು ಬರುತ್ತಿವೆ. ಅದರಲ್ಲಿ ಅನೇಕ ದೂರುಗಳನ್ನು, ದೂರಿಗೆ ಸಂಬಂಧಪಟ್ಟ ಹಾಗೆ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಮಾಡಲಾಗಿದೆ. ಆದರೂ ಬೇರೆ ಬೇರೆ ಕಡೆಯಿಂದ ದೂರುಗಳು ಬರುತ್ತಿವೆ.

ಸರ್ಕಾರವು ವ್ಯಾಪಕ ಪ್ರಮಾಣದಲ್ಲಿ ಸೇವೆಯನ್ನು ಕೈಗೊಂಡಿದೆ. ರಾಜ್ಯ ಮಟ್ಟದ ಆಸ್ಪತ್ರೆಗಳಲ್ಲದೆ ಜಿಲ್ಲಾ ಮಟ್ಟದ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಘಟಕಗಳನ್ನು ರಾಜ್ಯಾದ್ಯಾಂತ ವ್ಯವಸ್ಥೆ ಮಾಡಲಾಗಿದೆ. ಈ ಆಸ್ಪತ್ರೆಗಳ ನಿರ್ವಹಣೆಯು ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯವ್ಯಾಪ್ತಿಗೆ ಬರುತ್ತಿದೆ.

ವಿವಿಧ ಸರ್ಕಾರದ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಕಾರ್ಯವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳು ವೈದ್ಯಕೀಯ ಶಿಕ್ಷಣ ಕಾರ್ಯವ್ಯಾಪ್ತಿಗೆ ಬಂದಿದ್ದರೆ ಉಳಿದ ಆಸ್ಪತ್ರೆಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬಂದಿವೆ.

ಜಿಲ್ಲಾ ಮಟ್ಟದಲ್ಲಿ ಆರೋಗ್ಯ ಇಲಾಖೆಯನ್ನು ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಪಂಚಾಯಿತಿಗಳಿಗೆ ವಹಿಸಿರುವುದರಿಂದ ಪ್ರಾಥಮಿಕ ಮತ್ತು ಆರೋಗ್ಯ ಘಟಕಗಳನ್ನು ತಾಲ್ಲೂಕು ಆಸ್ಪತ್ರೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜಿಲ್ಲಾ ಪಂಚಾಯತ್ ಕಾರ್ಯವ್ಯಾಪ್ತಿಗೆ ಬರುತ್ತದೆ. ಇದಲ್ಲದೆ ಕೆಲವು ಪುರಸಭೆಗಳು, ನಗರಸಭೆಗಳು, ಮಹಾನಗರ ಪಾಲಿಕೆಗಳು ವೈದ್ಯಕೀಯ ಸೇವೆಯನ್ನು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಸೇರಿಸಿಕೊಂಡು ವೈದ್ಯಕೀಯ ವ್ಯವಸ್ಥೆ ಮಾಡುತ್ತಿವೆ. ಹೀಗಿದ್ದರೂ ಆನೇಕ ಕೊರತೆಗಳನ್ನು ಆಯೋಗಕ್ಕೆ ಬಂದಿರುವ ದೂರುಗಳ ಪ್ರಕರಣಗಳಲ್ಲಿ ಗಮನಿಸಬಹುದಾಗಿದೆ.

ಆಯೋಗದ ಗೌರವಾನ್ವಿತ ಅಧ್ಯಕ್ಷರು ಮತ್ತು ಸದಸ್ಯರುಗಳು ರಾಜ್ಯದ ವಿವಿಧ ಭಾಗಗಳಲ್ಲಿರುವ ಆಸ್ಪತ್ರೆಗಳಿಗೆ ಭೇಟಿ ನೀಡಿದಾಗ ಆನೇಕ ಕೊರತೆಗಳನ್ನು ಗಮನಿಸಲಾಗಿದೆ. ಬಹಳ ಮುಖ್ಯವಾಗಿ ವೈದ್ಯರು, ತಜ್ಞ ವೈದ್ಯರು ಹಾಗೂ ಇತರೆ ಸಿಬ್ಬಂದಿಗಳ ಕೊರತೆ ಬಹಳಷ್ಟು ಪ್ರಮಾಣದಲ್ಲಿ ಕಂಡು ಬರುತ್ತಿದೆ. ಕೆಲವು ಸಂದರ್ಭಗಳಲ್ಲಿ ವೈದ್ಯರ ಹುದ್ದೆ ಮಂಜೂರು ಮಾಡಬೇಕಾಗಿದ್ದರೂ ಸಹ ಇರುವ ಹುದ್ದೆಗಳನ್ನು ಪೂರ್ಣವಾಗಿ ತುಂಬದಿರುವ ಒಂದು ಪರಿಸ್ಥಿತಿ ಇದೆ. ಸಿಬ್ಬಂದಿ ಕೊರತೆಯ ಜೊತೆಗೆ ಮೂಲಭೂತ ಸೌಕರ್ಯಗಳ ಕೊರತೆ ಇವೆಲ್ಲವನ್ನು ಆಯೋಗಕ್ಕೆ ಬಂದಿರುವ ದೂರುಗಳಲ್ಲಿ ನಮೂದಿಸಲಾಗಿದೆ. ಆರೋಗ್ಯ ಸೇವೆಯನ್ನು ಉತ್ತಮಗೊಳಿಸಬೇಕಾದರೆ ಇದರ ಬಗ್ಗೆ ಅಮೂಲಾಗ್ರಹವಾಗಿ ಪರಿಶೀಲಿಸಬೇಕಾದ ಅವಶ್ಯಕತೆಯಿದೆ. ಇವುಗಳನ್ನು ಪರಿಶೀಲಿಸಿ ಶಿಫಾರಸ್ಸು ಮಾಡುವ ಮುನ್ನ ಆಯೋಗಕ್ಕೆ ಬಂದಿರುವ ದೂರುಗಳನ್ನು ಪರಿಶೀಲಿಸಿದಾಗ ಮೇಲೆ ಹೇಳಿದ ಹಾಗೆ ವೈದ್ಯರ ಕೊರತೆ, ಸಹಾಯಕ ಸಿಬ್ಬಂದಿಯ ಕೊರತೆ, ಮೂಲಭೂತ ಸೌಕರ್ಯಗಳ ಕೊರತೆ, ಮತ್ತು ಔಷಧಿಗಳ ಕೊರತೆ ಈ ಎಲ್ಲಾ ಕೊರತೆಗಳನ್ನು ಕಾಣಬಹುದಾಗಿದೆ.
ಈ ದೂರುಗಳಲ್ಲಿ ಒಂದು ಮುಖ್ಯ ದೂರು ಹೆಚ್.ಆರ್.ಸಿ. ಸಂ.2166/10 ರಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಜನಾರೋಗ್ಯ ಆಂದೋಲನ ಕರ್ನಾಟಕದವರು ಒಂದು ಸಮೀಕ್ಷೆ ಮಾಡಿ ಬಾಗಲಕೋಟೆ ಜಿಲ್ಲೆ ಆರೋಗ್ಯ ಕ್ಷೇತ್ರವಾದ ಪ್ರಾಥಮಿಕ ಆರೋಗ್ಯ ಕೇಂದ್ರದ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಿದ ವರದಿ ಹಾಗೂ ಆರೋಗ್ಯ ಸೇವೆಯನ್ನು ನಾಗರೀಕರನ್ನು ಒಳಗೊಂಡ ವ್ಯಕ್ತಿಗಳ ಹೇಳಿಕೆಗಳ ಬಗ್ಗೆ ಒಂದು ವರದಿಯನ್ನು ತಯಾರಿಸಿ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರ ಸಮ್ಮುಖದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಮಂಡಿಸಿದ್ದಾರೆ. ಈ ಸಭೆಗೆ ಬಾಗಲಕೋಟೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದಾರೆ.

ಬಹುಶ: ಈ ಸಮೀಕ್ಷೆಯಲ್ಲಿರುವ ಅಂಶಗಳು ಬೇರೆ ಜಿಲ್ಲೆಗಳಲ್ಲೂ ಪ್ರಸ್ತುತ ಎನ್ನುವುದು ಹಾಗೂ ವಾಸ್ತವಿಕವಾಗಿ ಅದೇ ಸಮಸ್ಯೆ ಇದೆಯೆನ್ನುವುದು ಸ್ಪಷ್ಟವಾಗಿದೆ. ಎಲ್ಲಾ ಹಕ್ಕು ಬದುಕುವ ಹಕ್ಕಿಗೆ ಪೂರಕವಾಗಿದ್ದು ಇದು ಸಂವಿಧಾನದಲ್ಲಿ ಎಲ್ಲಾ ನಾಗರೀಕರಿಗೆ ಒದಗಿಸಿರುವ ಹಕ್ಕಾಗಿದೆ. ಇದು ಅತ್ಯಂತ ಮುಖ್ಯ ಮಾನವ ಹಕ್ಕಾಗಿದ್ದು ಇದರ ಬಗ್ಗೆ ಸರ್ಕಾರ ಸರಿಯಾದ ಸಮೀಕ್ಷೆ ನಡೆಸಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.
ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿರುವ ಪ್ರಮುಖ ಆಸ್ಪತ್ರೆಗಳಲ್ಲಿಯೇ ಆನೇಕ ಕೊರತೆಗಳಿವೆ. ಆರೋಗ್ಯ ಸೇವೆಯಲ್ಲಿ ನಿರ್ಲಕ್ಷ್ಯ ತೋರಿಸಲಾಗುತ್ತಿದೆ ಎನ್ನುವ ದೂರುಗಳು, ಮುದ್ರಣ ಮಾಧ್ಯಮಗಳಲ್ಲಿ, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬರುತ್ತಲೇ ಇವೆ. ಆದುದರಿಂದ ಯಾವ ಆಸ್ಪತ್ರೆಗೆ ಏನು ಅವಶ್ಯಕತೆಯಿದೆ ಹಾಗೂ ಅವಶ್ಯಕತೆಗಳನ್ನು ಪೂರೈಸಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳಬಹುದು ಎನ್ನುವುದರ ಬಗ್ಗೆ ಒಂದು ಸಮೀಕ್ಷೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಆರೋಗ್ಯ ಇಲಾಖೆಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಜಿಲ್ಲಾ ಪಂಚಾಯತ್ ಕಾರ್ಯವ್ಯಾಪ್ತಿಗೆ ನೀಡಿರುವುದರಿಂದ ಪ್ರಾಧನ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಅನೇಕ ನಗರಸಭೆಗಳು, ಪುರಸಭೆಗಳು, ಮಹಾನಗರ ಪಾಲಿಕೆಗಳು ಆಸ್ಪತ್ರೆಗಳನ್ನು ನಡೆಸುತ್ತಿರುವುದರಿಂದ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಹಣಕಾಸಿನ ಪ್ರಧಾನ ಕಾರ್ಯದರ್ಶಿಗಳು ಇವರೆಲ್ಲರನ್ನು ಒಳಗೊಂಡ ಒಂದು ಉನ್ನತ ಅಧಿಕಾರಿಗಳ ಸಮಿತಿಯನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ರಚಿಸಿ ರಾಜ್ಯ ಸರ್ಕಾರ ವೈದ್ಯಕೀಯ ಸೇವೆಯನ್ನು ಜನರಿಗೆ ಸಿಗುವ

ವ್ಯವಸ್ಥೆಯಲ್ಲಿರುವ ಅನೇಕ ಕೊರತೆಗಳನ್ನು ನೀಗಿಸಿ ಆರೋಗ್ಯ ಸೇವೆಯು ಪರಿಣಾಮಕಾರಿಯಾಗಿರುವ ಹಾಗೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಶಿಫಾರಸ್ಸು ಮಾಡಲಾಗಿದೆ.

ಬಹುಶ: ಸರ್ಕಾರಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಸೇವೆ ದೊರಕಬೇಕಾದ್ದು ಕಡಿಮೆ ಆದಾಯದ ವ್ಯಕ್ತಿಗಳಿಗೆ. ಬಡತನದ ರೇಖೆಗಿಂತ ಕಡಿಮೆಯಿರುವ ಲಕ್ಷಾಂತರ ಜನವಿರುವ ಈ ರಾಜ್ಯದಲ್ಲಿ ಆರೋಗ್ಯ ಸೇವೆಯನ್ನು ಪಡೆಯಬೇಕಾದರೆ ಸರ್ಕಾರಿ ಆಸ್ಪತ್ರೆಗಳಲ್ಲಿರುವ ವೈದ್ಯಕೀಯ ಸೇವೆ ಉತ್ತಮವಾಗಬೇಕು. ಇದಕ್ಕೆ ಅಗತ್ಯ ವ್ಯವಸ್ಥೆ ಅಂದರೆ ವೈದ್ಯರು, ತಜ್ಞ ವೈದ್ಯರು, ವೈದ್ಯಕೀಯ ಸಿಬ್ಬಂದಿ, ಸಲಕರಣೆಗಳೂ, ಔಷಧಿಗಳ ಕಟ್ಟಡಗಳು ಮತ್ತಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಆರೋಗ್ಯದ ಹಕ್ಕನ್ನು ಪರಿಣಾಮಕಾರಿಯಾಗಿ ಜನರಿಗೆ ಒದಗಿಸಬೇಕಾದರೆ ಸರ್ಕಾರ ಈ ನಿಟ್ಟಿನಲ್ಲಿ ಗಂಭೀರವಾಗಿ ಚಿಂತಿಸಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಅದಕ್ಕೋಸ್ಕರ ಮೇಲೆ ಆಯೋಗ ಶಿಫಾರಸ್ಸು ಮಾಡಿದ ಹಾಗೆ ಹಿರಿಯ ಅಧಿಕಾರಿಗಳ ಒಂದು ಸಮಿತಿಯನ್ನು ರಚಿಸಿ, ಆ ಸಮಿತಿ ರಾಜ್ಯದ ವಿವಿಧ ಭಾಗಗಳಲ್ಲಿರುವ ವಿವಿಧ ಹಂತಗಳಲ್ಲಿ ಆಸ್ಪತ್ರೆಗಳ ವಾಸ್ತವಿಕ ಪರಿಸ್ಥಿತಿಯನ್ನು ಸಮೀಕ್ಷೆ ಮಾಡಿ ಅಲ್ಲಿರುವ ಕೊರತೆಗಳನ್ನು ನಿವಾರಿಸಿ ಎಲ್ಲಾ ಸೇವೆಯನ್ನು ಉತ್ತಮಗೊಳಿಸುವುದಕ್ಕೆ ಕಾಲಬದ್ಧವಾದ ಕ್ರಮ ತೆಗೆದುಕೊಳ್ಳಬೇಕೆಂದು ಹಾಗೂ ಇದರ ಬಗ್ಗೆ ತೆಗೆದುಕೊಳ್ಳುವ ಕ್ರಮಗಳನ್ನು ಆಯೋಗಕ್ಕೆ ಶಾಸನದ ಕಲಂ 18 (ಇ) ಪ್ರಕಾರ ಒಂದು ತಿಂಗಳಲ್ಲಿ ಅಭಿಪ್ರಾಯವನ್ನು ಮಂಡಿಸಬೇಕೆಂದು ಸೂಚನೆ ನೀಡಿ ಆಯೋಗದ ಮುಂದೆ ಇರುವ ಪ್ರಕರಣಗಳು ಹೆಚ್.ಆರ್.ಸಿ. ಸಂ.745/10, 2166/10, 3631/10 CW 7340/10, 5146/10 CW 4781/10, 5550/10, 6703/10, 7382/10, 7384/10, 7436/10, 7477/10, 175/11,204/11, 860/11, 861/11 & 862/11 ಇವುಗಳನ್ನು ಇತ್ಯರ್ಥಪಡಿಸಲಾಗಿದೆ.
ಜೊತೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಸಂಬಂಧಪಟ್ಟ ದೂರಿನ ಬಗ್ಗೆ ಬಂದಿರುವ ಅಂಶಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಸಂಭಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಬೇಕೆಂದು ಶಿಫಾರಸ್ಸು ಮಾಡಿ ಈ ಪ್ರಕರಣಗಳೆಲ್ಲವನ್ನು ಇತ್ಯರ್ಥಪಡಿಸಲಾಗಿದೆ.

ಗೆ
ಜನಾರೋಗ್ಯ ಆಂದೋಲನ–ಕರ್ನಾಟಕ
ಬೆಂಗಳೂರು

ನಿಮ್ಮ ಆರೋಗ್ಯದ ರಕ್ಷಣೆಯನ್ನು ಯಾರು ಮಾಡಬೇಕು?

ಲೇಖಕರು: ಡಾ:ಸಿ.ಆರ್.ಚಂದ್ರಶೇಖರ್, ಪ್ರಾಚಾರ್ಯರು,
Dept. of Psychiatry, NIMHAS, ಬೆಂಗಳೂರು

ಇಂದಿನ ದಿನಗಳಲ್ಲಿ ಆರೋಗ್ಯವಂತರಿಗಿಂತ ಅನಾರೋಗ್ಯವಂತರ ಸಂಖ್ಯೆ ಹೆಚ್ಚಾಗುತ್ತಿದೆ. ಯಾವುದೇ ಆಸ್ಪತ್ರೆ, ಕ್ಲಿನಿಕ್‌ಗಳಲ್ಲಿ ಜನ ತುಂಬಿರುತ್ತಾರೆ. ಆಹಾರಕ್ಕಿಂತ ಹೆಚ್ಚಾಗಿ, ಮಾತ್ರೆ, ಕ್ಯಾಪ್ಸೂಲ್, ಟಾನಿಕ್–ಸಿರಪ್‌ಗಳನ್ನು ಸೇವಿಸುತ್ತಿದ್ದಾರೆ. ಆಲೋಪತಿ ಒಳ್ಳೆಯದೋ, ಆರ್ಯುವೇದ ಚೆನ್ನವೋ, ಹೋಮಿಯೋಪತಿ ಚೆನ್ನವೋ ಎಂಬ ಪ್ರಶ್ನೆ ಕೇಳುತ್ತಾರೆ. ನಂಬಿಕೆಗೆ ಅರ್ಹರಾದ ವೈದ್ಯರಾರು?, ಆಸ್ಪತ್ರೆ ಯಾವುದು? ಎಂದು ತಿಳಿಯದೇ ಕಂಗಾಲಾಗುತ್ತಿದ್ದಾರೆ. ತಿಂಗಳಿಗೆ ನೂರಾರು–ಸಾವಿರಾರು ರೂಪಾಯಿಗಳನ್ನು ಆರೋಗ್ಯ ಸುಧಾರಣೆಗೆ ಕಾಯಿಲೆಗಳ ಚಿಕಿತ್ಸೆಗೆ ವ್ಯಯ ಮಾಡುತ್ತಿದ್ದಾರೆ. ಆರೋಗ್ಯ ವೃದ್ಧಿಗೆ ಯೋಗ, ಧ್ಯಾನ, ವಾಕಿಂಗ್, ಜಾಗಿಂಗ್, ಸ್ಕಿಪ್ಪಿಂಗ್ ಇತ್ಯಾದಿಗಳನ್ನು ಮಾಡುತ್ತಿದ್ದಾರೆ. ಜನರು ಆರೋಗ್ಯ ವಂತರಾಗಿದ್ದರೆ ಅವರ ಶಕ್ತಿ ಸಾಮರ್ಥ್ಯ ಹೆಚ್ಚಾಗುತ್ತದೆ. ರೋಗಿಗಳಾದರೆ, ದುರ್ಬಲರಾಗಿ, ಸಂಪಾದಿಸುವ, ಉತ್ಪಾದಿಸುವ ಶಕ್ತಿಯನ್ನು ಕಳೆದುಕೊಂಡು ಸಮಾಜಕ್ಕೆ ಮತ್ತು ಕುಟುಂಬಕ್ಕೆ ಹೊರೆಯಾಗುತ್ತಾರೆ. ಜನರ ಆರೋಗ್ಯ ರಕ್ಷಣೆಯನ್ನು ಯಾರು ಮಾಡಬೇಕು? ಸರ್ಕಾರವೇ, ವೈದ್ಯರೇ?

ಯಾವ ಕಾಯಿಲೆಗಳು ಹೆಚ್ಚು?

ಇಂದು ನಮ್ಮನ್ನು ನೂರಾರು ಕಾಯಿಲೆಗಳು ಕಾಡಿಸುತ್ತಿವೆ. ಅವುಗಳಲ್ಲಿ ಮುಖ್ಯವಾದವು

- ಹಲ್ಲು ಮತ್ತು ವಸಡಿನ ರೋಗಗಳು –ಶೇಕಡಾ 50 ರಷ್ಟು ಜನರಲ್ಲಿ
- ಅನಿಮಿಯಾ (10 ಗ್ರಾಂಕ್ಕಿಂತ ಕಡಿಮೆ ಹಿಮೋಗ್ಲೋಬಿನ್) – ಶೇ.40 ರಷ್ಟು ಜನರಲ್ಲಿ
- ಡಯಾಬಿಟಿಸ್, ರಕ್ತದೊತ್ತಡ, ಕೀಲುಬೇನೆ, ಅಲ್ಸರ್, ಆಸ್ತಮಾ, ಕ್ಯಾನ್ಸರ್ ಇತ್ಯಾದಿ ಅಸಾಂಕ್ರಾಮಿಕ ರೋಗಗಳು–ಶೇ.20 ರಷ್ಟು ಜನರಲ್ಲಿ
- ಖಿನ್ನತೆ, ಆತಂಕ, ಸ್ಕಿಜೋಫ್ರೀನಿಯಾ, ಮನೋದೈಹಿಕ ರೋಗಲಕ್ಷಣಗಳಂತಹ ಮಾನಸಿಕ ಕಾಯಿಲೆಗಳು– ಶೇ.20 ರಷ್ಟು ಜನರಲ್ಲಿ
- ಸೋಂಕುರೋಗಗಳು (ಬ್ಯಾಕ್ಟೀರಿಯಾ ವೈರಸ್, ಫಂಗಸ್‌ನಿಂದ ಬರುವಂತಹವು) –ಶೇ.10 ರಷ್ಟು ಜನರಲ್ಲಿ

ಹೆಂಗಸರು, ಮಕ್ಕಳು, ವೃದ್ಧರು, ಹಳ್ಳಿಗಳು ನಗರದ ಸ್ಲಂಗಳವಾಸಿಗಳಲ್ಲಿ, ಅನಾಥಾಶ್ರಮ, ವೃದ್ಧಾಶ್ರಮ, ಜೈಲುವಾಸಿಗಳಲ್ಲಿ ಅನಾರೋಗ್ಯ ಹೆಚ್ಚು.

ನಾವೇಕೆ ಕಾಯಿಲೆ ಬೀಳುತ್ತೇವೆ?

ಜನ ಸಾಮಾನ್ಯರಲ್ಲಿರುವ ನಂಬಿಕೆಗಳು

1. ಪೂರ್ವಜನ್ಮದ ಪಾಪಕರ್ಮಗಳು
2. ದುರಾದೃಷ್ಟ, ಗ್ರಹಗತಿ ಚೆನ್ನಾಗಿಲ್ಲದಿರುವುದು.
3. ಮಾಟ ಮಂತ್ರ, ಮದ್ದು, ಭಾನಾಮತಿ, ಕೆಟ್ಟಕಣ್ಣು, ಪೀಡೆ ಪಿಶಾಚಿಗಳು
4. ದೇವರ ಕೋಪ ಮತ್ತು ಶಾಪ

ಹೀಗಾಗಿ ಕಾಯಿಲೆ ಬಿದ್ದಾಗ, ಕಾಯಿಲೆ ದೀರ್ಘಕಾಲ ಕಾಡಲು ಪ್ರಾರಂಭಿಸಿದಾಗ ಜನ ದೇವರ, ದೇವಸ್ಥಾನ, ಚರ್ಚು, ಮಸೀದಿಗಳ, ಮಂತ್ರವಾದಿಗಳ, ಬಾಬಾಗಳ, ಜ್ಯೋತಿಷಿಗಳ ಮೊರೆ ಹೋಗುತ್ತಾರೆ. ಪೂಜೆ, ಹರಕೆ, ಪ್ರತಿ ಮಂತ್ರ–ತಂತ್ರ, ದುಷ್ಟ ಶಕ್ತಿಗಳ ಉಚ್ಚಾಟನೆ ಮಾಡಿಸಲು ಅಪಾರವಾದ ಹಣ, ಶ್ರಮ ಮತ್ತು ಸಮಯವನ್ನು ವ್ಯರ್ಥಮಾಡುತ್ತಾರೆ.

ನಾವು ರೋಗಪೀಡಿತರಾಗಲು ನಾಲ್ಕು ಮುಖ್ಯ ಕಾರಣಗಳಿವೆ.

1. **ಅಪೌಷ್ಟಿಕತೆ:** ದೇಹ ಬೆಳೆಯಲು, ಆರೋಗ್ಯವಾಗಿ ದೃಢವಾಗಿರಲು, ಒಳ್ಳೆಯ ರೋಗನಿರೋಧಕ ಶಕ್ತಿ ಪಡೆಯಲು, ಪುಷ್ಟಿಯಾದ ಆಹಾರವು ಅತಿಮುಖ್ಯ. ಬಡತನ, ಅಜ್ಞಾನ, ನಾಲಿಗೆಯ ಚಪಲಗಳಿಂದ ಜನ ತಿನ್ನಬಾರದ್ದನ್ನು, ಕುಡಿಯಬಾರದ್ದನ್ನು ಸೇವಿಸುತ್ತಾರೆ. ತಿನ್ನಬೇಕಾದ್ದನ್ನು ತಿನ್ನುವುದಿಲ್ಲ. ಅಪೌಷ್ಟಿಕತೆ ಮತ್ತು ಮಲಿನ ಆಹಾರವೇ ಬಹುತೇಕ ಕಾಯಿಲೆಗಳಿಗೆ ಕಾರಣ. ಅತಿಯಾದ ಪ್ರಮಾಣದಲ್ಲಿ ಸಿಹಿ, ಕೊಬ್ಬು, ಮಸಾಲೆಗಳು, ರಾಸಾಯನಿಕಗಳನ್ನು ಸೇರಿಸಿದ ಸಿದ್ಧಪಡಿಸಿದ ಆಹಾರಗಳು, ಆಲ್ಕೋಹಾಲ್ ಇತ್ಯಾದಿ ಸೇವನೆ ಆರೋಗ್ಯಕ್ಕೆ ಮಾರಕ. ಪದೇ ಪದೇ ಉಪವಾಸ, ಅವೇಳೆಯಲ್ಲಿ ಆಹಾರ ಸೇವಿಸುವುದು, ಅತಿಯಾಗಿ ಪದೇ ಪದೇ ತಿನ್ನುವವುದೂ ಕೂಡ ಅನಾರೋಗ್ಯಕ್ಕೆ ಎಡೆಮಾಡಿಕೊಡುತ್ತದೆ.
2. **ಕೊಳಕುತನ:** ನಾವೆಲ್ಲ ಕೊಳಕರೇ. ಬಹುತೇಕ ಜನ ನಿತ್ಯ ಸ್ನಾನಮಾಡುವುದಿಲ್ಲ. ಮಲಮೂತ್ರ ವಿಸರ್ಜನೆಗೆ ಕೆರೆ, ಹೊಳೆ, ಬಯಲು, ಪೊದೆಯ ಹಿಂದಿನ ಜಾಗವನ್ನೇ ಅವಲಂಬಿಸುತ್ತಾರೆ. ಇಂದಿಗೂ ಶೇ.70 ರಷ್ಟು ಮನೆಗಳಲ್ಲಿ ಶೌಚಾಲಯವಿಲ್ಲ. ಮನೆಯ ಒಳಗೆ ಮತ್ತು ಹೊರಗೆ ಕಸ–ಕಡ್ಡಿ, ಗಲೀಜು, ಹಸು/ಎಮ್ಮೆ, ಕುರಿ, ಮೇಕೆ, ಕೋಳಿಗಳಿಗೆ ಮನೆಯೊಳಗೆ ಅಥವಾ ಮನೆಯ ಆವರಣದಲ್ಲೇ ವಾಸ. ಎಲ್ಲೆಂದರೆ ಉಗಿಯುತ್ತೇವೆ. ಮೂತ್ರ ವಿಸರ್ಜಿಸುತ್ತೇವೆ. ಎಲ್ಲೆಲ್ಲೂ ತಿಪ್ಪೆಗುಂಡಿಗಳು, ಕಸದ ರಾಶಿ, ಇಂತಹ ಕೊಳಕು ಪರಿಸರದಲ್ಲಿ ರೋಗಾಣುಗಳು ಸಮೃದ್ಧಿಯಾಗಿ ವೃದ್ಧಿಯಾಗುತ್ತವೆ. ನೊಣ, ಸೊಳ್ಳೆ, ಜಿರಳೆ, ಇಲಿ, ಹೆಗ್ಗಣ, ಹಂದಿಗಳು ರೋಗಾಣುಗಳ ವಾಹಕವಾಗುತ್ತವೆ. ಬಹುತೇಕ ಮಂದಿಯ ಕರುಳಿನಲ್ಲಿ ಜಂತುಗಳು ಬಂದು, ಅನಿಮಿಯಾ ಬರಲು ಇದೇ ಕಾರಣ. ಕಾಲರಾ, ಮಲೇರಿಯಾ, ಪೋಲಿಯೋ, ಕ್ಷಯ, ಅತಿಸಾರ, ಆಮಶಂಕೆ, ಫ್ಲೂ, ಡೆಂಗ್ಯೂ, ಚಿಕುನ್‌ಗುನ್ಯಾ ಇತ್ಯಾದಿ ಸೋಂಕುರೋಗಗಳಿಗೆ ಕೊಳಕು ಪರಿಸರವೇ ಮೂಲ ಕಾರಣ.
3. **ಮಾನಸಿಕ ಕ್ಲೇಶ, ಚಿಂತೆ, ವ್ಯಥೆ, ಒತ್ತಡಗಳು:** ಇಂದು ಚಿಂತೆ ಇಲ್ಲದ ವ್ಯಕ್ತಿ ಇಲ್ಲ. ಇದ್ದರೂ ಚಿಂತೆ, ಇಲ್ಲದಿದ್ದರೂ ಚಿಂತೆ! ನಿನ್ನೆ ಮತ್ತು ನಾಳೆಗಳ ಬಗ್ಗೆ ಚಿಂತೆ. ಮಾಡಿದ ತಪ್ಪು, ತೆಗೆದುಕೊಂಡ ದುಡುಕು ನಿರ್ಧಾರ, ಇತರರ ಟೀಕೆ, ಅಸಹಕಾರ, ಅವಮಾನಗಳ ಬಗ್ಗೆ ಚಿಂತೆ. ಅನಿಶ್ಚಯತೆ, ಅತಿಸ್ಪರ್ಧೆ, ಅವ್ಯವಸ್ಥೆ, ಶೋಷಣೆ, ಪಕ್ಷಪಾತ, ಸಾಮಾಜಿಕ ಆರ್ಥಿಕ ಅಸಮತೋಲನ, ಹೆಚ್ಚುತ್ತಿರುವ ಭ್ರಷ್ಟಾಚಾರ, ಅನಾಚಾರ,ಅತ್ಯಾಚಾರ, ಮೋಸವಂಚನೆ, ಅಪ್ರಾಮಾಣಿಕತೆ, ಕೆಲಸಗಳ್ಳತನದಿಂದ ಉಂಟಾಗುವ ಒತ್ತಡ, ಕಾಮ ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳಿಂದುಟಾಗುವ ಮನೋಕ್ಲೇಶಗಳಿಂದ, ಮನೋದೈಹಿಕ ಕಾಯಿಲೆಗಳಾದ ಡಯಾಬಿಟೀಸ್, ಬಿಪಿ, ಅಲ್ಸರ್, ಕೀಲು ಭಾದೆ, ಬೊಜ್ಜು, ತಲೆನೋವು, ಮಲಬದ್ಧತೆ, ಕ್ಯಾನ್ಸರ್‌ಗಳು ಈಗ ಎಲ್ಲ ವಯಸ್ಸಿನ ಎಲ್ಲ ವರ್ಗದ ಜನರನ್ನು ಕಾಡಲು ಪ್ರಾರಂಭಮಾಡಿವೆ. ಹಾಗೆಯೇ ಆತಂಕ, ಖಿನ್ನತೆ, ಮನೋದೈಹಿಕ ರೋಗಗಳು ಹೆಚ್ಚುತ್ತಿವೆ.

4. **ಅಸಮರ್ಪಕ–ಅಶಿಸ್ತು ಹಾಗೂ ಸೋಮಾರಿತನ–ಭೋಗ ಜೀವನಶೈಲಿ:** ಇಂದು ಯಾರಿಗೂ ದೈಹಿಕ ಶ್ರಮದ ಕೆಲಸ–ವೃತ್ತಿ ಬೇಡ. ಏನೂ ಮಾಡದೇ, ಕುರ್ಚಿಯ ಮೇಲೆ ಕುಳಿತು ಸಂಬಳ ಪಡೆಯುವ ಉದ್ಯೋಗಳು ಬೇಕು. ಮೈ ಬಗ್ಗಿಸಿ ಕೆಲಸ ಮಾಡುವುದಿಲ್ಲ. ಓಡಾಡುವುದಿಲ್ಲ. ಕುಳಿತ ಕಡೆಯೇ ಎಲ್ಲ ಆಗಬೇಕು. ಟಿ.ವಿ. ಮುಂದೆ ಕುಳಿತು ಕಲ್ಪನೆಯ– ಮನರಂಜನಾ ಅಥವಾ ಮನೋರೋಚಕ ಕಾರ್ಯಕ್ರಮಗಳನ್ನು ನೋಡಬೇಕು. ಜವಾಬ್ದಾರಿ ಬೇಡ, ಶಿಸ್ತು ಬೇಡ, ಯಾವಾಗಲೋ ಊಟ, ಯಾವಾಗಲೋ ನಿದ್ದೆ, ಯಾವಾಗಲೂ ಸ್ನಾನ, ವೇಳಾಪಟ್ಟಿ ತಯಾರಿಸಿ, ಅದರಂತೆ ನಡೆಯಲು ಯಾರಿಗೂ ಇಷ್ಟವಿಲ್ಲ. ಹೇಗೋ ಖುಷಿ ಪಟ್ಟರೆ ಆಯಿತು. ಬೇಕಿರಲಿ, ಬೇಡದಿರಲಿ, ಭೋಗವಸ್ತುಗಳನ್ನು ಬಳಸಬೇಕು. ನೀತಿ ನಿಯಮಗಳ ಪಾಲನೆ ಬೇಡ, ಸ್ವೇಚ್ಛಾಚಾರದ ಜೀವನ ಶೈಲಿಯನ್ನು ಬಹುತೇಕ ಮಂದಿ ಇಷ್ಟಪಡುತ್ತಿದ್ದಾರೆ. ಹಣ–ಅಧಿಕಾ–ಸ್ಥಾನಮಾನಗಳನ್ನು ಬೇಗ ಪಡೆಯುವ, ಎಲ್ಲರಿಗಿಂತ ಮುಂಚೆ ಹಾಗೂ ಹೆಚ್ಚಾಗಿ ಪಡೆಯುವ ಧಾವಂತದಲ್ಲಿದ್ದಾರೆ. ಗುರಿ ಮುಖ್ಯವೇ ಹೊರತು ಮಾರ್ಗವಲ್ಲ ಎಂಬ ಧೋರಣೆ ಎಲ್ಲರಲ್ಲಿ ಕಂಡು ಬರುತ್ತಿದೆ. ಲೈಂಗಿಕ ಸ್ವೇಚ್ಛಾಚಾರ ಶೇ.50 ರಷ್ಟು ಜನರಲ್ಲಿ ಕಂಡು ಬರುತ್ತಿದೆ. ಮದುವೆಯಾಗದೇ ಗಂಡ–ಹೆಂಡಿರಂತೆ ಬದುಕಲು ಯುವ ಜನ ಆಸೆಪಡುತ್ತಾರೆ.

ಈ ನಾಲ್ಕು ಅಂಶಗಳ ಜೊತೆಗೆ ಆಜನ್ಮ ನ್ಯೂನ್ಯತೆಗಳು, ಅನುವಂಶೀಯತೆ, ನೇರಪೆಟ್ಟು ಗಾಯಗಳು, ಪರಿಸರ ಮಾಲಿನ್ಯಗಳು ನಮ್ಮ ಅನಾರೋಗ್ಯಕ್ಕೆ ತಮ್ಮ ಕಾಣಿಕೆಯನ್ನು ಸಲ್ಲಿಸುತ್ತಿವೆ.

ಚಿಕಿತ್ಸೆ ಗುಣಮಾಡುವುದಕ್ಕೆ ಆದ್ಯತೆ. ನಿವಾರಣೆ ಮುಂಜಾಗ್ರತಾ ಕ್ರಮಗಳಿಗೆ ಆದ್ಯತೆ ಇಲ್ಲ.

ವೈದ್ಯ ಕ್ಷೇತ್ರದಲ್ಲಿ ಇಂದು ಖಾಸಗೀ ವೈದ್ಯರು ಮತ್ತು ಖಾಸಗೀ ಆಸ್ಪತ್ರೆಗಳದೇ ದರ್ಬಾರು. ಲಕ್ಷಗಟ್ಟಲೆ, ಕೋಟಿಗಟ್ಟಲೆ ಹಣ ಚೆಲ್ಲಿ ವೈದ್ಯ ಡಿಗ್ರಿಗಳನ್ನು ಪಡೆದು, ಹೈಟೆಕ್ ಆಸ್ಪತ್ರೆಗಳನ್ನು ನಿರ್ಮಿಸಿ, ಹೆಚ್ಚು ಲಾಭ ಮಾಡುವುದೇ ಖಾಸಗೀ ವೈದ್ಯರು– ಆಸ್ಪತ್ರೆಗಳ ಗುರಿ **"ಕಾಯಿಲೆ ಬರಿಸಿಕೊಳ್ಳಿ ಆಮೇಲೆ ನಮ್ಮಲ್ಲಿಗೆ ಬನ್ನಿ, 'ಸ್ಟೇಟ್ ಆಫ್ ದಿ ಆರ್ಟ್' ಸರ್ವಿಸ್ ನೀಡುತ್ತೇವೆ ಪಂಚತಾರಾ ಹೋಟೆಲುಗಳನ್ನು ಮೀರಿಸುವ ಸೌಲಭ್ಯವನ್ನು ನೀಡುತ್ತೇವೆ"** ಎನ್ನುತ್ತಾರೆ. ಚಿಕಿತ್ಸೆ (Curative service) ಗೆ ಮಹತ್ವ. (ರೋಗ ತಡೆಗಟ್ಟುವಿಕೆ/ಪ್ರತಿಭಂದಕ್ಕೆ (Prevention) ಗೆ ಯಾವ ಗಮನವೂ ಇಲ್ಲ. ಇಂದು ಖಾಸಗೀಕ್ಷೇತ್ರದ ವೈದ್ಯ ಸೌಲಭ್ಯ ಬಹಳ ತುಟ್ಟಿ, ಸರ್ಕಾರಿ ವೈದ್ಯರನ್ನು ಸರ್ಕಾರಿ ಆಸ್ಪತ್ರೆಗಳು ಹಣ, ಮೂಲ ಸೌಲಭ್ಯಗಳು– ನುರಿತ ತಜ್ಞರ ಕೊರತೆಯಿಂದ, ಭ್ರಷ್ಟಾಚಾರ, ದುರ್ಬಲ ಆಡಳಿತದಿಂದ ಯಾರಿಗೂ ಬೇಡವಾಗಿವೆ. ಅತ್ಯಂತ ಬಡ ರೋಗಿಗಳು ಅನಿವಾರ್ಯವಾಗಿ ಈ ಆಸ್ಪತ್ರೆಗಳಿಗೆ ಹೋಗಿ ನರಕ ದರ್ಶನ ಮಾಡುತ್ತಾರೆ.

ಆರೋಗ್ಯವರ್ಧನೆ – ರಕ್ಷಣೆ ನಿಮ್ಮ ಕೈಯಲ್ಲೇ

ಸರ್ಕಾರ, ಖಾಸಗೀ ವೈದ್ಯ ಕ್ಷೇತ್ರ ಜನರ ಆರೋಗ್ಯ ರಕ್ಷಣೆ ಮಾಡುವಲ್ಲಿ ವಿಫಲವಾಗಿದೆ. ಬಜೆಟ್‌ನ ಶೇಕಡಾ 1.5 ರಷ್ಟು ಹಣವನ್ನು ಆರೋಗ್ಯಕ್ಕೆ ಖರ್ಚು ಮಾಡುವ ಸರ್ಕಾರವಾಗಲೀ, ಹಣದ ಲಾಭಮಾಡಲು ಹೊರಟಿರುವ ಖಾಸಗೀ ಆಸ್ಪತ್ರೆಗಳಾಗಲೀ, ಅನಾರೋಗ್ಯ ನಿವಾರಣೆಗೆ– ಆರೋಗ್ಯ ವರ್ಧನೆಗೆ ದೃಢಮನಸ್ಸು ಮಾಡುತ್ತವೆ ಎಂಬುದು ಮರೀಚಿಕೆ. ಆದ್ದರಿಂದ ನಾವು –ನೀವೇ ನಮ್ಮ ಆರೋಗ್ಯ ರಕ್ಷಣೆಗೆ ಮುಂದಾಗಬೇಕು. ಶೇಕಡಾ 80 ರಷ್ಟು ಕಾಯಿಲೆಗಳು ಬಂದಂತೆ ತಡೆಯಬಹುದು ಎನ್ನುತ್ತದೆ ವಿಶ್ವ ಆರೋಗ್ಯ ಸಂಸ್ಥೆ. ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ. ನಮ್ಮ ಮಕ್ಕಳು ಆರೋಗ್ಯವಾಗಿರಲು ನಾವೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ನಾವು ಸಮರ್ಥರಾಗಲು ನೆಮ್ಮದಿಯ ಜೀವನ ಮಾಡಲು, ನಾವು ಆರೋಗ್ಯವಾಗಿರಲೇ ಬೇಕು ಈ ಸೂತ್ರಗಳನ್ನು ಪಾಲಿಸಿ.

1. **ಸರಿಯಾದ ಆಹಾರವನ್ನು ಸರಿಯಾದ ರೀತಿಯಲ್ಲಿ ಸೇವಿಸಿ:** ಹೆಚ್ಚು ಹಣ್ಣುಗಳು, ಬೇಳೆಕಾಳುಗಳು, ನೀರಿನಲ್ಲಿ ಮತ್ತು ಹಬೆಯಲ್ಲಿ ಬೆಂದ ಪದಾರ್ಥಗಳನ್ನು, ವೇಳೆಗೆ ಸರಿಯಾಗಿ ಸೇವಿಸಿ. ಕರಿದ ಪದಾರ್ಥಗಳು, ಮಾಂಸಾಹಾರವನ್ನು ಕಡಿಮೆ ಸೇವಿಸಿ ಸಿದ್ಧಪಡಿಸಿದ ಆಹಾರಗಳು, ರಸ್ತೆಬದಿಯ ಆಹಾರಗಳು, ಆಲ್ಕೋಹಾಲನ್ನು ಸೇವಿಸಲೇ ಬೇಡಿ. ನಿಮ್ಮ ಅಡುಗೆಮನೆ–ಊಟದ ಮನೆಯನ್ನು ಸ್ವಚ್ಛವಾಗಿಡಿ. ಚೆನ್ನಾಗಿ ಕೈತೊಳೆದು ಆಹಾರವನ್ನು ಬಡಿಸಿ ಮತ್ತು ಸೇವಿಸಿ. ಆ ವೇಳೆಯಲ್ಲಿ, ಎಲ್ಲೆಂದರಲ್ಲಿ ಆಹಾರವನ್ನು ಸೇವಿಸಬೇಡಿ. ಅತಿಯಾಗಿ ತಿನ್ನಬೇಡಿ. ನಿಮ್ಮ ತೂಕ ಹೆಚ್ಚದಿರಲಿ.
2. **ವ್ಯಾಯಾಮ–**ಚಟುವಟಿಕೆ. ಆಟಗಳು ಸಕೀಯ ಜೀವನ ಶೈಲಿ: ದಿನಕ್ಕೆ ಒಂದು ಗಂಟೆಕಾಲ ಶರೀರಕ್ಕೆ ವ್ಯಾಯಾಮವಾಗುವಂತಹ ಕೆಲಸ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಿ, ನಡಿಗೆ, ಓಟ, ಈಜು, ಸ್ಕಿಪ್ಪಿಂಗ್, ಬಯಲಲ್ಲಿ ಆಡುವ ಆಟಗಳು, ಮೈ ಬಗ್ಗಿಸಿ ಮಾಡುವ ಕೆಲಸಗಳು ಈ ದಿಸೆಯಲ್ಲಿ ಸಹಕಾರಿ.
3. **ಸ್ವಚ್ಛತೆ:** ನಿತ್ಯ ಸ್ನಾನ, ದಿನಕ್ಕೆರಡು ಸಲ ಬಾಯಿ–ಹಲ್ಲು ಸ್ವಚ್ಛ ಮಾಡುವುದು. ನಿತ್ಯ ಒಳ ಉಡುಪುಗಳನ್ನು ಬದಲಿಸಿ ತೊಡುವುದು, ಮನೆಯ ಒಳಗೆ–ಹೊರಗೆ ವಾಸಿಸುವ ಬೀದಿ–ಊರನ್ನು ಸ್ವಚ್ಛವಾಗಿಡಿ. ಶೌಚಾಲಯದಲ್ಲೇ ಮಲ ಮೂತ್ರ ವಿಸರ್ಜನೆ ಮಾಡಿ. ನೊಣ, ಸೊಳ್ಳೆ, ಜಿರಳೆ, ಇಲಿ, ಹೆಗ್ಗಣ, ಹಂದಿಗಳನ್ನು ನಿವಾರಿಸಿ. ಸಾಕು ಪ್ರಾಣಿಗಳನ್ನು ದೂರವಿಡಿ. ಕೆಲಸ ಮಾಡುವ ಸ್ಥಳವೂ ಚೊಕ್ಕಟವಾಗಿರಲಿ. ದಿನಕ್ಕೆ ಮೂರು ನಾಲ್ಕು ಸಲ ನಿಮ್ಮ ಕೈ ಕಾಲುಗಳನ್ನು ಸ್ವಚ್ಛಮಾಡಿ.
4. **ಮಾನಸಿಕ ನೆಮ್ಮದಿ:** ಲಭ್ಯವಿರುವ ಸಂಪನ್ಮೂಲದಲ್ಲೇ, ಸರಳ ಹಾಗೂ ತೃಪ್ತ ಜೀವನ ಮಾಡಿ. ನಿಮ್ಮ ಆಸೆ ಆಕಾಂಕ್ಷೆ– ನಿರೀಕ್ಷೆಗಳನ್ನು ತಗ್ಗಿಸಿ. ಎಲ್ಲರೊಡನೆ ಸ್ನೇಹ ಪ್ರೀತಿಯಿಂದ ಇರಿ. ಯಾರನ್ನೂ ದ್ವೇಶ ಮಾಡಬೇಡಿ. ಹೀನಾಯ ತಿರಸ್ಕಾರ ಮಾಡಬೇಡಿ. ಯಾರೊಂದಿಗೆ ಬದುಕಬೇಕೋ ವ್ಯವಹರಿಸಬೇಕೋ, ಕೂಡಿ ಕೆಲಸ ಮಾಡಬೇಕೋ ಅವರೊಂದಿಗೆ ಸಹಕರಿಸಿ, ಗೌರವ ತೋರಿಸಿ. ಇನ್ನೊಬ್ಬರಿಗೆ ಮೋಸ, ವಂಚನೆ ಮಾಡಬೇಡಿ, ಮೂಢ ನಂಬಿಕೆ, ಕಂದಾಚಾರಗಳನ್ನು ಬಿಡಿ, ಆರೋಗ್ಯಕರ ಹವ್ಯಾಸಗಳನ್ನು (ಸಂಗೀತ, ಸಾಹಿತ್ಯ, ಯೋಗ, ಧ್ಯಾನ–ಕ್ರೀಡೆಗಳು) ಬೆಳೆಸಿಕೊಳ್ಳಿ, ಧರ್ಮ, ಅದ್ಯಾತ್ಮದಲ್ಲಿ ಆಸಕ್ತಿ ಬೆಳೆಸಿಕೊಳ್ಳಿ, ಕಷ್ಟ– ಸಮಸ್ಯೆಗಳು ಬಂದಾಗ, ಮನಸ್ಸಿನಲ್ಲಿ ದೇವರ ಧ್ಯಾನ ಪ್ರಾರ್ಥನೆಮಾಡಿ. ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಿ.

ಪುಸ್ತಕ ಪರಿಚಯ:

ಜನಾರೋಗ್ಯದ ವಿಷಯದಲ್ಲಿ ಹೊಸ ಪುಸ್ತಕಗಳು

ಲೇಖಕರು:ಡಾಪ್ರಕಾಶ್ ರಾವ್
(ಜನಾರೋಗ್ಯ ಆಂದೋಲನ–ಕರ್ನಾಟಕದ ಅಧ್ಯಕ್ಷರು)

ಕನ್ನಡ ಪುಸ್ತಕ ಪ್ರಾಧಿಕಾರವು ಮತ್ತು ವೈದ್ಯಕೀಯ ವಿಜ್ಞಾನ ಸಾಹಿತ್ಯ ಮಾಲೆಯ ಯೋಜನೆಯ ಅಂಗವಾಗಿ ವೈದ್ಯಕೀಯ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಗ್ರಂಥಗಳು ಲಭ್ಯವಿಲ್ಲದೆ ಇರುವಂತಹ ಕೊರತೆಯನ್ನು ನೀಗಿಸಲು ಡಾ. ಪ್ರಕಾಶ್ ಸಿ. ರಾವ್ ರವರ ಮೂರು ಪುಸ್ತಕಗಳನ್ನು

ಪ್ರಕಟಿಸಿದೆ. ಜನಾರೋಗ್ಯ ಆಂದೋಲನ – ಕರ್ನಾಟಕವು ಡಾ. ಪ್ರಕಾಶ್ ಸಿ. ರಾವ್ ಅವರಿಗೆ ಅಭಿನಂದಿಸುತ್ತದೆ. ಈ ಪುಸ್ತಕ ಕಿರು ಪರಿಚಯವನ್ನು ಈ ಕೆಳಗೆ ಕೊಡಲಾಗಿದೆ. ಜನಪರ ವೈದ್ಯಕೀಯ ಸಾಹಿತ್ಯವನ್ನು ಪ್ರೋತ್ಸಾಹಿಸುವ ಕನ್ನಡ ವೈದ್ಯಸಾಹಿತ್ಯ ಪರಿಷತ್ತು ಮತ್ತು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಜನಾರೋಗ್ಯ ಆಂದೋಲನ – ಕರ್ನಾಟಕದ ಅಭಿನಂದನೆಗಳು ಹಾಗೂ ಜನರ ಪರವಾಗಿ ಕೃತಜ್ಞತೆಗಳು

1. ಜನಾರೋಗ್ಯಕ್ಕೆ ರೋಗಗ್ರಸ್ತ ಔಷಧಿಗಳೇ:

ಇಂದು ಔಷಧಿಗಳು ಜನರ ಜೀವನದ ಭಾಗವೇ ಆಗಿವೆ. ಔಷಧಿಗಳು ಅಪಾಯಕಾರಿಯೂ ಇವೆ, ಉಪಯುಕ್ತವಾಗಿಯೂ ಇವೆ. ಔಷಧಿ ಚಿಕಿತ್ಸೆಯಲ್ಲಿ ವೈದ್ಯರು ಸಮಂಜಸ ಮತ್ತು ನ್ಯಾಯಯುತ ಔಷಧಿ ಚಿಕಿತ್ಸೆಯನ್ನು ಪಾಲಿಸಿ ರೋಗಿಗಳಿಗೆ ಸಹಾಯಮಾಡಬಹುದು ಅಥವಾ ಔಷಧಿ ಕಂಪನಿಗಳ ಬಲಾಢ್ಯಕ್ಕೆ ಬಲಿಯಾಗಿ ಅತೀ ಬೆಲೆ ಬಾಳುವ ಅಸಮಂಜಸ ಮತ್ತು ಹಾನಿಕಾರಕ ಔಷಧಿಗಳನ್ನು ಕೊಟ್ಟು ರೋಗಿಗಳನ್ನು ಸುಲಿಯಬಹುದು.

ಜನಸಾಮಾನ್ಯರಿಗೆ ಔಷಧಿ ಕ್ಷೇತ್ರದ ಒಳನೋಟವನ್ನು ಈ ಪುಸ್ತಕ ಒದಗಿಸುತ್ತದೆ.

2. ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿ:

ಕುಟುಂಬ ವೈದ್ಯರಾಗಿ, ಆಪ್ತ ಸಲಹೆಗಾರರಾಗಿ, ಲೇಖಕರು ತಮ್ಮ ವೃತ್ತಿ ಅನುಭವದಲ್ಲಿನ ಸತ್ಯ ಹಾಗೂ ಸ್ವಾರಸ್ಯಪೂರ್ಣ ಘಟನೆಗಳನ್ನು ಆಧರಿಸಿ ಈ ಪುಸ್ತಕ ರಚಿಸಿದ್ದಾರೆ. 'ನಿಮ್ಮ ಆರೋಗ್ಯ – ನಿಮ್ಮ ಕೈಯಲ್ಲಿ' ಪುಸ್ತಕದಲ್ಲಿ ವೈದ್ಯ ವೃತ್ತಿಯ ಹತ್ತು – ಹಲವು ಆಯಾಮಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ನೋವಿದ್ದಾಗ ಮಾತ್ರೆ ನುಂಗಿ ನಿರಾಳವಾಗಿ ಬಿಡುವ ಅನೇಕರಿಗೆ ಈ ಪುಸ್ತಕ ಎಚ್ಚರಿಕೆ ನೀಡುತ್ತದೆ. ವೈದ್ಯರನ್ನು ಬಲವಂತಪಡಿಸಿ ಇಂಜಕ್ಷನ್ ಹಾಕಿಸಿಕೊಳ್ಳುವ ರೂಢಿಯಿರುವವರನ್ನು ಯೋಚಿಸುವಂತೆ ಮಾಡುತ್ತವೆ ಇಲ್ಲಿನ ಲೇಖನಗಳು. ರೋಗಿಗಳ ಮನೋಧರ್ಮ ಹೇಗಿರುತ್ತದೆಂಬುದರ ಬಗ್ಗೆ ಸೊಗಸಾಗಿ ತಿಳಿಸಿದ್ದಾರೆ. ಅಲ್ಲದೇ ಕೆಲವು ಘಟನೆಗಳು ಮತ್ತು ರೋಗಿಗಳ ಮಾನಸಿಕ ಸ್ಥಿತಿ ವೈದ್ಯರಿಗೆ ಹೇಗೆ ಸವಾಲಾಗುತ್ತವೆ, ಮಾನಸಿಕ ಕಾಯಿಲೆಗೀಡು ಮಾಡುವುದರ ಕುರಿತು ಬರೆದು ವೈದ್ಯರ ಕರ್ತವ್ಯವನ್ನು ನೆನಪಿಸುತ್ತಾರೆ.

3. ಜನಾರೋಗ್ಯದ ಸವಾಲುಗಳು:

'ಜನಾರೋಗ್ಯದ ಸವಾಲುಗಳು' ಪುಸ್ತಕ ವೈದ್ಯರ ಕಣ್ಣು ಹಾಗೂ ಮನಸ್ಸು ತೆರೆಸುವಂತಿದೆ. ವೈದ್ಯ ವೃತ್ತಿ ವ್ಯಾಪಾರೀಕರಣಗೊಂಡಿರುವ ಇಂದಿನ ದಿನಗಳಲ್ಲಿ ಆರೋಗ್ಯ ಕ್ಷೇತ್ರ ಮತ್ತು ಔಷಧಿಗಳ ಜಗತ್ತಿನ ಹಲವು ಆಯಾಮಗಳ ಕುರಿತು ಈ ಪುಸ್ತಕ ಓದುಗರೆದುರು ಅನೇಕ ವಿಷಯಗಳನ್ನು ಅನಾವರಣಗೊಳಿಸುತ್ತಾ ಹೋಗುತ್ತದೆ. ವೃತ್ತಿಯಲ್ಲಿ ನಿರತರಾದ ಪ್ರತಿಯೊಂದು ವೈದ್ಯರೂ ಓದಲೇಬೇಕಾದಂತಹ ಕೃತಿಯಿದು. ವೈದ್ಯರು ಮಾತ್ರವಲ್ಲ ಜನಸಾಮಾನ್ಯರು ಈ ವಿಷಯಗಳನ್ನು ಅರಿತುಕೊಂಡಲ್ಲಿ ಒಳಿತು. ಸರ್ಕಾರದ ನೀತಿಗಳನ್ನು ರೂಪಿಸುವವರು, ಮಂತ್ರಿಗಳು, ಅಧಿಕಾರ ವರ್ಗದವರೂ ಈ ಪುಸ್ತಕ ಓದಿದಲ್ಲಿ ನೀತಿ ನಿಯಮಾವಳಿ ರೂಪಿಸುವಾಗ ಬದಲಾವಣೆ ತರಲು ಸಾಧ್ಯವಾಗಬಹುದು.

ಜನಾರೋಗ್ಯ ಆಂದೋಲನ-ಕರ್ನಾಟಕದ ರಾಜ್ಯ ಸಂಚಾಲನಾ ಸಮಿತಿ

1. ಡಾ.ಪ್ರಕಾಶ್ ರಾವ್ : ಅಧ್ಯಕ್ಷರು,
2. ಡಾ.ಗೋಪಾಲ ದಾಬಡೆ : (ಜನಾರೋಗ್ಯ ಆಂದೋಲನ–ಕರ್ನಾಟಕ) ಉತ್ತರ ಕರ್ನಾಟಕ ವೇದಿಕೆಯ ಸಲಹೆಗಾರರು
3. ಇ.ಬಸವರಾಜ್ : ಸಹ–ಸಂಚಾಲಕರು
4. ಇ.ಪ್ರೇಮ್‌ದಾಸ್ : ಸಹ–ಸಂಚಾಲಕರು
5. ಕೆ.ಬಿ.ಓಬಳೇಶ್ : ಸಹ–ಸಂಚಾಲಕರು
6. ಆಶಾ ಕಿಲಾರು : ಸಹ–ಸಂಚಾಲಕರು
7. ಪ್ರಭಾ ನಾರಾಯಣಪ್ಪ : ಸಹ–ಸಂಚಾಲಕರು
8. ಡಾ.ಅಖಿಲಾ ವಾಸನ್ : ಸಹ–ಸಂಚಾಲಕರು
9. ಡಾ.ಉಪೇಂದ್ರ ಬೋಜಾನಿ : ಸಹ–ಸಂಚಾಲಕರು
10. ಅಭಯ್‌ಕುಮಾರ್ : ಸಹ– ಸಂಚಾಲಕರು
11. ಕರಿಬಸಪ್ಪ : ಜನಾರೋಗ್ಯ ಆಂದೋಲನ–ಕರ್ನಾಟಕ, ಉತ್ತರ ಕರ್ನಾಟಕ ವೇದಿಕೆಯ ಸಹ ಸಂಚಾಲಕರು
12. ಸ್ವರ್ಣಭಟ್ : ಜನಾರೋಗ್ಯ ಆಂದೋಲನ–ಕರ್ನಾಟಕ ಉತ್ತರ ಕರ್ನಾಟಕ ವೇದಿಕೆಯ ಸಹ ಸಂಚಾಲಕರು.

ಜನಾರೋಗ್ಯ ಆಂದೋಲನ-ಕರ್ನಾಟಕದ ವಾರ್ತಾ ಪತ್ರಿಕೆ

ಜನಾರೋಗ್ಯ ಆಂದೋಲನ ವಾರ್ತಾ ಪತ್ರಿಕೆಯನ್ನು ಸಮರ್ಥವಾಗಿ ಮುಂದುವರೆಸಲು ಹಾಗೂ ಎಲ್ಲಾ ಗ್ರಾಮೀಣ ಹಾಗೂ ನಗರ ವಿಭಾಗದ ಬಡವರ ಆರೋಗ್ಯ ಸಮಸ್ಯೆ/ಸವಾಲುಗಳನ್ನು ಎದುರಿಸಲು ತಮ್ಮೆಲ್ಲರ ಸೂಕ್ತ ಸಲಹೆ ಸಹಕಾರ ಅತ್ಯಗತ್ಯವಾಗಿ ಬೇಕಾಗಿದೆ. ತಾವೆಲ್ಲರೂ ಈ ಪ್ರಕ್ರಯೆಯಲ್ಲಿ ಭಾಗವಹಿಸಿ ಜನಸಮುದಾಯಗಳು ಎದುರಿಸುತ್ತಿರುವ ಆರೋಗ್ಯ ನಿರಾಕರಣೆಗಳನ್ನು ಮತ್ತು ಸರ್ಕಾರಗಳು ನಿರ್ಲಕ್ಷಿಸುತ್ತಿರುವ ಸಾರ್ವಜನಿಕ ಆರೋಗ್ಯ ಕ್ಷೇತ್ರವನ್ನು ಬಲಗೊಳಿಸಬಹುದು. ಆದ್ದರಿಂದ ನಾವು ನೀವು ಕೂಡಿ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಇದೊಂದು ಬಹುಜನರ ವೇದಿಕೆಯಾಗಿದೆ.

ನಿಮ್ಮ ಅನಿಸಿಕೆಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಹುದು
ಜನಾರೋಗ್ಯ ಆಂದೋಲನ ಕರ್ನಾಟಕ.
C/O ಸಮುದಾಯ ಆರೋಗ್ಯ ಕೋಶ, ನಂ.85/2, ಮಾರುತಿ ನಗರ, 1ನೇ ಮುಖ್ಯ ರಸ್ತೆ, ಮಡಿವಾಳ,
ಬೆಂಗಳೂರು – 560068.
ಫೋನ್ : 080–25531518 ಫ್ಯಾಕ್ಸ್ : 080–25525372 Email : jaaksecretariat@gmail.com

ಪುಟವಿನ್ಯಾಸ ಮತ್ತು ದಾಖಲೀಕರಣ
ಸಮುದಾಯ ಆರೋಗ್ಯ ಕೋಶ, ಬೆಂಗಳೂರು

ಕೃಪೆ ಮತ್ತು ಪ್ರಕಾಶನ
ಸಮುದಾಯ ಆರೋಗ್ಯ ಕೋಶ, ನಂ. 85/2, ಮಾರುತಿ ನಗರ, 1ನೇ ಮುಖ್ಯ ರಸ್ಥೆ, ಮಡಿವಾಳ,
ಬೆಂಗಳೂರು – 560068 ಫೋನ್ : 080–25531518 ಫ್ಯಾಕ್ಸ್ : 080–25525372